೧೫೩
೧೫೪

ಸಂಕ್ರಮಣ

ಸಂಪುಟ ೨೦ : ಸಂಚಿಕೆ ೫-೬ ಅಕ್ಟೋಬರ-ನವಂಬರ ೧೯೮೪

ಅನಂತಮೂರ್ತಿ/ಪೋಲಂಕಿ/ಕಾಡನಕುಪ್ಪೆ

ಗೋಪಾಲಗೌಡ, ಅನಸ್ಥೆ, ಸಂಸ್ಕಾರ ಇತ್ಯಾದಿ

ಎನ್. ಎಸ್. ರಘುನಾಥ

ಚದುರಂಗರ 'ವೈಶಾಖ' ಕಾದಂಬರಿಯ ವಿಶ್ಲೇಷಣೆ

ಬಸವರಾಜ ಸಬರದ

ಕುವೆಂಪು ನಾಟಕಗಳಲ್ಲಿ ದಲಿತ ಪ್ರಜ್ಞೆ ?

DEVU PATTAR
GUTTIPETH,
SHAHAPUR-585223

ಸ. ಉಷಾ

ಒಂದು ಜನಪದ ಗೀತೆಯ ವಿಶ್ಲೇಷಣೆ

ಪ್ರಾ। ನರಹರ ಕುರುಂದಕರ

ಮನುಸ್ಮೃತಿ : ಕೆಲವು ವಿಚಾರಗಳು

ಕೆ. ಆರ್. ದುರ್ಗಾದಾಸ್, ಶ್ರೀ ಕೃಷ್ಣ ಚೆನ್ನಂಗೋಡ್, ಶಂಕರಗೌಡ ಸಾತ್ಮಾರ,
ದೇಶಪಾಂಡೆ ಸುಬ್ಬರಾಯ, ದ. ರಾ ನಾಗೇಶ್, ಸಿ. ವಿ. ಪಾಟೀಲ,
ಎಂ. ಭೀಮಭಟ್ಟ, ಎಂ. ಸಿದ್ದಯ್ಯ, ಆಲ್ಮನೆ ರಘುಪತಿ,
ಬರಗೂರು ರಾಮಚಂದ್ರಪ್ಪ, ಎಚ್. ಎಸ್. ಭೀಮನಗೌಡರ
ಇವರ ಕವನಗಳು

ಅಪರಾಧಿ : ಹಮೀದ್ ಜಬೀನ್ ಅವರ ಕತೆ

ಚಂಪಾ : ಸಂಪಾದಕೀಯ

ಗಾಂಧಿವಾದ ಮತ್ತು ಗಾಂಧಿಗಳು

ಸಂಪಾದಕ : ಚಂದ್ರಶೇಖರ ಪಾಟೀಲ

ಸಂಕ್ರಮಣ

ಮಾಸಿಕ ಸಾಹಿತ್ಯ ಸಂಕಲನ
ಸಂ : ಚಂದ್ರಶೇಖರ ಪಾಟೀಲ

SANKRAMANA 153-154 A Monthly in Kannada
October–November 1984 Vol XX Nos. 5-6
Editor : **Chandrashekhar Patil**
Sankramana Prakashana Dharwad 580008 Phone : 80509

ಮುದ್ರಣ : ರಾಜಶ್ರೀ ಪ್ರಿಂಟಿಂಗ್ ಪ್ರೆಸ್, ಧಾರವಾಡ-೧

ಲೇಖಕರಿಗೆ ಸೂಚನೆ :

ಸ್ವಚ್ಛ ಬರಹದ ಅಥವಾ ಟೈಪು ಮಾಡಿದ ಲೇಖನಗಳಿಗೆ ಪ್ರಾಶಸ್ತ್ಯ, ಉತ್ತರ ಬಯಸುವವರು ಡಬಲ್ ಕಾರ್ಡು ಬರೆಯುಬೇಕು. "ಸಂಕ್ರಮಣ"ದಲ್ಲಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆ ಕಳಿಸುವವರು ಸಂಚಿಕೆ ಹೊರಬಂದ ೧೦ ದಿನದೊಳಗಾಗಿ ಕಳಿಸಬೇಕು.

ಚಂದಾದಾರರಿಗೆ ಸೂಚನೆ :

ಎಂ.ಓ./ಡಿ.ಡಿ. ಮೂಲಕ ಕಳಿಸಬೇಕು. ಅಥವಾ Syndicate Bank K. U. C. Branch Dharwad–3 ಈ ಶಾಖೆಯ S. B. A/c. No. 8823 (Editor Sankramana) ಖಾತೆಗೆ ಚಂದಾ ಹಣವನ್ನು ಎಂ.ಟಿ.ಮಾಡಿ ನಮ್ಮ ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು. ಚೆಕ್ ಕಳಿಸುವವರು ರೂ. ೨ ಹೆಚ್ಚಿಗೆ ಸೇರಿಸಬೇಕು.

ವಾರ್ಷಿಕ ಚಂದಾ : ರೂ. ೩೦.
೪ ವರ್ಷಗಳ ಮುಂಗಡ ಚಂದಾ : ರೂ. ೧೦೦ (ಒಂದೇ ಕಂತು)
ಆಜೀವ ಚಂದಾ : ರೂ. ೨೫೦ (ಒಂದೇ ಕಂತು)

ವಿಳಾಸ : **ಸಂಪಾದಕ, ಸಂಕ್ರಮಣ**
ಧಾರವಾಡ ೫೮೦೦೦೮ ಕರ್ನಾಟಕ
ಫೋನು : ೮೦೫೦೯

ಒಳಗಿನ ಪುಟಗಳಲ್ಲಿ

ಗಾಂಧಿವಾದ ಮತ್ತು ಗಾಂಧಿಗಳು — ಚಂದ್ರಶೇಖರ ಪಾಟೀಲ ೩
ಪುನರ್ಜನ್ಮ (ಕವನ) — ಎಚ್. ಎಸ್. ಭೀಮನಗೌಡರ ೭
ಗೋಪಾಲಗೌಡ, ಅವಸ್ಥೆ, ಸಂಸ್ಕಾರ ಮುಂ. — ಅನಂತಮೂರ್ತಿ/ಪೋಲಂಕಿ/ ಕಾಡನಕುಪ್ಪೆ ೧೧
'ದರುಮನಹಳ್ಳಿಯ ಲಗ್ಗೆ ಚಂಡುಗಳು'— 'ವೈಶಾಖ' ಕಾದಂಬರಿಯ ವಿಶ್ಲೇಷಣೆ — ಎನ್. ಎಸ್. ರಘುನಾಥ ೧೭
ಹುಲಿಗೆಮ್ಮ ನಿನ್ನಾಲ್ಕುಥೋ (ಕವನ) — ಕೆ. ಆರ್. ದುರ್ಗಾದಾಸ್ ೩೩
ನೂಪುರೇ ತ್ವಭಿಜಾನಾಮಿ (ಕವನ) — ಶ್ರೀಕೃಷ್ಣ ಚೆನ್ನಂಗೋಡ್ ೩೪
ಅಪರಾಧಿ (ಕತೆ) — ಹಮೀದ್ ಜಬೀನ್ ೩೫
ಬೇರುಗಳು (ಕವನ) — ಶಂಕರಗೌಡ ಸಾತ್ಮಾರ ೪೦
ನಾಲ್ಕು ಕವನಗಳು — ದೇಶಪಾಂಡೆ ಸುಬ್ಬರಾಯ ೪೧
ಕುವೆಂಪು ನಾಟಕಗಳಲ್ಲಿ ದಲಿತ ಪ್ರಜ್ಞೆ ? — ಬಸವರಾಜ ಸಬರದ ೪೫
ಎರಡು ಕವನಗಳು — ದ. ರಾ. ನಾಗೇಶ್ ೫೨
ಒಂದು ಜನಪದ ಗೀತೆಯ ವಿಶ್ಲೇಷಣೆ — ಸ. ಉಷಾ ೫೩
ವಿದಾಯ (ಕವನ) — ಸಿ. ವಿ. ಪಾಟೀಲ ೫೮
ನನಗೊಂದು ಹೊಸ ವಿಳಾಸ (ಕವನ) — ಎಂ. ಭೀಮಭಟ್ಟ ೬೦
೧೨ ಕವನ ಸಂಕಲನಗಳು (ಪರಿಚಯ) — ಆರ್. ವಿ. ಭಂಡಾರಿ/ಸತೀಶ ಕುಲ್ಕರ್ಣಿ ೬೧
ಗಾಂಧಿ ಮತ್ತು ಸಾಹುಕಾರ (ಕವನ) — ಎಂ. ಸಿದ್ದಯ್ಯ ೬೨
ಮೂರು ಜಾನಪದ ಸಾಹಿತ್ಯ ಕೃತಿಗಳು (ವಿಮರ್ಶೆ) — ಮಹಿಮ/ತಿಪ್ಪೇಸ್ವಾಮಿ ೬೩
ಪ್ರತಿಮೆ (ಕವನ) — ಆಲ್ಮನೆ ರಘುಪತಿ ೬೯
ನಾಲ್ಕು ಕವನಗಳು — ಬರಗೂರು ರಾಮಚಂದ್ರಪ್ಪ ೮೦
ಮನುಸ್ಮೃತಿ : ಕೆಲವು ವಿಚಾರಗಳು — ಪ್ರಾ. ನರಹರ ಕುರುಂದಕರ ೮೪

ಎರಡು ಟಿಪ್ಪಣಿಗಳು

೧. ಸಂ : ೧೫೧–೧೫೨ರಲ್ಲಿ, ಪ್ರಕಟವಾದ ಡಾ। ಆರ್ಕೆ, ಮಣಿಪಾಲರ 'ಮಹಿಳಾ ಪ್ರಜ್ಞೆ ಮತ್ತು ಕಾವ್ಯ' ಸಂಕ್ರಮಣಕ್ಕೆ ರಿವ್ಯೂಗೆಂದು ಬಂದ ಕೆಲ ಸಂಕಲನಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಬರೆಯಲಾದ ಒಂದು ವಿಶೇಷ ಲೇಖನವೇ ಹೊರತು, ಸಮಕಾಲೀನ ಮಹಿಳಾ ಕಾವ್ಯದ 'ಸಮಗ್ರ' ಸಮೀಕ್ಷೆಯಲ್ಲ.

೨. ಈ ಸಂಚಿಕೆಯಲ್ಲಿ ಪು. ೧೭ ರಿಂದ ಸುರುವಾಗುವ ರಘುನಾಥರ ಲೇಖನದಲ್ಲಿ ೧೯ನೇ ಪುಟದಲ್ಲಿ 'ಹಳ್ಳಿಯ'—'ಹಳ್ಳಿಯೆ' (ಸಾ. ೧); 'ಬಂದೀಖಾನೆ ಉಂಟಾಗಿ'—'ಬಂದೀಖಾನೆಯಾಗಿ' (ಸಾ. ೨); 'ಸಹ ಕಲಿಸುತ್ತಾರೆ' —'ಸಹಕರಿಸುತ್ತಾರೆ' (ಸಾ.೧೩); 'ಭಾಷೆಯಲ್ಲಿ'—'ಭಾಷೆಯಲ್ಲೆ'(ಸಾ.೧೪) ಹೀಗೆ ತಿದ್ದಿಕೊಳ್ಳಬೇಕು.

—ಸಂಪಾದಕ

DEVU PATTAR
GUTTIPETH,
SHAHAPUR-585223

ಈ ಸಂಚಿಕೆಯ ಹೊಸ ಲೇಖಕರು

ಎಚ್. ಎಸ್. ಭೀಮನಗೌಡರ ಇಂಗ್ಲಿಷ್ ಪ್ರಾಧ್ಯಾಪಕ, ಆರ್ಟ್ಸ್ ಕಾಲೇಜು, ಸಂಕೇಶ್ವರ.

ಯು. ಆರ್. ಅನಂತಮೂರ್ತಿ 'ರುಜುವಾತು' ಸಂಪಾದಕರು, ೮೪೯, ಟಿ. ಕೆ. ಲೇ ಔಟು, ಮೈಸೂರು-೯.

ಶಿವರಾಮು ಕಾಡನಕುಪ್ಪೆ ಕನ್ನಡ ಪ್ರಾಧ್ಯಾಪಕ, ವಿದ್ಯಾವರ್ಧಕ ಕಾಲೇಜು, ಮೈಸೂರು–೧.

ಎನ್. ಎಸ್. ರಘುನಾಥ ಇಂಗ್ಲಿಷ್ ಪ್ರಾಧ್ಯಾಪಕ, ರೀಜನಲ್ ಎಜ್ಯುಕೇಶನ್ ಕಾಲೇಜು ಮೈಸೂರು–೬

ಕೆ. ಆರ್. ದುರ್ಗಾದಾಸ್ ಎಸ್. ಎಸ್. ಕೆ. ಕಾಲೇಜು, ಬಸವಕಲ್ಯಾಣ.

ಶ್ರೀಕೃಷ್ಣ ಚೆನ್ನಂಗೋಡ್ ಜನತಾ ಹೈಸ್ಕೂಲು, ಅಡ್ಯನಡ್ಕ, ದ. ಕ.

ಹಮೀದ್ ಜಬೀನ್ ಪಾಕಿಸ್ತಾನಿ ಕತೆಗಾರ. (ಹೆಚ್ಚು ಮಾಹಿತಿ ಲಭ್ಯವಿಲ್ಲ.)

ದು. ನಿಂ. ಬೆಳಗಲಿ ಅಧ್ಯಾಪಕ, ಎಸ್. ಆರ್. ಎ ಹೈಸ್ಕೂಲು, ಬನಹಟ್ಟಿ.

ಶಂಕರಗೌಡ ಸಾತ್ಮಾರ ಇಂಗ್ಲೀಷ್ ಪ್ರಾಧ್ಯಾಪಕ, ಸರಕಾರಿ ಆರ್ಟ್ಸ್ ಕಾಲೇಜು, ಚಿತ್ರದುರ್ಗ.

ದೇಶಪಾಂಡೆ ಸುಬ್ಬರಾಯ ೩೬೦, ಪಟಾಡಿಯಾ ಚಾಳ, ಕೇಶವಾಪುರ, ಹುಬ್ಬಳ್ಳಿ.

ಬಸವರಾಜ ಸಬರದ ಕನ್ನಡ ಪ್ರಾಧ್ಯಾಪಕ, ಕರ್ನಾಟಕ ಕಾಮರ್ಸ ಕಾಲೇಜು, ಬೀದರ.

ದ. ರಾ. ನಾಗೇಶ ಬಿ. ಕೆ ಎಂ. ವಿದ್ಯಾರ್ಥಿನಿಲಯ, ಚಾಮರಾಜ ಪೇಟೆ, ಬೆಂಗಳೂರು-೧೮.

ಸ. ಉಷಾ ಕನ್ನಡ ಪ್ರಾಧ್ಯಾಪಕಿ, ಬಿ.ಪಿ. ಕಾಲೇಜು, ಹೊಳಲ್ಕೆರೆ, ಜಿ.ಚಿತ್ರದುರ್ಗ.

ಸಿ. ವಿ. ಪಾಟೀಲ ಕನ್ನಡ ಪ್ರಾಧ್ಯಾಪಕ, ಎಸ್‌ಜೆವಿಪಿ ಕಾಲೇಜು, ಹರಿಹರ.

ಎಂ. ಭೀಮಭಟ್ಟ 'ವಿಶ್ವಪ್ರೇಮ' ವೇಣೂರು. ದ. ಕ.

ಆರ್. ವಿ. ಭಂಡಾರಿ ಗುಂಡಿ ಬೈಲ್ ಶಾಲೆ ನಂ. ೧, ಚಿಕ್ಕನಕೋಡು, ಉ. ಕ.

ಸತೀಶ ಕುಲಕರ್ಣಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲ, ಹಾವೇರಿ.

ಎಂ. ಸಿದ್ಧಯ್ಯ ದಾವಣಗೆರೆ ಶುಗರ್ ಕಂಪನಿ, ಕುಕ್ಕುವಾಡ, ತಾ. ದಾವಣಗೆರೆ

'ಮಹಿಮ' ಡಾ। ಎಚ್. ಎಂ. ಮಹೇಶ್ವರಯ್ಯ, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

ಜಿ. ಆರ್. ತಿಪ್ಪೇಸ್ವಾಮಿ ಜಾನಪದ ವಿಭಾಗ. ಕ. ಸಾ. ಪ. ಬೆಂಗಳೂರು–೧೮.

ಆಲ್ಮನೆ ರಘುಪತಿ ಉಪನ್ಯಾಸಕ, ಸರಕಾರಿ ಜ್ಯೂ. ಕಾಲೇಜು, ಮೂಲ್ಕಿ, ದ. ಕ

ಬರಗೂರು ರಾಮಚಂದ್ರಪ್ಪ ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು–೫೬.

ಚಂದ್ರಶೇಖರ ಪಾಟೀಲ

ಗಾಂಧಿವಾದ ಮತ್ತು ಗಾಂಧಿಗಳು

ಸಂಪಾದಕೀಯ ಲೇಖನ

ಅಕ್ಟೋಬರ್ ತಿಂಗಳು ಈ ವರೆಗೂ ಮಹಾತ್ಮಾ ಗಾಂಧಿಯ ಜಯಂತಿಯ ತಿಂಗಳಾಗಿ ಪ್ರತಿವರ್ಷ ನಮ್ಮ ನೆನಪು ಕಲಕುತ್ತಿತ್ತು. ಅಂದು ಸಾರ್ವತ್ರಿಕ ರಜೆ. ಮಹಾತ್ಮನ ಗುಣಗಾನ, ಮೆರವಣಿಗೆ, ಹಳೇ ಕಾಂಗ್ರೆಸಿಗರಿಂದ ಚರಖಾ ತಿರುಗಿಸುವಿಕೆ- ಇತ್ಯಾದಿ ಗಳೆಲ್ಲ ವಾರ್ಷಿಕ ವಿಧಿಯಾಗಿ ಅಕ್ಟೋಬರ್ ಎರಡು ಮುಸಕಾಗಿ ಹೋಗುತ್ತಿದ್ದಾಗ, ಈ ವರ್ಷದ— ಜಾರ್ಜ ಆರ್ವೆಲ್ಲನ ೧೯೮೪ರ— ಅಕ್ಟೋಬರ್ ಮಾತ್ರ ಕಟ್ಟಕಡೆಯ ದಿನ ಹೊಸ ವ್ಯಕ್ತಿತ್ವವನ್ನು ಪಡೆಯಿತು. ನಮ್ಮ ಮತ್ತೊಬ್ಬ ಗಾಂಧಿ- ಇಂದಿರಾ ಗಾಂಧಿ— ಅಕ್ಟೋಬರ್ ೩೧ ರಂದು ಕೊಲೆಯಾದರು.

ನವಂಬರ್ ೧೪ : ಇಂದಿರಾರ ತಂದೆ ಜವಾಹರಲಾಲರ ನೆಹರೂ ಅವರ ಜನ್ಮದಿನ; ಅದರ ಸಾಂಪ್ರದಾಯಿಕ ನಾಮಕರಣ 'ಮಕ್ಕಳ ದಿನಾಚರಣೆ'. ಮುಂದೆ ಐದೇದಿನದಲ್ಲಿ ಮತ್ತೆ (ನವಂಬರ್ ೧೯) ಇಂದಿರಾ ಗಾಂಧಿಯವರ 'ಜಯಂತಿ'ಯಂತೆ!

ಅಂತೂ ಅಕ್ಟೋಬರ್, ನವಂಬರ್‌ಗಳು ಇಂಡಿಯಾದ ೨೦ನೇ ಶತಮಾನವನ್ನು ಒಂದಿಲ್ಲೊಂದು ರೀತಿಯಲ್ಲಿ ಆವರಿಸಿದ ಮೂವರು ವ್ಯಕ್ತಿಗಳ ಹುಟ್ಟುಹಬ್ಬದ ಹಾರಾಟ ಹಾಗೂ ಸಾವಿನ ಸಮಾರಾಧನೆಯಲ್ಲಿ ಮುಳುಗೇಳುವ ತಿಂಗಳುಗಳಾಗಲಿವೆ. ತನ್ನ ಆಕಸ್ಮಿಕವಾದ ಅಡ್ಡ ಹೆಸರಿನಿಂದಾಗಿ ಮಹಾತ್ಮಾ ಗಾಂಧಿಗೂ, ಮಗಳಾಗಿ ಹುಟ್ಟಿದ್ದ- ಕ್ಕಾಗಿ ನೆಹರೂ ಅವರಿಗೂ ತಳಕು ಹಾಕಿಕೊಂಡ ಇಂದಿರಾ ಅವರಿಬ್ಬರಿಗಿಂತಲೂ ಮಿಗಿಲಾಗಿಯೇ ನಮ್ಮ ಆಕಾಶ ತುಂಬುವ ವಾಣಿಯಾಗುವ, ದೂರವಿದ್ದರೂ ಸಮೀಪದಿಂದಲೇ ದರ್ಶನ ಕೊಡುವ ಬಿಂಬವಾಗುವ ಸಂಭವವೇ ಹೆಚ್ಚಾಗಿದೆ.

●

ಈ ವರ್ಷದ ಮಾರ್ಚ ತಿಂಗಳಲ್ಲಿ ಒಮ್ಮೆ ಮೈಸೂರು ಆಕಾಶವಾಣಿಗಾಗಿ ದಿಲ್ಲಿ ವಿಶ್ವ-ವಿದ್ಯಾಲಯದ ಸ್ನೇಹಿತ ಟಿ. ಎಸ್. ಸತ್ಯನಾಥರು ನನ್ನ ಇಂಟರ್‌ವ್ಯೂ ಮಾಡಬೇಕಾಗಿ ಬಂದ ಸಂದರ್ಭ. ಗಾಂಧಿಯ ಬಗ್ಗೆ ಮತ್ತೊಮ್ಮೆ ಸೀರಿಯಸ್ಸಾಗಿ ಮೆಲುಕು ಹಾಕುವ ಘಟನೆಯದು ನನ್ನ ಪಾಲಿಗೆ. ಏಕೆಂದರೆ ನನ್ನ ಸಾಹಿತ್ಯದಲ್ಲಿ–ಮುಖ್ಯವಾಗಿ ಕಾವ್ಯದಲ್ಲಿ-ಕಳೆದ ಕಾಲುಶತಮಾನದಿಂದಲೂ ನಾನು ಗಾಂಧಿಯಬಗ್ಗೆ ಬರೆಯುತ್ತಲೇ ಬಂದಿರುವೆ: ಮೊದಲು ಮೂಲ ಗಾಂಧಿಯ ಬಗ್ಗೆ. ನಂತರ ಡುಪ್ಲಿಕೇಟ ಗಾಂಧಿಗಳ ಬಗ್ಗೆ.

ಸತ್ಯನಾಥ್ ಕೇಳಿದರು: ಪದೇ ಪದೇ ನಿಮ್ಮ ಸಾಹಿತ್ಯದಲ್ಲಿ ಗಾಂಧಿ ಪ್ರಸ್ತಾಪ ಬರುತ್ತದೆ ಗಾಂಧಿ ಒಂದು positive ಶಕ್ತಿಯಾಗಿ ನಿಮ್ಮನ್ನು ಕಾಡುತ್ತಿದ್ದಾನೆಯೇ ?

ಇದೊಂದು ಅನಿರೀಕ್ಷಿತವಾದ, ಯಾರೂ ಈ ವರೆಗೂ ನನ್ನನ್ನು ಕೇಳಿರದ ಪ್ರಶ್ನೆಯಾಗಿತ್ತು. ಸ್ವಲ್ಪ ಹೊತ್ತು ವರ್ತಮಾನದಿಂದ ಭೂತಕ್ಕೆ ಜಿಗಿದು, ಮತ್ತೆ ವರ್ತಮಾನಕ್ಕೆ ನೆಗೆದು ಬಂದು ನನ್ನಷ್ಟಕ್ಕೇ ಹೇಳಿಕೊಳ್ಳುವಂತೆ ಅವರಿಗೆ ಹೇಳಿದೆ.

ಗಾಂಧಿಯನ್ನು ನಾನೆಂದೂ ನೋಡಲಿಲ್ಲ. ಅದು ಗಾಂಧಿಯ ತಪ್ಪು ಅಲ್ಲ. ನನ್ನದೂ ಅಲ್ಲ. ಗಾಂಧಿ ಸತ್ತಾಗ ನನಗೆ ಇನ್ನೂ ಹತ್ತು ವರ್ಷ ಮಾತ್ರ. ಅವನು ಸತ್ತ ದಿನ ಶಾಲೆಗೆ ಸೂಟಿ.ಎಲ್ಲರೊಡನೆ ನಾನೂ ಬಿಕ್ಕಿಬಿಕ್ಕಿ ಅತ್ತಿದ್ದೆ, ಅಷ್ಟೆ. ಆದರೆ ಗಾಂಧಿಯನ್ನು ಕಾಣದವರಾರು ಇದ್ದಾರೆ ? ಬೋಳು ನೆತ್ತಿಯ, ಮುಗ್ಧ ನಗೆಯ ಈ 'ನಂಗಾ ಫಕೀರ್' ಒಬ್ಬ ಸರ್ವಾಂತರ್ಯಾಮಿ. ಗಾಂಧಿ, ನೆಹ್ರೂ, ಸುಭಾಸ್ — ಈ ತ್ರಿಮೂರ್ತಿಗಳ ಫೋಟೋಗಳಿರದ ಮನೆಗಳೇ ಇರಲಿಲ್ಲ ಒಂದು ಕಾಲಕ್ಕೆ.

ನಾನು ಹೇಳಿದೆ : ಗಾಂಧಿ ನನ್ನ ಪಾಲಿಗೆ ಅನೇಕ ಅಮೂರ್ತ ಮೌಲ್ಯಗಳ ಒಂದು ಸಂಕೇತ ಮಾತ್ರ. ಅಪಮೌಲ್ಯಗಳ ಹಿನ್ನೆಲೆಯಲ್ಲಿ ಥಕ್ಕನೇ ನೆನಪಾಗುವ ಒಂದು ಮೂರ್ತಿ. ಹೀಗಾಗಿ ಗಾಂಧಿಯ ಅಸ್ತಿತ್ವ ನನ್ನ ಪ್ರಜ್ಞೆಯಲ್ಲಿ negative ಆಗಿ ಮಾತ್ರ ಇರುವುದು. ಅವನೊಂದು referencer point, ಮಾನಬಿಂದು ಅಷ್ಟೆ. He is a contrastive and a relative value for me.

ಪ್ರತಿಯೊಂದು ಮಾತಿಗೂ ಗಾಂಧಿಯನ್ನು ಎಳೆದು ತರುತ್ತ, ಗಾಂಧಿಯನ್ನು ವಿನಾಕಾರಣವಾಗಿ ವೈಭವೀಕರಿಸುತ್ತ, ಬಹುಶ : ತಮ್ಮಲ್ಲೂ ಗಾಂಧಿಯಾಗುವ ಸಾಧ್ಯತೆಗಳನ್ನು ಕಂಡು ತಮ್ಮನ್ನೇ ವೈಭವೀಕರಿಸುತ್ತ, ಅಂದರೆ ಸರಳೀಕರಿಸುತ್ತ, ಅಂದರೆ ಸುಳ್ಳ ಹೇಳುತ್ತ ಗಾಂಧಿಯನ್ನು ಆರಾಧಿಸುವ ಅನೇಕ ಬುದ್ಧಿಜೀವಿ ಸಾಹಿತಿಗಳಿರುವ ನಮ್ಮ ಕರ್ನಾಟಕದ ಇವತ್ತಿನ ಸಂದರ್ಭದಲ್ಲಿ ಸತ್ಯನಾಥರಿಗೆ ನಾನು ಕೊಟ್ಟ ವಿವರಣೆ ತೃಪ್ತಿದಾಯಕವೆನಿಸಿತು. ಅವರು ಇನ್ನೂ ಒಂದು

ಮಾತು ಹೇಳಿದರು : ಭಾರತದ ಯಾವುದೇ ಭಾಷೆಯ ಸಮಕಾಲೀನ ಸಾಹಿತ್ಯಕ್ಕೆ ಹಿನ್ನೆಲೆಯ ಸ್ಫೂರ್ತಿಯಾಗಿಯಾಗಲಿ, ಮುನ್ನೆಲೆಯ ಮುಖ್ಯ ಪಾತ್ರವಾಗಿಯಾಗಲಿ 'ಗಾಂಧಿ' ಕೆಲಸ ಮಾಡಿಯೇ ಇಲ್ಲ. ಇದು ಸಮಾಜ ವಿಜ್ಞಾನಿಗಳು, ಇತಿಹಾಸಕಾರರು ಗಂಭೀರವಾಗಿ ಅಧ್ಯಯನ ಮಾಡಬೇಕಾದ ವಿಷಯ.

ನಿಜವಾಗಿಯೂ ಗಮನಿಸಬೇಕಾದ ವಿಚಾರಕ್ಷೇತ್ರವಿದು. ಮಹಾತ್ಮಾ ಗಾಂಧಿಯ ವ್ಯಕ್ತಿ ವಿಶೇಷದ ಅಧ್ಯಯನದೊಂದಿಗೆ, 'ಗಾಂಧಿವಾದ' ಎಂದು ಹೆಸರು ಗೊತ್ತಿರುವ ವಾದ (ism)ದ ಬಗ್ಗೆಯೂ ನಾವಿಂದು ತಲೆ ಕೆಡಿಸಿಕೊಳ್ಳಬೇಕಾಗಿದೆ.

'ವಾದ' ವೆಂದರೆ ಚರಿತ್ರೆಯನ್ನು, ಬದುಕನ್ನು, ವ್ಯಷ್ಟಿ-ಸಮಷ್ಟಿ ಸಂಬಂಧಗಳನ್ನು ಅಂತರಿಕವಾಗಿ ರೂಪಿಸುವ ಶಕ್ತಿಗಳನ್ನು ಗುರುತಿಸಬಲ್ಲ, ಅವುಗಳ ಗತಿಯನ್ನು ನಿರ್ದೇಶಿಸಬಲ್ಲ, ಅಷ್ಟೊಂದು ಖಚಿತವಾಗಿರದಿದ್ದರೂ ಸುಸಂಬದ್ಧವಾಗಬಲ್ಲ ಸಾಧ್ಯ ತೆಯುಳ್ಳ ವಿಚಾರಗಳ ಒಂದು ಮೊತ್ತ. ಮೊದಲು ಒಬ್ಬ ವ್ಯಕ್ತಿಯಿಂದ ಪ್ರಾರಂಭ ವಾಗುವ ಈ ವಿಚಾರಧಾರೆ, ಆ ವ್ಯಕ್ತಿಯ ಹೆಸರನ್ನೇ ತಳಕು ಹಾಕಿಕೊಂಡರೂ (ಉದಾ: ಮಾರ್ಕ್ಸವಾದ, ಲೋಹಿಯಾವಾದ ಮು.) ಅಲ್ಲಿಗೇ ನಿಲ್ಲದೆ, ಪೀಳಿಗೆ ಯಿಂದ ಪೀಳಿಗೆಗೆ ಸ್ಥಿತ್ಯಂತರ ಹೊಂದುತ್ತಿದ್ದರೂ ಮೂಲಸ್ವರೂಪವನ್ನು ಕಳೆದು ಕೊಳ್ಳದೆ ಗಟ್ಟಿಯಾಗುತ್ತ, ಆಳವಾಗುತ್ತ, ಸದಾ ಸಮಕಾಲೀನವಾಗುತ್ತ ಹೋಗುತ್ತದೆ, ಹೋಗಬೇಕು. ಯಾವುದೇ ಕಾಲಘಟ್ಟದಲ್ಲಿ ಅದು ಗಕ್ಕನೆ ನಿಂತುಹೋದರೆ, ಕೊಳಚೆಯಲ್ಲಿ ನಿಂತ ನೀರಿನಂತೆ ಕೊಳಕಾಗಿ, dogma (ಜಡ ಸಿದ್ಧಾಂತ) ಆಗ ಬಹುದೇ ಹೊರತು, ism (ಚಲನಶೀಲ) ಆಗಿ ಮುಂದುವರೆಯಲಾರದು; ಹರಿವ ನೀರಾಗಿ ಹರಿಯಲಾರದು.

'ಗಾಂಧಿವಾದ' ಎಂಬುದು ಇದೆಯೇ ? ಇದ್ದರೆ, ಎಲ್ಲಿದೆ ? ಹೇಗಿದೆ ? ಇಲ್ಲದಿದ್ದರೆ, ಯಾಕೆ ಇಲ್ಲ ?— ಇವು ನಾವು ಕೇಳಬೇಕಾದ ಪ್ರಶ್ನೆಗಳು. ಗಾಂಧಿಯೊಂದಿಗೆ ಗಾಂಧಿ ವಾದವೂ ಸತ್ತುಹೋಯಿತು ಎಂದು ಗೋಳಾಡುವವರಿದ್ದಾರೆ. ಈ ಗೋಳಾಟ ಮೂರ್ಖತನದ್ದು, ಹುಂಬತನದ್ದು. ಯಾಕೆಂದರೆ ವ್ಯಕ್ತಿ ಸಾಯಬಹುದು : ಆದರೆ 'ವಾದ'-ಅದು 'ವಾದ' ವಾಗಿದ್ದರೆ ಮಾತ್ರ-ಎಂದೂ ಸಾಯುವುದಿಲ್ಲ

ಈಗ 'ಗಾಂಧಿವಾದಿ' ಎಂದರೆ ಜನ ನಗುತ್ತಾರೆ. ಗಾಂಧಿ ಹೇಳಿದ ಕೆಲವು ಉವಾಚ ಗಳನ್ನು ಗೋಡೆಯ ಮೇಲೆ ಬರೆದುಕೊಂಡು. ಅವುಗಳನ್ನೇ 'ಮಂತ್ರ'ಗಳಾಗಿ ಉಚ್ಚರಿಸುತ್ತ, ಅದನ್ನು ಉಪಜೀವನದ ಒಂದು ಸಾಧನವನ್ನಾಗಿ ಮಾಡಿಕೊಂಡ ಪರಪುಟ್ಟಗಳ ಒಂದು ಹಿಂಡೇ ಇಂಡಿಯಾದಲ್ಲಿ ಇಂದು ಬದುಕುತ್ತಿದೆ. ಗಾಂಧಿ

ಟೊಪ್ಪಿಗೆ ಮೋಸದ, ಕುಯುಕ್ತಿಯ, ದಗಲ್‌ಬಾಜಿತನದ ಒಂದು ಬಹಿರಂಗ ಸಂಕೇತವಾಗಿದೆ.

ಮಹಾತ್ಮಾ ಗಾಂಧಿ ಉದ್ಗರಿಸಿದ ವಿಚಾರಗಳಿಗೆ ಒಂದು 'ವಾದ'ವಾಗುವ, ಜೀವಂತ ಸಿದ್ಧಾಂತವಾಗುವ ಒಂದು ಆಂತರಿಕ ಶಕ್ತಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. 'ಗಾಂಧಿ' ಯ ಹೆಸರನ್ನಿಟ್ಟುಕೊಂಡವರು ದೇಶವನ್ನು ಲೂಟಿ ಹೊಡೆಯುತ್ತಿರಲಿಲ್ಲ.

ಗಾಂಧಿಯ ವ್ಯಕ್ತಿತ್ವವೇ ಅಸಂಬದ್ಧತೆಗಳ ಒಂದು ಕಗ್ಗಂಟಾಗಿತ್ತು. ಇಂಡಿಯಾದಂಥ ದೇಶದಲ್ಲಿ ಇಲ್ಲಿಯ ವಾಸ್ತವಗಳಾದ ವರ್ಗ ಮತ್ತು ವರ್ಣಗಳ ಬಗ್ಗೆ, ಅಂದರೆ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ, ಗಾಢವಾದ ಚಿಂತನೆಯನ್ನು ನಿರೀಕ್ಷಿಸುವವರಿಗೆ ಗಾಂಧಿಯಲ್ಲಿ ಘೋರ ನಿರಾಸೆ ಕಾದಿದೆ. ಅವರ 'ಕನಸಿನ ರಾಮರಾಜ್ಯ' ದಲ್ಲಿ ಶ್ರೀಮಂತನಿಗೂ ಸ್ಥಾನವಿದೆ, ಭಿಕಾರಿಗೂ ಸ್ಥಾನವಿದೆ–ಎಂದಿದ್ದಾರೆ ಅವರು. ಅಸ್ಪೃಶ್ಯತೆ ಪಿಡುಗೆಂದು ಬಣ್ಣಿಸಿದರೂ ವರ್ಣಾಶ್ರಮ ಪದ್ಧತಿಯನ್ನು ಸಮರ್ಥಿಸಿಕೊಂಡ ಗಾಂಧಿ; ಹೊಲೆ–ಮಾದಿಗರಿಗೆ 'ಹರಿಜನ' ಎಂದು ನಾಮಕರಣ ಮಾಡಿ ವಾಸ್ತವ ಲೋಕದಿಂದ ಭ್ರಮಾಲೋಕಕ್ಕೆ ಪ್ರಮೋಶನ್ ಕೊಡಿಸಿದ ಗಾಂಧಿ; ತನ್ನ 'ಅಂತರಂಗದ ಧ್ವನಿ' ಯನ್ನೆ ನಿರ್ಣಾಯಕವೆಂದು, ಪ್ರಮಾಣವೆಂದು ನಂಬಿದ ಗಾಂಧಿ; ಉಪವಾಸವನ್ನು ಅನೇಕ ಸಲ ಬ್ಲ್ಯಾಕ್ ಮೇಲ್ ತಂತ್ರವನ್ನಾಗಿ ಬಳಸಿಕೊಂಡ ಗಾಂಧಿ; ತನ್ನ ಚಾರಿತ್ರಿಕ ಮಿತಿಯನ್ನು ಅರಿತುಕೊಳ್ಳದೆ, ತನ್ನ ನಂತರವೂ ತಾನು ಮುಂದುವರಿಯಬೇಕೆಂದು ನೆಹರೂ ಅವರನ್ನು ತನ್ನ 'ವಾರಸುದಾರ'ನನ್ನಾಗಿ ನೇಮಿಸಿದ ಗಾಂಧಿ—ಇಂಥ ಮಹಾತ್ಮಾಗಾಂಧಿ ಇಪ್ಪತ್ತನೆಯ ಶತಕದ ಪ್ರಪಂಚದ ಆದರ್ಶಗಳಾದ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವಗಳಿಗೆ ಪೂರಕವಾಗಬಲ್ಲ, ಸುಸಂಬದ್ಧವಾದ, ಚಲನಶೀಲವಾದ ವಿಚಾರಧಾರೆಯೊಂದನ್ನು ನಮಗೆ ಕೊಡಲು ಹೇಗೆ ಸಾಧ್ಯ?

ನಾವು ಕೇಳಿಕೊಳ್ಳಲೇ ಬೇಕಾದ ಪ್ರಶ್ನೆಗಳಿವು : ಆ ಗಾಂಧಿಗಾಗಿ ಅಲ್ಲ, ನಮಗಾಗಿ.

ಏಕೆಂದರೆ ಗಾಂಧಿಯ ವ್ಯಕ್ತಿತ್ವದಲ್ಲಿಯ ವಾಸ್ತವಗಳು ನಮ್ಮ ಸುತ್ತಲಿನ, ನಮ್ಮೊಳಗಿನ ಬದುಕಿನ ವಾಸ್ತವಗಳೂ ಆಗಿವೆ. ಇತಿಹಾಸ ಚಕ್ರವನ್ನು ಒಂದರ್ಥದಲ್ಲಿ ಭೂತದಲ್ಲಿ ಒಯ್ಯ ಬಯಸಿದ ಗಾಂಧಿಯ ಸಕಲ ಕ್ರಿಯೆಗಳನ್ನೂ ನಿಯಂತ್ರಿಸುತ್ತಿದ್ದ ಅವರ ಪ್ರಜ್ಞೆ ಅಪ್ಪಟ ಹಿಂದೂ ಪ್ರಜ್ಞೆಯಾಗಿತ್ತು. ಹಿಂದೂ ಪ್ರಜ್ಞೆ, ಅಂದರೆ ಅದು ಹಿನ್ನೋಟದ ಪ್ರಜ್ಞೆ. ಇತಿಹಾಸವನ್ನು ಪುರಾಣವಾಗಿ ಮಾಡುವ, ತಾರತಮ್ಯಗಳನ್ನು ಸಹಜ, ನಿಸರ್ಗದತ್ತ ಹಾಗೂ ಈಶ್ವರೇಚ್ಛೆಯ ಫಲವೆಂದು ಮುಗ್ಧವಾಗಿ ನಂಬಿಬಿಡುವ, ಸಮಷ್ಟಿಯನ್ನು ವ್ಯಷ್ಟಿಯೊಂದಿಗೆ ಸಮೀಕರಿಸಿಕೊಳ್ಳುವ, ಚೈತನ್ಯ-ವಿರೋಧಿಯಾದ, ಜಡತ್ವ–ಪ್ರಚೋದಕವಾದ, ಸ್ಥಿತ ಪ್ರಜ್ಞತೆಯ ಹೆಸರಿನ ಪ್ರಜ್ಞಾ ರಹಿತವಾದ ಒಂದು

ಮನಸ್ಥಿತಿ. ಆಧುನಿಕ ಜಗತ್ತಿನ ಒತ್ತಡಗಳಿಗೆ ಸಿಕ್ಕ ಇಂಥದೊಂದು ಪ್ರಜ್ಞೆ ವಕ್ರವಾಗುವುದು ತರ್ಕಬದ್ಧವೇ ಆಗಿದೆ.

ಇಂಥ ಓರೆಕೋರೆ ವ್ಯಕ್ತಿತ್ವದ ಗಾಂಧಿ ತನ್ನೆಲ್ಲ ವ್ಯಂಗ್ಯಗಳೊಂದಿಗೆ 'ಸರಕಾರಿ' ಸಂತನಾಗಬಲ್ಲ ವಿನೋಬಾ ಆಗಬಲ್ಲ; ಆ್ಯಟಿನ್‌ಬರೋನಂಥ ಭಕ್ತರಿಗೆ ವೈಭವೀಕರಣದ ಮೂರ್ತಿಯಾಗಬಲ್ಲ; ತನ್ನನ್ನು ಖೂನಿ ಮಾಡಿದ ಜಾತಿವಾದಿ ಶಕ್ತಿಗಳು 'ಗಾಂಧಿ ಸಮಾಜವಾದ' ಎಂದು ತಮ್ಮ ಸಿದ್ಧಾಂತವನ್ನು ಮಾರಾಟ ಮಾಡಲು ಅನುಕೂಲವಾಗುವ ಲೇಬಲ್ ಆಗಬಲ್ಲ; ಪ್ರಜ್ಞೆಯಲ್ಲಿ ಜನ-ವಿರೋಧಿ ನಿಲುವನ್ನು ಅರಗಿಸಿಕೊಂಡು ಬಹಿರಂಗದಲ್ಲಿ ಗಾಂಧಿಯನ್ನು ಎಲ್ಲದಕ್ಕೂ ರೆಕ್‌ಮೆಂಡ್ ಮಾಡುವ ಭ್ರಷ್ಟ ಸ್ವರತಿ ನಿರತ ಬುದ್ಧಿಜೀವಿಗಳಿಗೆ 'ಪುರುಷೋತ್ತಮ'ನೆಂಬ ಅವತಾರಿ ಪುರುಷನಾಗಬಲ್ಲ; ಕೆಲವರಿಗೆ ಭಜನೆಯ ವಸ್ತುವಾಗಬಲ್ಲ; ಹಲವರಿಗೆ ಭೋಜನದ ಪದಾರ್ಥವಾಗಬಲ್ಲ.

ಆರು ವರ್ಷದ ಹಿಂದೆ ನಾನು ಬರೆದ ಕವನವೊಂದು ನೆನಪಾಗುತ್ತಿದೆ:†

ನಾನು ಬೆಳೆಬೆಳೆದಂತೆ ಗಾಂಧಿ —
ಗಾಂಧೀ ಟೊಪ್ಪಿಗೆಯಾಗಿ ಗಾಂಧೀ ರೋಡಾಗಿ
ಗಾಂಧೀ ಮೈದಾನವಾಗಿ ಗಾಂಧೀ ಬಜಾರಾಗಿ
ಗಾಂಧೀ ನಗರವಾಗಿ ಗಾಂಧೀ ಪ್ರಾಣಿ ಸಂಗ್ರಹಾಲಯವಾಗಿ
ಗಾಂಧೀ ಕೊಳಚೆ ಪ್ರದೇಶವಾಗಿ
ಗಾಂಧೀ ಬೆಳೆದ.........

ಗಾಂಧೀ — ಹಲವರಿಗೆ ಉದ್ದ ನಾಮವಾಗಿ
ಅನ್ನಕ್ಕೆ ಹಾದಿಯಾದ.
ಗಾಂಧೀ — ಕೆಲವರಿಗೆ ಅಡ್ಡಹೆಸರಾಗಿ
ಹಾದಿಗೆ ಅಡ್ಡವಾದ.

●

'ಗಾಂಧಿ' ಅಡ್ಡಹೆಸರಿನವರಲ್ಲೇ ಅತ್ಯಂತ ಪ್ರಮುಖರಾಗಿದ್ದ ಇಂದಿರಾಗಾಂಧಿ ತಾವೇ ಅಪರೋಕ್ಷವಾಗಿ ಹೊತ್ತಿಸಿದ್ದ ಕೋಮು ದ್ವೇಷಕ್ಕೆ ಬಲಿಯಾದರು. ಅವರನ್ನು ಕೊಂದವರೂ ತಮ್ಮನ್ನು 'ಶಹೀದ್' (ಹುತಾತ್ಮಾ) ಎಂದು ಕರೆದುಕೊಂಡಿದ್ದಾರೆ; ಇಂದಿರಾ ಅವರೂ ಹುತಾತ್ಮರಾದರು-ಎಂದು ಪತ್ರಿಕೆ, ರೇಡಿಯೋ, ದೂರದರ್ಶನ ಸಾರುತ್ತಿವೆ. ಮಹಾತ್ಮಾ ಗಾಂಧಿ ಜೊತೆಗೆ ಇಂದಿರಾ ಗಾಂಧಿಯವರನ್ನು ಸಮೀಕರಿಸುವ

---

† 'ಗಾಂಧಿಯನ್ನು ನಾನು ಕಂಡಿಲ್ಲ' : ಹೂವು ಹೆಣ್ಣು ತಾರೆ (೧೯೭೮)

ಪ್ರಯತ್ನವೂ ನಡೆದಿದೆ. ಈ ಮಹಾತ್ಮ-ಹುತಾತ್ಮರ ನಡುವೆ ಮತ್ತೊಬ್ಬ ಗಾಂಧಿ- ಸಂಜಯ ಗಾಂಧಿ- ಅನಾಹುತಕ್ಕೆ ಒಳಗಾಗಿ 'ಅನಾಹುತಾತ್ಮ'ನಾಗಿದ್ದನ್ನೂ ಕಂಡಿದ್ದೇವೆ.

ಮತ್ತೂ ಒಬ್ಬ ಗಾಂಧಿ- ರಾಜೀವ ಗಾಂಧಿ- ಈಗ ಮತ್ತೆ ಅನಾಯಾಸವಾಗಿ, ಡೊಗ್ಗಿ ನಿಂತವರ ಡುಬ್ಬದ ಮೇಲೆ ಸವಾರಿ ಮಾಡುತ್ತಿರುವುದನ್ನೂ ನೋಡುತ್ತಿದ್ದೇವೆ.

ತನ್ನೆಲ್ಲ ವೈರುಧ್ಯಗಳ ಮಧ್ಯೆಯೂ ಗಾಂಧಿ- ಮೋಹನದಾಸ ಕರಮಚಂದ ಗಾಂಧಿ- ಒಬ್ಬ ಮಾನವನಾಗಿದ್ದ. ತನ್ನ ಓರೆಕೋರೆಗಳನ್ನು ಒಪ್ಪಿಕೊಳ್ಳಬಲ್ಲ ಪ್ರಾಮಾಣಿಕನಾಗಿದ್ದ. 'ಆತ್ಮ' ಚರಿತ್ರೆಯನ್ನು ಮರುಳುಗೊಳಿಸುವ ಸರಳ ಶೈಲಿಯಲ್ಲಿ ವೈಭವೀಕರಿಸಿಕೊಳ್ಳಬಲ್ಲ 'ಮಹಾತ್ಮ'ನಾಗಿದ್ದ. ಅನ್ಯಾಯವೆಂದು ತನಗನ್ನಿಸಿದುದರ ವಿರುದ್ಧ ಛಲದಿಂದ ಹೋರಾಡಬಲ್ಲ ಯೋಧನಾಗಿದ್ದ. ಜನರನ್ನು ತನ್ನೊಂದಿಗೆ ಕರೆದೊಯ್ಯಬಲ್ಲ, ಅವರೊಂದಿಗೆ ತನ್ನನ್ನು (ಅಥವಾ ತನ್ನೊಂದಿಗೆ ಅವರನ್ನು ?) ಗುರುತಿಸಿಕೊಳ್ಳಬಲ್ಲ ಜನನಾಯಕನಾಗಿದ್ದ,

ಬದುಕೇ ಅಸಂಗತವಾಗಿರುವಾಗ ಇಂಥ ಅಸಂಗತ ವ್ಯಕ್ತಿತ್ವವನ್ನು ಪ್ರೀತಿಯಿಂದ ಗಾಢವಾಗಿ ಒಪ್ಪಿಕೊಳ್ಳುವುದು, ಅಪ್ಪಿಕೊಳ್ಳುವುದು 'ಅಸಹಜ'ವೆಂದೇನೂ ಕಾಣುತ್ತಿಲ್ಲ. ಇಂದು ಇಂದಿರಾಗಾಂಧಿ ರಾಜೀವಗಾಂಧಿಯನ್ನು ವಾರಸುದಾರನನ್ನಾಗಿ ಹೇರಿ ಹೋಗಿದ್ದರ ಹಿಂದೆ, ಹಿಂದೊಮ್ಮೆ ಮಹಾತ್ಮಾ ಗಾಂಧಿ ಜವಾಹರಲಾಲ್ ನೆಹ್ರೂವನ್ನು ಹೇರಿ ಹೋಗಿದ್ದರ ನೆನಪು ಸುಳಿದಾಡಿದರೆ ನಮ್ಮ ಚರಿತ್ರೆಯ ಸ್ಥಿತಿಯನ್ನು, ಗತಿಯನ್ನು ಅರ್ಥ ಮಾಡಿಕೊಳ್ಳಬಲ್ಲೆವು.

ಗಾಂಧಿ ಹೀಗೆ ಒಂದು ವಾದವಾಗಿ, ನೇರವಾಗಿ ನಮ್ಮ ಬದುಕಿನುದ್ದಕ್ಕೂ ಬೆಳೆಯದೆ, ಒಂದು ಅಡ್ಡ ಹೆಸರಾಗಿ, ಮರಿ-ಗಾಂಧಿಗಳಾಗಿ, ಒಡೆದ ಕನ್ನಡಿಯ ತುಣುಕುಗಳಂತೆ ಮುಂದುವರಿಯುತ್ತ, ಒಂದು ರೀತಿಯಲ್ಲಿ 'ಅಮರ' ನಾಗುತ್ತಲೇ ನಡೆದಿರುವುದು...

ನಗುವುದೋ ಅಳುವುದೋ...ನೀವೇ ಹೇಳಿ.

●

ಎಚ್. ಎಸ್. ಭೀಮನಗೌಡರ

ಪುನರ್ಜನ್ಮ‡

ಇಂದಿನಿಂದ ನೀನು ಅಪ್ಪನಲ್ಲ
ನಾನು ಮಗನಲ್ಲ–
ಅರಳು ಹುರಿದಂತೆ ಕರಳು ಹರಿದುಕೊಂಡು ಬಿಟ್ಟ ಕಿಟ್ಟ.

ಎಷ್ಟು ದಿವಸ ಕುಂಡೆಯ ಕೆಳಗಿನ ಕಂಬಳಿಯಾಗುವುದು ?
ತಾನೂ ವೃದ್ಧಿ ಹೊಂದಬೇಡವೆ ? ಬುದ್ಧಿ ಪಡೆಯಬೇಡವೆ ?
ಪರಂಪರಾಗತವೆಂದ ಮಾತ್ರಕ್ಕೆ ಅಪ್ಪನೇ ಸರ್ವಸ್ವವೆ ?

ಮುಗ್ಧತೆಯ ಮಾತು ಮಾಯವಾಗಿ
ಪ್ರೌಢ ಪ್ರತಿಭಟನೆಯ ತುತ್ತೂರಿಯೂದಿಬಿಟ್ಟ ಕಿಟ್ಟ.

ಕಚ್ಚೆಯ ಮೇಲೆ ಅಪ್ಪನ
ಆಕಾಶ ಮುಖದ ಸೂರ್ಯದೃಷ್ಟಿ
ಸರ್ವತಂತ್ರ ಮಂತ್ರ
ಗತ್ತು-ಗಮ್ಮತ್ತು ಗಮನಿಸಿದಷ್ಟೂ
ಕಿಟ್ಟನ ಹೊಟ್ಟೆಕಿಚ್ಚು ಸ್ಫೋಟದಲ್ಲಿ ಹೆಡೆಬಿಚ್ಚಿ
ಐತಿಹಾಸಿಕ ಅಭದ್ರತೆಯ ಪಶ್ಚಾತ್ತಾಪ
ವಾದದಲ್ಲಿ ಹೆಚ್ಚಿ
ಸ್ವಾಭಿಮಾನದುದ್ವೇಗ ನಡೆಯಲ್ಲಿ ಹೊಚ್ಚಿ
ಕೃತಿಗಿಳಿದುಬಿಟ್ಟ ಕಿಟ್ಟ.

ಕಪ್ಪು ಕುದುರೆಯನ್ನೇರಿ ದಟ್ಟಪೋತವಾಗಿ
ಅಪ್ಪನ ಆಸ್ಥಾನವನ್ನಾಕ್ರಮಿಸಿ ಗುಡು–ಗುಡುಗಿ

---

‡ ಬರಲಿರುವ **ನೆಲ ಹಿಡಿಯುವ ಮೊದಲು** ಸಂಕಲನದಿಂದ.

ಉಸಿರು–ಗಾಳಿಗಡ್ಡ ಆಣೆಕಟ್ಟಾಗಿ
ಅಪ್ಪನಂಗಾಂಗ ಬೆಳೆ ಕುರಿ-ಕೋಳಿಗಳ
ಬಲಿ ತೆಗೆದುಕೊಂಡ, ಭಯೋತ್ಪಾದಕನಾದ.

ಅಪ್ಪರೊಳಗೆ ಪಾಪ ಅಪ್ಪ
ಎದೆಯೊಡೆದುಕೊಂಡು ಅಸ್ತನಾಗಿದ್ದ ಕಂಡು

ತೆರವಾದ ಕಟ್ಟೆಯ ತ್ವರಿತವಾಗಿ
ಸ್ವಾಧೀನಪಡಿಸಿಕೊಂಡು ಸರ್ವಸ್ವತಂತ್ರ
ಕತ್ತಲೆಯ ಕೌದಿ ದಶದಿಕ್ಕುಗಳಿಗೂ ಹಾಸಿ
ನಿಶ್ಚಿಂತನಾಗಿ ಒರಗಿಬಿಟ್ಟ ಕಿಟ್ಟ.

ಹಿಂದಿನ ಧೀರ ಘಟನೆಯ ನೆನಪಿನಿಂದ
ಇನ್ನಾವ ನೊಣ ಸುಳಿಯಬೇಕು ?
ಯಾವ ಗಾಳಿ ಬೀಸಬೇಕು ?
ಹೂವು ಅರಳಬೇಕು ?

ಕಾವಲಿನ ಕಂಡುಗೋಲು–ಕೊಡಲಿ
ಕುಣಿದಾಡಿದಾಗಲೆ ಒಮ್ಮೆಲೆ ಎಚ್ಚರ.
ಕುದುರೆ ಲಗಾಮು ಹರಿದು
ಆಯುಧಗಳ ವಾಹನವಾಗಿತ್ತು
ಸಂಚು ಸುರುವಾಗಿತ್ತು. ಕಿಟ್ಟನ ಕೈಮೀರಿತ್ತು.

ಏನು ಮಾಡುವುದೀಗ ಕಿಟ್ಟ ?
ಶತ–ಸಿದ್ಧಾಂತ ಸಂತತಿ ಬಳಸಿ
ಸಕಲ ತಂತ್ರಜ್ಞಾನ ಮಾಯಾವಿ ಅಳವಡಿಸಿ
ಗುದ್ದಿಡಿವ ತನ್ನ ಯಂತ್ರವನ್ನೇ ನಿಯಂತ್ರಿಸಲು ಹೆಣಗಾಡಿದ.
ದಿಗ್‌ಭ್ರಮೆಯಲ್ಲಿ ಓಡಾಡುವಾಗ ಆಕಸ್ಮಿಕ
ಕುಡುಗೋಲಿನ ಕೆಳಗೆ ಸಿಕ್ಕು
ಆತ್ಮಹತ್ಯೆಯಾಗಿಬಿಟ್ಟ ಕಿಟ್ಟ.

ಕುಡುಗೋಲಿನ ಅಲುಗಿನಲ್ಲೇ ಅಪ್ಪ
ಬೆಳ್ಳಗೆ ಬೆಳಗಾಗಿ ಪುನರ್ಜನ್ಮವಾದದ್ದು
ಕಿಟ್ಟನಿಗೂ ಕೊನೆಗೆ ಗೊತ್ತಾಗಲಿಲ್ಲ.

ಗೋಪಾಲಗೌಡ, ಅವಸ್ಥೆ, ಸಂಸ್ಕಾರ ಇತ್ಯಾದಿ....

ಪ್ರತಿಕ್ರಿಯೆಗಳು

೧. ಅನಂತಮೂರ್ತಿ ಪತ್ರ

ಪ್ರಿಯ ಸಂಪಾದಕ,

ನಿಮ್ಮ ಸಂಪಾದಕೀಯ ಲೇಖನ (ಸಂಕ್ರಮಣ ೧೫೧-೧೫೨)ದಲ್ಲಿ ನನ್ನನ್ನು ಕುರಿತು ಬರೆದಿರುವ ಮಾತುಗಳಿಗೆ ಇದು ಪ್ರತಿಕ್ರಿಯೆ.

೧. 'ಅವಸ್ಥೆ'ಯ ನಾಯಕ ಕೃಷ್ಣಪ್ಪಗೌಡ ವಿಷಯಲಂಪಟನೆಂದು ನಾನು ತಿಳಿದಿಲ್ಲ.

೨. 'ಸಂಸ್ಕಾರ'ದ ನಾಯಕ ಪ್ರಾಣೇಶಾಚಾರ್ಯ 'ಪತನ'ಹೊಂದಿ ವಿಷಯಲಂಪಟನಾಗುತ್ತಾನೆಂದು ನಾನು ತಿಳಿದಿಲ್ಲ.

೩. ಮೊದಲನೆಯದು ನೀವು ಮಾಡುತ್ತಿರುವ ಆರೋಪ; ಎರಡನೆಯದು ಸಂಕುಚಿತ ದೃಷ್ಟಿಯ ಬ್ರಾಹ್ಮಣರು ಮಾಡುವ ಆರೋಪ.

೪. ಡಾ. ಪ್ರೋಲಂಕಿಗೂ ನನಗೂ ನಡೆಯಿತೆಂದು ನೀವು ವರದಿ ಮಾಡಿರುವ ಸಂಭಾಷಣೆ ನಿಜವಲ್ಲ.

ಮೈಸೂರು
೫-೧೦-೮೪

ನಿಮ್ಮ
ಯು. ಆರ್. ಅನಂತಮೂರ್ತಿ

೨. ಡಾ। ಪ್ರೋಲಂಕಿ ರಾಮಮೂರ್ತಿ ಪ್ರತಿಕ್ರಿಯೆ

ಪ್ರಿಯ ಸಂಪಾದಕರೇ,

ಈಗ್ಗೆ ೭ ವರ್ಷದ ಹಿಂದಿನ ಸಂಭಾಷಣೆ ಅನಂತಮೂರ್ತಿಯವರಿಗೆ ಮರೆತಿರಬಹು-

ದಾದ ಕಾರಣಕ್ಕೋ ಮತ್ತಾವುದಕ್ಕೋ, ಅವರು ಅದು "ನಿಜವಲ್ಲ"ವೆಂದಿರುವುದು ನಿಜಕ್ಕೂ ಒಳ್ಳೆಯದೇ ಎಂದು ನಾನು ತಿಳಿಯುತ್ತೇನೆ; ಏಕೆಂದರೆ ಅವರು ನಿಜವೆಂದು ಒಪ್ಪಿದರೆ ಆ ವಿಷಯ ಸಂಪೂರ್ಣ ಸಾಹಿತ್ಯೇತರ ವಿಷಯವಾಗಿ ಗೊಂದಲಕ್ಕಿಟ್ಟು ಕೊಳ್ಳುತ್ತದೆ; ಶಾಂತವೇರಿ ಗೋಪಾಲಗೌಡರನ್ನು **ಅವಸ್ಥೆ** ಕೃಷ್ಣಪ್ಪಗೌಡನಿಗೆ ಸಮೀಕರಿಸುವ ಅನಾವಶ್ಯಕ ಅವಾಂತರವಾಗಿಬಿಡುತ್ತದೆ.

ಅವಸ್ಥೆಯನ್ನು ಹಸ್ತಾಕ್ಷರದಲ್ಲಿ ಓದಿದ ಒಬ್ಬಿಬ್ಬರು ಆಪ್ತರಲ್ಲಿ ನಾನೂ ಒಬ್ಬ ನಾಗಿದ್ದೆ; ಅದನ್ನು ಓದಿ, ಅದರಲ್ಲಿನ ಕೃಷ್ಣಪ್ಪ ಪಾರ್ಶ್ವಕ್ಕೆ "ಸತ್ತು" ಪ್ರೇಮಕ್ಕೆ "ಹುಟ್ಟು"ವುದನ್ನು, ಪುನರ್ಜನ್ಮವನ್ನು, ಒಂದು ಅನನ್ಯ ಕಲಾಸಾಧನೆಯೆಂದು ಗುರುತಿಸಿದ್ದೆ. ಅನಂತಮೂರ್ತಿಯವರು, ಕೃಷ್ಣಪ್ಪನ ಲೈಂಗಿಕತೆಯನ್ನು ಪ್ರಸ್ತಾಪಿಸಿ ಗೋಪಾಲಗೌಡರು ಮಾತ್ರ ಯಾವ ರೀತಿಯ ಲೈಂಗಿಕ ಪ್ರಲೋಭಕ್ಕೆ ಒಳಗಾಗಿರ ಲಿಲ್ಲವೆಂದರು. ಅದಕ್ಕೆ ನಾನು, **ಅವಸ್ಥೆ**ಯ ಓದುಗರೆಲ್ಲರೂ ಗೋಪಾಲಗೌಡರು ಲೈಂಗಿಕ ದೌರ್ಬಲ್ಯಕ್ಕೆ ತುತ್ತಾಗಿದ್ದರೆಂದೇ ತಿಳಿಯುತ್ತಾರಲ್ಲಾ, ಅದರಿಂದ ಗೋಪಾಲ ಗೌಡರಿಗೆ ಮಹಾ ಅಪಚಾರವಾಗಿ ಬಿಡುತ್ತದಲ್ಲಾ ಎಂದಿದ್ದಕ್ಕೆ **ಅವರು** "ಬರಹಗಾರ ನಾಗಿ ನನಗೆ ಬದಲಾವಣೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ" ಎನ್ನುವ ಅರ್ಥದಲ್ಲಿ ಮಾತಾಡಿದ್ದರು.

ಅನಂತಮೂರ್ತಿಯವರ ಈ ತೀರ್ಮಾನ ಅವರ ಮತ್ತು ಗೋಪಾಲಗೌಡರ ಸ್ನೇಹಕ್ಕೆ ಸಂಬಂಧಿಸಿದ್ದು, ಅವರ ನೈತಿಕ, ಧಾರ್ಮಿಕ ನಿಲುವುಗಳಿಗೆ ಸಂಬಂಧಿಸಿದ್ದು— **ಅವಸ್ಥೆ**ಯ ವಿಮರ್ಶಕನಿಗೆ ಸಂಬಂಧಿಸಿದುದಲ್ಲ. ಆದ್ದರಿಂದ, ಅವರು ಸಂಭಾಷಣೆ "ನಿಜವಲ್ಲ"ವೆಂಬ ಅವರ ನಿರಾಕರಣೆ ಸರಿಯಾಗಲೀ ತಪ್ಪಾಗಲೀ ಅದು ಅಪ್ರಸ್ತುತ.

ಇನ್ನು ಅವರ ಉಳಿದ ಮೇಲಿನ ಮೂರು ನಿರಾಕರಣೆಗಳು ಸರಿಯಾಗಲಾರವು. ಏಕೆಂದರೆ ಕಥೆಗಳ ಪಾತ್ರಗಳು, ಕೃಷ್ಣಪ್ಪ, ಪ್ರಾಣೇಶಾಚಾರ್ಯ "ವಿಷಯ ಲಂಪಟ ರಲ್ಲ" ಎನ್ನುವ ಮಾತು ವಿಮರ್ಶೆಗೆ ಸೇರಿದುದು : ಅದನ್ನು ಅವರು ವಿಮರ್ಶಕರಾಗಿ ಯಷ್ಟೇ ಹೌದು, ಅಲ್ಲ ಎನ್ನಬೇಕೇ ಹೊರತು, ಹಾಗೆ ಅನ್ನುವಾಗ ವಿಮರ್ಶಕರ ಜವಾಬ್ದಾರಿಯಿಂದ ಅದನ್ನು ಅವರ ಕಥೆಗಳಲ್ಲಿ ರುಜುವಾತುಪಡಿಸಬೇಕಾಗಲಿ ಬರಿದೆ, ಅವರು ಆಕಥೆಗಳ ಕರ್ತೃಗಳೆಂದ ಮಾತ್ರಕ್ಕೆ, ಆ ಕರ್ತೃತ್ವದ ಅಧಿಕಾರದಿಂದಲೇ ಹಾಗೆನ್ನುವ ನಿರಾಕರಣೆ ಸರಿಯಾಗಲಾರದು; ಅದು ಸಾಹಿತ್ಯೇತರ, ವಿಮರ್ಶೇತರ ನಿರಾಕರಣೆಯಷ್ಟೇ.

ಅಂದಾಗ ನಾನು ಆ ಪಾತ್ರಗಳು "ವಿಷಯ ಲಂಪಟ"ರು ಎನ್ನುವುದನ್ನು ಸಮರ್ಥಿಸು ತ್ತಿಲ್ಲ. ಅಥವಾ ಅಲ್ಲಗಳೆಯುತ್ತಿಲ್ಲ; ಹಾಗೆ ಅನ್ನುವ ಅಧಿಕಾರ ಯಾವ ಓದುಗನಿಗೂ ವಿಮರ್ಶಕನಿಗೂ, ಓದುಗನಾಗಿ, ವಿಮರ್ಶಕನಾಗಿ ಇದೆ ಎನ್ನುತ್ತಿದ್ದೇನೆ.

ನನ್ನಷ್ಟಕ್ಕೆ ಓದುಗನಾಗಿ ಹೇಳುವುದಾದರೆ, ನನ್ನ **ಸಂಕ್ರಮಣದ** ಲೇಖನ ಎಲ್ಲೂ ಆ ಪಾತ್ರಗಳನ್ನು "ವಿಷಯ ಲಂಪಟರು" ಎಂದಂತಿಲ್ಲ : ಆ ಮಾತು ಅಲ್ಲಿನ ಪಾತ್ರಗಳಿಗೆ, ಅವರ ಮೂಲಭೂತ ಘನತೆ ಗೌರವಗಳಿಗೆ ಪ್ರಾಮಾಣಿಕತೆಗೆ ಸಲ್ಲುವಂತಾದ್ದಲ್ಲ : ಆ ಪಾತ್ರಗಳು "ವಿಷಯಲಂಪಟ"ರಲ್ಲ—ತದ್ವಿರುದ್ಧವಾದ ಪ್ಯೂರಿಟನ್ನರು (Puritans); ಲೈಂಗಿಕ ಸಂದರ್ಭದಲ್ಲಿ ಅಳುಕು ಆತಂಕಗಳಿಂದ, ನಾಚಿಕೆ ಭಯಗಳಿಂದ ಕೂಡಿದ, ಕೂಡುವ ಸಂದರ್ಭದಲ್ಲಿ ನಿಸ್ಸಹಾಯಕರಾದ ಶಿಶುಗಳೇ ಆಗಿ ಹೆಣ್ಣನ್ನು ತಾಯಿಯಾಗಿ ಅಪ್ಪುವ, ಭಯಭಕ್ತ "ತಾಯಿಗ್ಗಂಡ"ರು—"ಅಮ್ಮ" ನೆಂಬ ಉದ್ಗಾರದಲ್ಲಿ ಆರ್ಗ್ಯಾಸಂ (orgasm) ಅನುಭವಿಸುವ "ಅಮ್ಮನ ಮಕ್ಕ"ಳು: ಪಾಪಿಗಳಲ್ಲ—ಪಾಪದವರು : "ವಿಷಯ ಲಂಪಟ"ರಂತೆ ತಮ್ಮನ್ನು, ಇತರರನ್ನು ಶೋಷಣೆ ಮಾಡುವ ಶೋಷಕ-ಶೋಷಿತರಲ್ಲ: ತಮ್ಮನ್ನು ತಾವು, ತಿಳಿದೋ ತಿಳಿಯದೆಯೋ, ವಂಚನೆ ಮಾಡಿಕೊಂಡ, ಇತರರನ್ನು ತಾವು, ತಿಳಿದೋ ತಿಳಿಯದೆಯೋ, ವಂಚನೆ ಮಾಡುವ, ಪಾಪದವರು.

ಅಡಿಗ ಅನಂತಮೂರ್ತಿಯವರ ಕಥಾಪಾತ್ರಗಳಿಂದ ಎಚ್ಚರತಪ್ಪಿದ ಓದುಗರಿಗೆ ಒದಗುತ್ತಿರುವ ಪ್ರಾಣಭಯ : ಅವರು ಪಾಪಿ, ವಿಷಯ ಲಂಪಟರಾಗಿದ್ದರೆ ಅಷ್ಟು ಭಯವಿರಲಿಲ್ಲ : ಅವರು ಪಾಪದ "ತಾಯಿಗ್ಗಂಡ" ರಾಗಿರುವುದರಿಂದ, ಅತ್ಯಂತ ಮಾರಕವಾದ ಗುಹ್ಯರೋಗಗಳಂತೆ, ಕ್ಷಯ ಕ್ಯಾನ್ಸರುಗಳಂತೆ, ಮೃತ್ಯುಭಯಂಕರರು.

ಅಡಿಗ ಅನಂತಮೂರ್ತಿಯವರ ಕಥೆಗಳಲ್ಲಿನ ಮಹಾ ಅಪಾಯ. ಅಡಿಗರ ಕಾವ್ಯದ ಸೋಷಿಯಲಿಸಮ್ಮು, ಸಿನಿಸಿಜಮ್ಮು ಅಷ್ಟು ಅಪಾಯಕಾರಿಯಲ್ಲ: ಅದು ಕಣ್ಣಿಗೇ ಕಾಣುವ ಕೋರೆಹಲ್ಲು, ಕೊಂಬು, ಉಗುರು : ಅದು ಸಮಾಜಕ್ಕೆ ಮಾರಕನಾದ, ಶೋಷಕನಾದ "ವಿಷಯಲಂಪಟ"ನಂತೆ, ಬಹಿರಂಗ : ಆದರೆ ಅನಂತಮೂರ್ತಿಯವರ ಕಥಾಕವನ "ತಾಯಿಗ್ಗಂಡ"ನಂತೆ ಗುಹ್ಯಾತ್ ಗುಹ್ಯತಮ, ಕ್ಯಾಮಾಫ್ಲೇಜ್‌ನಲ್ಲಿ ಅಡಗಿದ ಹಿತಶತ್ರು.

ಅನಂತ ಮೂರ್ತಿಯವರ ಕಥಾಕಾವ್ಯದಲ್ಲಿ "ಪ್ರತಿಭೆ" ಇದೆ, "ಮಂತ್ರ ಮುಗ್ಧ"ತೆ ಇದೆ-ಇದನ್ನು ಸಂಕ್ರಮಣದ ಲೇಖನ ಒತ್ತಿಹೇಳಿದೆ-ಆದರೆ ಆ "ಪ್ರತಿಭೆ" ಮಾಂತ್ರಿಕವಾದದ್ದು: ಮಾದಕವಾದದ್ದು : "ಮಾಂತ್ರಮುಗ್ಧ"ಗೊಳಿಸುವ ಹಿಪ್ನಾಟಿಸಮ್ಮಿನ ಸಮ್ಮೋಹಕತೆಯದು—**ಸೂರ್ಯನ ಕುದುರೆಯಂತೆ** ಮನಮೋಹಕವಾದದ್ದು—ಹಿವೆಂಕಟನು ಪ್ರಬುದ್ಧನಾದ, ಪ್ರಜ್ಞಾವಂತ ಅನಂತುವನ್ನೂ ತನ್ನ ಸಮ್ಮೋಹಕತೆಯಿಂದ ಒಲಿಸಿ ಅವನನ್ನು ಸೂರ್ಯನ ಕುದುರೆ ಮಾಡಿದಂತೆ, ತಾನೂ ಸೂರ್ಯನ ಕುದುರೆಯಾದಂತೆ, ತನ್ನನ್ನೂ. ಅನಂತುವನ್ನೂ "ಕೊನೆಗೆ ನವಿಲು ಗುಡ್ಡ"ಕ್ಕೆ ಕೊಂಡೊಯ್ಯುವ ಆಸ್ರಾಯದಂತೆ, ಕಿಂದರ ಜೋಗಿಯು ತನ್ನ ಸಂಗೀತದ ನಾದ

ಸಮ್ಮೋಹಕತೆಯಿಂದ ಊರಿನ ಮಕ್ಕಳನ್ನೆಲ್ಲಾ ಗುಹೆಗೆ ಕೊಂಡೊಯ್ದಂತೆ. ನವಿಲು ಗುಡ್ಡಕ್ಕೆ, ಬಿಸಿಲು ಕುದುರೆಗೆ, ಕೊಂಡೊಯ್ಯುವ ಮಾಯಾವಿಯ ಮಾಯಾಜಾಲ ದಂತೆ, ಕಿಂದರ ಜೋಗಿಯ ಕಿನ್ನರಿಯಂತೆ.

ಆದ್ದರಿಂದ, ಸಂಪಾದಕರೇ, ಸಂಭಾಷಣೆ ನಿಜವಿರಲಿ ಇಲ್ಲದಿರಲಿ, ಪಾತ್ರಗಳು "ವಿಷಯ ಲಂಪಟ"ರಿರಲಿ, ಇಲ್ಲದಿರಲಿ–ನಮ್ಮ ಮುಂದಿರುವುದು ಅನಂತಮೂರ್ತಿಯವರ ಕಥಾಸಾಹಿತ್ಯದ "ಬಿಸಿಲುಗುದುರೆ", ಅದು ನಮ್ಮನ್ನು ನಮ್ಮ ಹೆಂಡಿರುಮಕ್ಕಳಿಂದ ಕೊಂಡೊಯ್ಯುತ್ತಿರುವ "ನವಿಲುಗುಡ್ಡ", ನಮ್ಮ ಮಕ್ಕಳನ್ನು ನಮ್ಮಿಂದ ಕೊಂಡೊ ಯ್ಯುತ್ತಿರುವ ಕಿಂದರಿಜೋಗಿಯ "ಗುಹೆ": ಅದಕ್ಕೆ ನಾವು ಎಚ್ಚುತ್ತು ಕೊಳ್ಳುತ್ತೇವೆ ಯೋ, ಅಥವಾ ಮಲಗಿ ಕನಸು ಉಣ್ಣುತ್ತೇವೆಯೋ ಆದೀಗ ಬದುಕು ಸಾವಿನ ಪ್ರಶ್ನೆ.

ಪೋಲಂಕಿ ರಾಮಮೂರ್ತಿ

●

೩. ಚಂಪಾ: ಸಂಪಾದಕೀಯ—ಒಂದು ಪ್ರತಿಕ್ರಿಯೆ

ಸಂಕ್ರಮಣ; ೧೫೧–೧೫೨; ಅಗಸ್ಟ–ಸೆಪ್ಟಂಬರ ೧೯೮೧ ರಲ್ಲಿ ಚಂದ್ರಶೇಖರ ಪಾಟೀ ಲರು ಸಂಪಾದಕೀಯ ಬರೆಯುತ್ತಾ ಈ ಮಾತುಗಳನ್ನು ಆಡುತ್ತಾರೆ: 'ಸೃಜನ ಶೀಲ ಲೇಖಕನ ಸ್ವಾತಂತ್ರ್ಯ' ಎಂಬ ಆಕರ್ಷಕ ಚೌಕಟ್ಟಿನಲ್ಲಿ ಸತ್ಯದ ವಿಕೃತೀಕರಣವು ಒಂದು ಸಿದ್ಧಾಂತವಾಗಿ ನಮ್ಮ ನಿಮ್ಮ ನಡುವೆ ಬರೆಯುತ್ತಿರುವ ಅನಂತಮೂರ್ತಿಯವರಲ್ಲಿ ಕೂಡ, ಅಸಹ್ಯವಾಗಿ, ಅವಮಾನವೀಯವಾಗಿ ಕೆಲಸ ಮಾಡುತ್ತಿರುವುದು ನೋಡಿದರೆ ದಿಗ್ಭ್ರಾಂತಿ ಎನಿಸುತ್ತದೆ." 'ಅವಸ್ಥೆ' ಕಾದಂಬರಿ ಮತ್ತು ಶಾಂತವೇರಿ ಗೋಪಾಲ ಗೌಡರ ಬಗ್ಗೆ ಮಾತಾಡುವ ಸಂದರ್ಭದಲ್ಲಿ ಎದ್ದೇಳುವ 'ಸೃಜನಶೀಲ ಲೇಖಕನ ಸ್ವಾತಂತ್ರ್ಯ' ಮತ್ತು 'ಸೃಜನಶೀಲಶಕ್ತಿ'—ಅಂಶಗಳು ವರ್ತಮಾನದಲ್ಲಿ ಇನ್ನೂ ಹಸಿರಾಗಿರುವ ವ್ಯಕ್ತಿಯೊಬ್ಬನ ತೇಜೋವಧೆ ಮಾಡಬಹುದು ಎಂಬುದಕ್ಕೆ ನಿದರ್ಶನ ವಾಗಿವೆ.

ಬಹುಶಃ ಪಾಟೀಲರಿಗೆ ತಿಳಿದಿಲ್ಲ — ಡಾ. ಪ್ರೋಲಂಕಿ ರಾಮಮೂರ್ತಿ ಮತ್ತು ಅನಂತ ಮೂರ್ತಿ ನಡುವೆ ಗೋಪಾಲಗೌಡ ಮತ್ತು 'ಅವಸ್ಥೆ'ಯ ಬಗ್ಗೆ ನಡೆದಿರುವ ಸಂಭಾ ಷಣೆಯನ್ನು ಸಾರಾಸಗಟಾಗಿ ನಡೆದೇ ಇಲ್ಲವೆಂದು ಅನಂತಮೂರ್ತಿ ತಳ್ಳಿ ಹಾಕುತ್ತಾ ರೆಂಬ ಸತ್ಯ. ಅನಂತಮೂರ್ತಿಯವರು ತಾವು ಒಮ್ಮೆ ಹೇಳಿದ್ದನ್ನು ಮತ್ತೊಮ್ಮೆ ಹೇಳೇ ಇಲ್ಲವೆಂದು ಸಾಧಿಸುವ ಶಕ್ತಿ–ಯುಕ್ತಿಗಳನ್ನು ಹೊಂದಿದ್ದಾರೆ. ಅದಕ್ಕೆ ಒಂದು ಸ್ಪಷ್ಟ ಉದಾಹರಣೆ ಇಲ್ಲಿದೆ :

೧೯೭೮ರ ಡಿಸೆಂಬರ್ ಚಳಿಯ ದಿನಗಳು. ಮೈಸೂರಿನ ದಾಸ ಪ್ರಕಾಶ್ ಹೋಟೆಲ್‌ನಲ್ಲಿ ನಾನು, ಚಂಪಾ, ಅನಂತಮೂರ್ತಿ ಸೇರಿದ್ದೆವು. 'ಅವಸ್ಥೆ' ಪ್ರಕಟವಾಗಿ ಒಂದು ತಿಂಗಳಾಗಿತ್ತು. ಇನ್ನೂ ದೇಸಾಯಿ-ಗೋಸಾಯಿಗಳ ವಿಮರ್ಶೆ 'ಪ್ರಜಾವಾಣಿ'ಯಲ್ಲಿ ಬಂದಿರಲಿಲ್ಲ.

"ಪಾಟೀಲ್, ನನ್ನ 'ಅವಸ್ಥೆ' ನಿಮಗೆ ಕಳಿಸಿದ್ದೆ. ತಲುಪಿರಬೇಕಲ್ಲ? ವರ, ವರದ ರೀತಿ ಬಂತು ಬರವಣಿಗೆ! ಓದಿದಿರಾ?" ಕೇಳಿದರು ಅನಂತಮೂರ್ತಿ.

"ಕಾದಂಬರಿ ಬಂತು. ಇನ್ನೂ ಓದಿಲ್ರೀ" ಎಂದರು ಚಂಪಾ.

"ನೀವು?" ಎಂದು ನನ್ನನ್ನು ಕೇಳಿದರು.

"ಓದಿದೆ" ಎಂದೆ.

"ನೀವು ಓದ್ಬೇಕು ಪಾಟೀಲ್. ಗೋಪಾಲಗೌಡರನ್ನು ಕುರಿತು ಬರೆದಿದ್ದೇನೆ. ಗೋಪಾಲಗೌಡರು ನನಗೆ ತೀರ ಬೇಕಾದವರು. ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ದೊಡ್ಡ ವ್ಯಕ್ತಿ. ಅವರ ಬಗ್ಗೆ ಕಾದಂಬರಿ ಬರೆಯಬೇಕೂಂತ ಬಹಳ ದಿನ ಅಂದುಕೊಂಡಿದ್ದೆ. ಈಗ ಬರೆಯಲು ಸಾಧ್ಯ ಆಯ್ತು. 'ಅವಸ್ಥೆ'ಯ ನಾಯಕ ಕೃಷ್ಣಪ್ಪಗೌಡನ ಪಾತ್ರ ಎಂಬತ್ತು ಪರ್ಸೆಂಟ್ ಗೋಪಾಲಗೌಡ್ರು." ಎಂದರು ಅನಂತಮೂರ್ತಿ.

ನಂತರ 'ಶಿಲ್ಪಶ್ರೀ'ಯಲ್ಲಿ ಬೀರು ಕುಡಿದು ಎದ್ದಿದ್ದೆವು.

ಈ ಪ್ರಸಂಗ ನಡೆದು ಎರಡೂವರೆ ವರ್ಷಗಳು ಕಳೆದಿದ್ದವು. ಕೋಣಂದೂರು ವೆಂಕಪ್ಪಗೌಡರು ಶಾಂತವೇರಿಯವರ ಬಗ್ಗೆ 'ಜೀವಂತ ಜ್ವಾಲೆ'ಯನ್ನು ಸಂಪಾದಿಸಿದ್ದರು. ೧೯೮೧ರ ಮಧ್ಯಭಾಗದಲ್ಲಿ ಅದರ ಬಿಡುಗಡೆ ಕಾರ್ಯಕ್ರಮ : ಮೈಸೂರಿನ ಗಾಂಧೀಭವನದಲ್ಲಿ ಕೃತಿ ಬಿಡುಗಡೆ ಮತ್ತು ಶಾಂತವೇರಿ ಗೋಪಾಲಗೌಡರ ಬಗ್ಗೆ ಮಾತು—ಅನಂತಮೂರ್ತಿಯವರಿಂದ. ಅನಂತಮೂರ್ತಿ ಮಾತನಾಡಲು ಎದ್ದರು. ಗೆಳೆಯ ಕೆ. ರಾಮದಾಸ್ "ಗೋಪಾಲಗೌಡರ ಬಗ್ಗೆ ಅನಂತಮೂರ್ತಿಯವರಿಗೆ ಮಾತಾಡಲು ನೈತಿಕ ಹಕ್ಕಿಲ್ಲ 'ಅವಸ್ಥೆ' ಕಾದಂಬರಿ ಬರೆದು ಗೋಪಾಲಗೌಡರ ವ್ಯಕ್ತಿತ್ವಕ್ಕೆ ಮಸಿ ಬಳಿದಿದ್ದಾರೆ" ಎಂದು ಪ್ರತಿಭಟಿಸಿದ್ದರು.

ಅನಂತಮೂರ್ತಿ, "ನಾನೊಬ್ಬ ಸೃಜನಶೀಲ ಲೇಖಕ. ಒಂದು ಕಾದಂಬರಿಯಲ್ಲಿ ಒಂದು ಪಾತ್ರವನ್ನು ಹೇಗೆ ಬೇಕಾದರೂ ಚಿತ್ರಿಸುವ ಹಕ್ಕು ಲೇಖಕನಿಗಿದೆ" ಎಂದು ವಾದಿಸಿದರು.

"ಆದರೆ ನೀವು ಚಿತ್ರಿಸಿರುವುದು ಸಮ್ಮೋಹನಿದ್ದು. ಗತಿಸಿದ ವ್ಯಕ್ತಿಯನ್ನು, ಆತನನ್ನು ಬಲ್ಲವರು ಅನೇಕರು ಇನ್ನೂ ಇದ್ದಾರೆ. ಅವರು ವೈಯುಕ್ತಿಕವಾಗಿ ಲಂಪಟರಾಗಿರಲಿಲ್ಲ. ಅವರ ವೈಯುಕ್ತಿಕ ಜೀವನ ಶುದ್ಧವಾಗಿತ್ತು" ಎಂದರು ಮತ್ತೊಬ್ಬ ಸಮಾಜವಾದಿ ಗೆಳೆಯರು.

"ಕೃಷ್ಣಪ್ಪಗೌಡನಿಗೂ ಗೋಪಾಲಗೌಡರಿಗೂ ಸಂಬಂಧವೇ ಇಲ್ಲ" ಎಂದರು ಅನಂತಮೂರ್ತಿ.

ಈ ಹಿಂದೆ ಶಿವಮೊಗ್ಗದ ಗೆಳೆಯರ ಬಳಿಯೂ 'ಅವಸ್ಥೆ' ಗೋಪಾಲಗೌಡರನ್ನು ಕುರಿತು ಬರೆದ ಕಾದಂಬರಿ ಎಂದು ಹೇಳಿದ್ದರು. ಗಾಂಧೀಭವನದ ಸಭೆಯಲ್ಲಿದ್ದ ನಾನು "ಸಾರ್, ಹಿಂದೆ ಹೋಟೆಲ್ ದಾಸ್ ಪ್ರಕಾಶ್‌ನಲ್ಲಿ ಚಂಪಾ ಮತ್ತು ನನ್ನ ಜೊತೆ ಮಾತನಾಡುವಾಗ "ಅವಸ್ಥೆಯ ನಾಯಕ ಕೃಷ್ಣಪ್ಪಗೌಡನ ಪಾತ್ರ ಎಂಬತ್ತು ಪರ್ಸೆಂಟು ಗೋಪಾಲಗೌಡ್ರು" ಎಂದು ಹೇಳಿದ್ದಿರಿ. ಈಗ ಇಲ್ಲಾ ಅಂತಿದ್ದೀರಲ್ಲಾ?" ಎಂದು ಕೇಳಿದೆ.

ಅನಂತಮೂರ್ತಿ ನನ್ನ ಮಾತನ್ನು ಸಾರಾಸಗಟಾಗಿ ತಿರಸ್ಕರಿಸಿದರು. "ನಾನು ಹಾಗೆ ಎಲ್ಲಿಯೂ ಹೇಳಿಲ್ಲ. ಚಂಪಾ, ನಿಮ್ಮ ಜೊತೆ ನಾನು ಎಂದೂ ಸೇರಿರಲಿಲ್ಲ" ಎಂದರು.

ಖಾಸಗೀ ಚರ್ಚೆಯಲ್ಲಿ ಅತ್ಯಂತ ಪ್ರಾಮಾಣಿಕರಂತೆ ಮಾತಾಡುವ, ಸಾರ್ವಜನಿಕವಾಗಿ ಖಾಸಗಿ ಬದುಕಿನ ಆತ್ಮೀಯತೆಯನ್ನು ತಿರಸ್ಕರಿಸುವ ಅನಂತಮೂರ್ತಿಯವರು 'ಅಂದರ್-ಬಾಹರ್'ಗಳಲ್ಲಿ ಭಿನ್ನವಾಗಿರುವುದು ಅಸಹ್ಯವೂ ಅಮಾನವೀಯವೂ ಆಗಿದೆ.

ಅನಂತಮೂರ್ತಿಯವರಂಥ ಗೆಳೆಯನನ್ನು ಪಡೆದ ಗೋಪಾಲಗೌಡರ ಸ್ನೇಹಕ್ಕೆ 'ಅವಸ್ಥೆ'ಯಲ್ಲಿ ಪ್ರತಿಫಲ ಸಿಕ್ಕಿದೆ. 'ಗಂಗಾಜಲ'ದ ಪವಿತ್ರ ವಾಸನೆ ಕರ್ನಾಟಕದ ತುಂಬಾ ಹರಡಿದೆ.

ಶಿವರಾಮು ಕಾಡನಕುಪ್ಪೆ

●

ಎನ್. ಎಸ್. ರಘುನಾಥ

'ದರುಮುನಹಳ್ಳಿಯ ಲಗ್ಗೆ ಚೆಂಡುಗಳು'

ವೈಶಾಖ : ಒಂದು ವಿಶ್ಲೇಷಣೆ

ಸುಮಾರು ೨೦ ವರ್ಷಗಳ ಅವಧಿಯ ನಂತರ ಪ್ರಕಟವಾಗಿರುವ 'ವೈಶಾಖ' ಚದುರಂಗರ ಬರವಣಿಗೆಯಲ್ಲಿ ಹೊಸ ರೀತಿಯದು. 'ಇಲಿ ಬೋನು' ಈ ಅವಧಿಯಲ್ಲಿ ಬಂದ ನಾಟಕ. ಇದರ ಬಗ್ಗೆ ಕನ್ನಡದ ಅತಿ ಸೂಕ್ಷ್ಮ ವಿಮರ್ಶಕರಲ್ಲೊಬ್ಬರಾದ ಜಿ. ಎಚ್. ನಾಯಕರ ವಾಕ್ಯದಲ್ಲಿ ಹೇಳುವುದಾದರೆ "ಪ್ರಗತಿಶೀಲರಲ್ಲೆಲ್ಲ ಚದುರಂಗರೊಬ್ಬರೇ ಅಸಂಗತ ನಾಟಕಗಳ ಮಾದರಿಯ 'ಇಲಿ ಬೋನು' ಎಂಬ ನಾಟಕ ಬರೆಯುವುದರ ಮೂಲಕ ತಮ್ಮ ಸಾಹಿತ್ಯ ಜೀವನದಲ್ಲಿ ಇನ್ನೊಂದು ಅವಸ್ಥೆಯ ಪ್ರಾರಂಭವನ್ನು ಸೂಚಿಸಿದ್ದಾರೆ." (ಸಮಕಾಲೀನ ಪು ೯೩). ಈ ಕಾದಂಬರಿ, ಒಂದೇ ಸಮಾಜದಲ್ಲಿ ಬದುಕಿದ್ದರೂ ಸಂಸ್ಕೃತಿಯ ವಿವಿಧ ಮುಖಗಳನ್ನು ತೋರಿಸುವ ಹಲವಾರು ಜಾತಿಯ ಜಗಳಗಳನ್ನೊಳಗೊಂಡ ಒಂದು ಹಳ್ಳಿಯ ದುರಂತ ಜೀವನವನ್ನು ಚಿತ್ರಿಸುತ್ತದೆ. ಕತೆಗಾರ ಚದುರಂಗರು ಇಲ್ಲಿ ಬದುಕಿನ ಶೋಧಕರು; ಸಂಸ್ಕೃತಿಯ ಮಾನುಷ–ಅಮಾನುಷ, ಒಳಿತು–ಕೆಡಕುಗಳ ಮೌಲ್ಯ ವಿಮರ್ಶಕರು. ಪಾತ್ರಗಳೂ ಅಷ್ಟೆ: ಗೊತ್ತಾದ ಸಮಾಜದಲ್ಲಿ ಒಪ್ಪಿಕೊಂಡ ನೈತಿಕ ಮೌಲ್ಯಗಳನ್ನು ನಡವಳಿಕೆಯಲ್ಲಿ ಪ್ರಶ್ನಿಸುತ್ತಾ ಅದನ್ನು ಮೀರಿ ಬೆಳೆಯುತ್ತಾರೆ: ಬದುಕಿನ ತಂಡಿತಕ್ಕೆ ಶರಣಾಗತರಾಗುತ್ತಾರೆ. ಕ್ರಮೇಣ ತಾವು ಹುಟ್ಟಿ ಬೆಳೆದ ಜಾತಿ, ಪಂಗಡ ಹಾಗೂ ಅವರ ಸಂಸ್ಕೃತಿಯ ಪ್ರತಿನಿಧಿಗಳಾಗುತ್ತಾರೆ. ಚದುರಂಗರು ಈ ಪಾತ್ರಗಳನ್ನು ಅವರವರ ಹಾದಿಯಲ್ಲಿ ಬೆಳೆಸುತ್ತಾರೆ, ಅವರು ಬೆಳೆಯುವ ರೀತಿಯಲ್ಲಿ ಅವರು ಪ್ರತಿನಿಧಿಸುವ ಸಂಸ್ಕೃತಿಯ ಪರೀಕ್ಷೆ ನಡೆಸುತ್ತಾರೆ. ಯಾವ ಪಾತ್ರವನ್ನೂ ಆದರ್ಶಗೊಳಿಸದೆ, ಅವರವರ ಶಕ್ತಿ ಮತ್ತು ಬಲಹೀನತೆಗಳನ್ನು ಬದುಕಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಗುರುತಿಸುತ್ತಾ, ದರುಮುನಹಳ್ಳಿಯ ದುರಂತ ಕತೆ

ಯನ್ನು ಹೇಳುವುದು ಚದುರಂಗರ ವಿಶಿಷ್ಟ ರೀತಿ. ಅತ್ಯಂತ ಅಮಾನುಷ ಘಟನೆಗಳಿಂದ ಹಿಡಿದು ಮನ ಮಿಡಿಯುವ ಮಾನವೀಯ ಸಂದರ್ಭಗಳವರೆಗೂ ಹಳ್ಳಿಯ ಬದುಕಿನ ವಿವಿಧ ಮುಖಗಳನ್ನು ತೋರಿಸುವ 'ವೈಶಾಖ' ಈ ದಶಕದ ಪ್ರಮುಖ ಕಾದಂಬರಿಗಳಲ್ಲೊಂದು. ಇವರ ಹರಹು ಈಗಾಗಲೆ ಕನ್ನಡದಲ್ಲಿ ಕ್ಲಾಸಿಕ್ಸ್ ಎನಿಸಿಕೊಂಡಿರುವ' ಗ್ರಾಮಾಯಣ', 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು'ಗಳ ರೀತಿಯದು ಎಂಬ ಮಾತನ್ನು ಹೇಳಬಹುದು.

'ವೈಶಾಖ' ಕಾದಂಬರಿಯ ತಂತ್ರ ಕನ್ನಡ ಸಾಹಿತ್ಯದಲ್ಲಿ ಸ್ವಲ್ಪ ಭಿನ್ನವಾದುದು. ಇಲ್ಲಿಯ ಪ್ರಮುಖ ಪಾತ್ರಗಳಾದ ಲಕ್ಕ ಮತ್ತು ರುಕ್ಮಿಣಿಯರ ಮೂಲಕ ನಮಗೆ ಕತೆ ದೊರೆಯುತ್ತದೆ. ಅಂದರೆ ಅನುಭವ ಗ್ರಹಿಕೆ ಅವರ ಪ್ರಜ್ಞೆಗೇ ಸೀಮಿತವಾದುದು. ಕತೆ ದೊರೆಯುವುದೂ ಮೂರು ವಿಧಗಳಲ್ಲಿ: ಒಂದು, ವರ್ತಮಾನದಲ್ಲಿ ನಡೆಯುತ್ತಿರುವ ಘಟನೆಗಳಲ್ಲಿ ಭಾಗವಹಿಸುತ್ತಿರುವ ಪಾತ್ರಗಳು ತಾವು ಗ್ರಹಿಸಿದ ರೀತಿ ನಮಗೆ ಹೇಳುತ್ತ ಹೋಗುತ್ತಾರೆ. ಎರಡನೆಯದು, ಭೂತಕಾಲವಲ್ಲಿ ನಡೆವ ಘಟನೆಗಳನ್ನು ಹಿನ್ನೋಟವ (flashback) ಮೂಲಕ ಹೇಳುತ್ತಾರೆ. ಕೊನೆಯದಾಗಿ, ಭವಿಷ್ಯದಲ್ಲಿ ಆಗುವುದನ್ನು ಕನಸುಗಳು ಮತ್ತು ಸಂಕೇತಗಳ ಮೂಲಕ ಕಾದಂಬರಿಕಾರರು ಸೂಚಿಸುತ್ತಾ ಹೋಗುತ್ತಾರೆ. ಹೀಗೆ ಹಳ್ಳಿಯ ಸಮಗ್ರ ಚಿತ್ರ ನಮಗೆ ಸಿಗುತ್ತದೆ-ಯಾದರೂ ಹೊಲೆಯರ ಮತ್ತು ಹಿಂದುಳಿದ ಜಾತಿಯ ಕೇರಿಗಳಲ್ಲಿ ನಡೆಯುವುದು ಲಕ್ಕನ ಮೂಲಕವೂ, ಬ್ರಾಹ್ಮಣ ಕೇರಿಯಲ್ಲಿ ನಡೆಯುವುದು ರುಕ್ಮಿಣಿಯ ಮೂಲಕವೂ (ಆಕೆ ಕಣ್ಮರೆಯಾದ ಮೇಲೆ) ಕೃಷ್ಣಶಾಸ್ತ್ರಿಯ ಮೂಲಕವೂ ದೊರೆಯುತ್ತದೆಯಾದುದರಿಂದ ಕಾದಂಬರಿಯ ಒಟ್ಟಾರೆ ಅನುಭವ ಎರಡು ಭಾಗವಾಗಿ ಸೀಳಿಕೊಂಡು ನಮ್ಮನ್ನು ತಲುಪುತ್ತದೆ. ಇದಿಷ್ಟೂ ಸಹ ಆಯಾ ಪಂಗಡದವರು ಬಳಸುವ ಆಡುಭಾಷೆಯಲ್ಲಿಯೆ ದಾಖಲಾಗಿದೆ. ಸಹಜವಾದ ಭಾಷೆ ಪಾತ್ರಗಳನ್ನು ಅನುಭವಕ್ಕೆ ಹತ್ತಿರ ಉಳಿಸುತ್ತದೆ. ಲಕ್ಕ, ನಿಂಗಯ್ಯ, ಕಲ್ಯಾಣಿ, ದ್ಯಾವಾಜಮ್ಮ, ಬುಂಡಮ್ಮ ಮತ್ತು ಇತರರು ಬಳಸುವ ಗ್ರಾಮ್ಯ ಭಾಷೆ ದಟ್ಟವಾಗಿ, ಅಥೆಂಟಿಕ್ ಆಗಿ ಬಳಕೆಯಾಗಿರುವುದರಿಂದ ಭಾಷೆಯ ಕಾವ್ಯಮಯತೆ ಕಾದಂಬರಿಯ ಗದ್ಯವನ್ನು ಕಾವ್ಯ-ಗದ್ಯವನ್ನಾಗಿ ಮಾರ್ಪಡಿಸಿದೆ. ಲಕ್ಕ, ರುಕ್ಮಿಣಿ ಹಾಗೂ ಸ್ವಲ್ಪಮಟ್ಟಿಗೆ ಕೃಷ್ಣಶಾಸ್ತ್ರಿ ಕಾದಂಬರಿಯ ಪ್ರಮುಖ ಪಾತ್ರಗಳಾದರೂ ಇವರನ್ನು ಕಾದಂಬರಿಯ ಪ್ರಮುಖ ಪ್ರಜ್ಞೆ ಎಂದು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಇದರಿಂದಾಗಿ 'ಕಾದಂಬರಿಯ ಮೌಲ್ಯಮಾಪನದಲ್ಲಿ ತೊಡಕುಂಟಾಗುತ್ತದೆ. ಈ ತೊಡಕು ತಂತ್ರದಿಂದಾದದ್ದು ಅಥವ ಕತೆ ಸಂಕೀರ್ಣವಾಗಿ ಪ್ರಮುಖ ಪಾತ್ರಗಳ ಪ್ರಜ್ಞೆ ಸೀಮಿತವಾದುದರಿಂದ ಉದ್ಭವಿಸಿದ್ದು ಎನ್ನುವುದು ಚರ್ಚೆಯಾಗಬೇಕಾದ ವಿಷಯ. ಇದನ್ನು ಲೇಖನದ ಕೊನೆಯಲ್ಲಿ ಮತ್ತೆ ತೆಗೆದುಕೊಳ್ಳುತ್ತೇನೆ.

ಕಾದಂಬರಿಯಲ್ಲಿ ಹಳ್ಳಿಯ ಚಿತ್ರಮಾಲಿನ ಕೋಟೆಯಂತೆ ಯಾರೂ ಎಂದೂ ತಪ್ಪಿಸಿ ಕೊಳ್ಳಲಾಗದಂಥ ಒಂದು ಬಂದೀಖಾನೆ ಉಂಟಾಗಿ ಬದುಕನ್ನು ನಿಧಾನವಾಗಿ ನಾಶ ಮಾಡುತ್ತದೆ. ಕತೆಯ ಪ್ರಮುಖ ಪಾತ್ರಗಳಾದ ಲಕ್ಕ, ರುಕ್ಮಿಣಿ ಮತ್ತು ದ್ಯಾವಾಜಮ್ಮ ಹಳ್ಳಿಯ ಬಗ್ಗೆ ನೋವಿನಿಂದ ಅಂದುಕೊಳ್ಳುತ್ತಾರೆ.

> "ಅಪ್ಪೊಯ, ಯೇನೇನು ಕರಾಮತ್ತು ನಡೀತಿದೆ ಈ ಊರ್ನಲ್ಲಿ.।–" (೧೭೫)
> "......ದಿನೇ ದಿನೇ ತಮ್ಮ ಊರು ಯಾವ ಪ್ರಮಾಣದಲ್ಲಿ ಕೆಡಲು ಪ್ರಾರಂಭ ವಾಗಿದೆ! " (೪೨)
> "ಈ.ಊರ್ನ ಅದ್ಯಾವ ನಕ್ಷತ್ರದಾಗ ಉಟ್ಟಾಕಿದ್ರೊ ಹಿಂದಿನೋರು!"(೩೮೧)

There is something rotten in the State of Denmark ಎನ್ನುವ ಹ್ಯಾಮ ಲೆಟನ ವೇದನೆ ಜ್ಞಾಪಕಕ್ಕೆ ಬರುತ್ತದೆ. ದರುಮನಹಳ್ಳಿಯಲ್ಲಿ ನೈತಿಕ ಮೌಲ್ಯ ಅಧೋಗತಿಯಲ್ಲಿದೆ. "ನೆರೆ ಕೆಟ್ಟರೆ ಕರ ಕಟ್ತವಿ ಅನ್ನೊ ಜನವೆ ಊರು ತುಂಬ।" (೩೦೧). ಅಧರ್ಮವನ್ನೇ ಹಳ್ಳಿಯ ಧರ್ಮವನ್ನಾಗಿ ಮಾಡುವಲ್ಲಿ ಹೆಚ್ಚು ಕಡಿಮೆ ಎಲ್ಲರೂ ಸಹ ಕಲಿಸುತ್ತಾರೆ. ಈ ಎಲ್ಲ ಪಾತ್ರಗಳನ್ನೂ ಚದುರಂಗರು ನಿಧಾನವಾಗಿ ಅವರವರ ಭಾಷೆಯಲ್ಲಿ ನಮ್ಮೆದುರು ಬಿಚ್ಚಿ ಪರಿಚಯಿಸುತ್ತ ಹೋಗುತ್ತಾರೆ.

ನಂಜೇಗೌಡ ಹೆಸರೇ ಸೂಚಿಸುವಂತೆ ನಂಜಿರುವವನು. ಇವನ ಬಗ್ಗೆ ಲಕ್ಕ ಅಂದು ಕೊಳ್ಳುತ್ತಾನೆ: "ನಮ್ಮಾಲೇರ ಕಂಡ್ರಂತು ಪೊಟ್ಟೆ ಪೊಳಗೆ ಇಸ ತುಂಬವ್ನೆ" (೪೩). ದರುಮನಹಳ್ಳಿಯಲ್ಲಿ ಇವನು ಪ್ರಮುಖವಾದ ವ್ಯಕ್ತಿ.ರುಕ್ಮಿಣಿ ಮತ್ತು ದ್ಯಾವಾಜಮ್ಮ ನವರು ಇವನ ಬಗ್ಗೆ ಓದುಗರಿಗೆ ಹೇಳುವುದು; "ಹೆತ್ತ ತಾಯಿ ಲಾಡಿ ಬಿಚ್ಚೊ ಬಡ್ಡಿ ಹೈದ." (೧೮೨), "ನೂರೊಂದು ಗೋವ ತಿಂದ ಹುಲಿ......(೩೪೮). ಲಕ್ಕ ಮತ್ತೊಂದು ಕಡೆ ಅಂದುಕೊಳ್ಳುತ್ತಾನೆ: "ಈ ಗೌಡನೊ ಮಾ ಪಾತಕ..." (೩೬). ಈ 'ಕೊಳಕುಮಂಡ್ಲ' (ಗೌಡ) ಸಾಕಿಕೊಂಡಿರುವ ಚೇಲಗಳೂ ಸಹ "ಹೆತ್ತ ತಾಯಿ ಲಾಡಿ ಬಿಚ್ಚೋ ಲೌಡಿ ಮಕ್ಕಳು" (೪೧೭). ನಿಜ. ಇವರು ತಮ್ಮನ್ನು ಸಾಕಿದ ನಂಜೇಗೌಡನ ಹೆಂಡತಿಯ ಗೋರಿಯನ್ನು ರಾತ್ರಿಯಲ್ಲಿ ಅಗೆದು ಆಕೆಯ ನಗ್ನ ಶರೀರದ ಮೇಲಿರುವ ಒಡವೆಗಳನ್ನು ಅಪಹರಿಸುತ್ತಾರೆ. "ಇಂತಾ ಸೂಳೆ ಮಕ್ಕಳ ಸಾಕ್ಕಂಡು ಊರ್ನೆ ನಿಪಾತ ಮಾಡ್ತಾ ಅವ್ನಲ್ಲ, ಆ ಗೌಡ ?" (೪೧೭) ಎಂದು ಲಕ್ಕ ಅಸಹಾಯಕನಾಗಿ ಮರುಗುವುದನ್ನು ನಾವು ನೋಡಬಹುದು.

ಕೆಂಗಣ್ಣಪ್ಪ "ಮನುಷ್ಯನ ರಕ್ತದ ರುಚಿ ಹಾಟಾದ ಹುಲಿ" (೨೫೩), ಬೆಟ್ಟಯ್ಯ ಚಿಕ್ಕೀ ರಮ್ಮ ಇರುವವರೆಗೂ ಅವಳ ಸಂಗಸುಖಪಟ್ಟು ಕೊನೆಗೆ ಅವಳ ಹೆಣದ ಹೆಬ್ಬೆಟ್ಟು ಗುರುತು ಪಡೆದು ಆಸ್ತಿ ಲಪಟಾಯಿಸುವ ಮೋಸದ ವ್ಯಕ್ತಿ, ಕೇಶವಯ್ಯ ಹಳ್ಳಿಯ

ಮತ್ತೊಬ್ಬ ಮುಖ್ಯ ವ್ಯಕ್ತಿ. ಇವನು ಕೃಷ್ಣಶಾಸ್ತ್ರಿ ಅಂದುಕೊಳ್ಳುವಂತೆ "ಕೇಶವಯ್ಯ ತಾಯಗ್ಗಂಡ ಸಹಜ." (೪೧) ಲಕ್ಷ್ಮಮ್ಮ ಸಹ ಇವನ ಬಗ್ಗೆ ರುಕ್ಮಿಣಿಗೆ ಎಚ್ಚರಿಕೆ ಕೊಡುತ್ತ ನುಡಿಯುತ್ತಾಳೆ. "ನೆರೆಮನೆ ಹೆಂಗಸಿಗೆ ಸೆಗೆದು ಮುತ್ತುಕೊಡುವ ಜಾತಿ." (೨೦೩) ಪಗಡೆಯಾಟದ ಸಂದರ್ಭದಲ್ಲಿ ಅವನು ರುಕ್ಮಿಣಿಗೆ ಕೊಡುವ ಉಪನ್ಯಾಸ ಅವನ ಬದುಕಿನ ನೈತಿಕ ನಿಲುವನ್ನು ಸೂಚಿಸುತ್ತದೆ.

> "ಅಯ್ಯೋ ನೀನು ಸರಿ. ಮೋಸ ಮಾಡದಿದ್ರೆ ಈ ಜೀವನದಲ್ಲಿ ಗೆಲ್ಲ ಲಿಕ್ಕೆ ಆಗತ್ಯೆ ?......... ಇಡೀ ಮಹಾಭಾರತದ ಕತೆಯಲ್ಲಿ ನಾವು ಕಾಣುವು ದೇನು ?.......ಉದ್ದಕ್ಕೂ ಮೋಸ !—ಅದೂ ಶ್ರೀಕೃಷ್ಣ ಪರಮಾ ತ್ಮನಿಂದಲೇ ಅದೆಲ್ಲ ನಡೆಯಿತು ಅಂದ ಮೇಲೆ!............(೨೦೧)

'ಕುತಂತ್ರ', 'ಮೋಸ' ಕೇಶವಯ್ಯನ ನೀತಿ! ಕೃಷ್ಣಪರಮಾತ್ಮನ 'ಕುತಂತ್ರ'ದ ನೀತಿ ಅವನ ಆದರ್ಶ! ಹೆಂಡತಿಗೆ ಪ್ಲೇಗಿನ ಗೆಡ್ಡೆ ಕಾಣಿಸಿಕೊಂಡಾಗ "ತತ್‌ಕ್ಷಣ....... ಮಾನ ಮರ್ಯಾದೆಗೆ ತಿಲಾಂಜಲಿಯಿತ್ತು" (೪೦೭) ಕೃಷ್ಣಶಾಸ್ತ್ರಿಗಳ 'ಕಾಲಂ ಹಿಡಿದು' ಕುಪ್ಪೆ ಮಾತ್ರೆ ತೆಗೆದುಕೊಂಡು ಹೋಗುತ್ತಾನೆ; ನಂತರ ಸುಳ್ಳು ಹೇಳಿ ಲಪಟಾಯಿಸುತ್ತಾನೆ? ಕೊನೆಗೆ ಗಂಡನನ್ನು ಬಿಟ್ಟು ಬಂದು, ತಾಯಿ, ತಂದೆ ಮತ್ತು ಅಣ್ಣನನ್ನು ಕಳೆದುಕೊಂಡು ಅನಾಥಳಾದ ಸಿವನಿಯನ್ನು ಭೋಗಿಸುತ್ತಾನೆ.

ಇಂತ ಕೇಶವಯ್ಯನನ್ನು ತಾಯಗ್ಗಂಡ ಎನ್ನುವ ಕೃಷ್ಣಶಾಸ್ತ್ರಿ ರಾತ್ರಿಯಲ್ಲಿ ಮಲಗಿ ನಿದ್ರಿಸುತ್ತಿದ್ದ ಸೊಸೆಯ ಲಾಡಿ ಬಿಚ್ಚಿಬಿಡುತ್ತಾನೆ.

ಇನ್ನು ಇಲ್ಲಿ ನಡೆಯುವ ಪಂಚಾಯತಿ:ಸಂಕಟ ಮತ್ತು ರೋಷ ತುಂಬಿದ ಧ್ವನಿಯಲ್ಲಿ ಟಗರೂರನ ವಿಚಾರಣೆ ಸಮುಯದಲ್ಲಿ ಲಕ್ಕ ನುಡಿಯುತ್ತಾನೆ :

"ಈ ಅನ್ಯಾಯದಲ್ಲಿ ಹುಟ್ಟಿ ಅನ್ಯಾಯದಲ್ಲಿ ಬೆಳಿತಾ ಅದೆ, ನಮ್ಮ ಪಂಚಾತಿ..." (೨೬೪). ಪಂಚಾಯತಿ ಸೇರುವುದಕ್ಕೆ ಮುಂಚೆಯೆ ಅಲ್ಲಿಯ ಜನಗಳಿಗೆ ಗೊತ್ತು ಅಲ್ಲಿ ಸಿಕ್ಕುವ ನ್ಯಾಯ ಎಂತಹುದೆಂದು. ಅಡವಿ ಹೇಳುವಂತೆ ನಂಜೇಗೌಡ "ಕಾಳಿಯ ಬೋಳಿ ಮಾಡ್ತಾನೆ. ಬೋಳಿಯ ಕಾಳಿ ಮಾಡ್ತಾನೆ." (೩೧೭) ಅಥವ ದ್ಯಾವಾಜಮ್ಮ ನುಡಿಯುವಂತೆ "ಅವನ್ದು ಯೇನ ಸಿಂಗಿ ಇಳಿಸಿಂಗಿ ಆಟ. ಅವಯ್ಯ ಯೇರಿಸ್ಲೂ ಬಲ್ಲ ಇಳಿಸ್ಲೂ ಬಲ್ಲ" (೩೩೫) ಇಡೀ ಪಂಚಾಯತಿಯ ಮೇಲೆ ಅವನ ಅಕ್ಟೋಪಸ್ ಹಿಡಿತ ಅಂತಹದ್ದು. ಕೃಷ್ಣಶಾಸ್ತ್ರಿಗಳು ನೆನೆಯುವಂತೆ

> "ತನಗೆ ಬೇಕಾದರೆ ಪಂಚಾಯತಿಯಲ್ಲೂ ಕಿತಾಪತಿ ಮಾಡಿ ನ್ಯಾಯವನ್ನು

ಮಾಯ ಮಾಡುತ್ತಿದ್ದದ್ದು......(೨೧)

ಮುಟ್ಟಿದ ಗಂಗವ್ವನನ್ನು ಪಂಚಾಯತಿಯ ಮುಂದೆ ಎಳೆತಂದು ನಿಲ್ಲಿಸಿದಾಗ ಆಕೆ 'ಎಂತೋರ ಮನಸ್ಸು ಕರಗೂಂವಂಗ' ನುಡಿಯುತ್ತಾಳೆ.

"ನಾನು ಮುಟ್ಟಾಗಿರೊ ಎಂಗಸು. ನನ್ನ ಸ್ಥಿತೀಲಿ ಈ ಜರೋಸ ಊರ್ನೋರಲ್ಲ ಮುಂದ ನಡೂವ ಇಂಗೆ ತಂದು ನಿಲ್ಲಿಸೋದು ದರುಮುವ ?" (೩೩)

ಧರುಮನಹಳ್ಳಿಯಲ್ಲಿ ಇಂತ ಧಾರ್ಮಿಕ ಪ್ರಶ್ನೆಗಳಿಗೆ ಅವಕಾಶವಿಲ್ಲ. 'ಧರುಮ' ಧರುಮನಹಳ್ಳಿಯಲ್ಲಿ ಮಂಗ 'ಮಾಯ'. ಕಾದಂಬರಿಯ ಪುಟಪುಟಗಳಲ್ಲೂ 'ಅನ್ನೆಕಾರ್ರು, ನ್ಯಾಯುಯಲ್ಲಿನ್ನಾದ್ರ ಅವರ ತಾವು ?... (೧೯೬) 'ತೆಗಿ ತೆಗಿ, ಇವುರದ್ಯಾವ ಸೀಮೆ ನ್ಯಾಯುವ ? ಇವುರಿಗೊಂದು ನ್ಯಾಯ, ನಮಗೊಂದು ನ್ಯಾಯುವ ?' (೩೬೦) ಎನ್ನುವ ಬುಂಡನ್ನ ಮತ್ತು ದ್ಯಾಮಾಜಮ್ಮರ ನೊಂದ ಧ್ವನಿ ಮೊಳಗುತ್ತವೆ, ಜಮುರಂಗರು ಹೇಳುತ್ತಿರುವ ಕತೆಯನ್ನು ಸ್ಪಷ್ಟಗೊಳಿಸುತ್ತದೆ. 'ಉತ್ತಮರು' ಎನಿಸಿಕೊಂಡವರ ಸ್ವಾರ್ಥ, ಕೀಳುತನ, ಆಷಾಢಭೂತಿತನ, ಅಧರ್ಮ ಮತ್ತು ಇವರು ನಡೆಸುವ ಶೋಷಣೆ, ಕೆಳಜಾತಿಯವರನ್ನು ಅಮಾನುಷವಾಗಿ ತುಳಿದು ಉದ್ದಕ್ಕೂ 'ಲಗ್ಗೆ ಚಂಡುಗಳನ್ನು' ಮಾಡಿಕೊಂಡು ಅವರ ಬದುಕಿನ ಸಂಪೂರ್ಣ ಲಾಭ ಪಡೆಯುವ ಭಯಾನಕ ಕತೆಯಿದು. ಯಾರಾದರೂ ಈ ಹಿಡಿತದಿಂದ ಸ್ವತಂತ್ರ ಬದುಕಿಗೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ರುಕ್ಮಿಣಿಯಂತೆ ಆತ್ಮಹತ್ಯೆ ಮಾಡಿಕೊಳ್ಳಬೇಕು; ಅಥವಾ ತನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರೆ ಗಂಗವ್ವನಂತೆ ಬಹಿರಂಗ ಆತ್ಮ ವಧೆಗೊಳಗಾಗಬೇಕು. ಮತ್ತು ನಂಜೇಗೌಡನಿಗೊ ಅಥವ ಮಠದ ಸ್ವಾಮಿಗೊ ಭೋಗದ ವಸ್ತುವಾಗಬೇಕು; ಅಥವ ಈ ಸಮಾಜ ಒಪ್ಪಿಕೊಂಡ 'ಶಾಸ್ತ್ರ' ನೀತಿಗಳನ್ನು ಬದಿಗೊತ್ತಿ ಮುಕ್ತ ಬದುಕು ಬದುಕುವುದಾದರೆ ಕೃಷ್ಣಶಾಸ್ತ್ರಿಗಳಿಗಾದಂತೆ ತೇಜೋಭಂಗವಾಗುತ್ತದೆ, ಇಲ್ಲವೆ ಲಕ್ಕನಿಗಾದಂತೆ 'ಚರ್ಮ ಸುಲಿದು. ಬೆಂಕಿ ನೀರು ಕೊಡದಂತೆ ಊರಿನಿಂದ ಹೊರಗಸೆಯಲಾಗುತ್ತದೆ. ಅನೀತಿ ಮತ್ತು ಅಮಾನುಷತೆಗಳೇ ಇವರ ಬದುಕಿನ ಲಯವಾಗಿದೆ.

●

'ವೈಶಾಖ' ದಲ್ಲಿ ನಡೆಯುವ ಕತೆಯ ಹಿನ್ನೆಲೆಯಲ್ಲಿ ಮಹಾಭಾರತದ ಕತೆ ಇಟ್ಟುಕೊಳ್ಳಲಾಗಿದೆ.

"ಗೌಡಯ್ನ ಗಂಗಪ್ಪ, ಕ್ವಾಟೆ ಬುಳ್ಳಪ್ಪ ಎಡು ಆಳುಂವೆ ಪಬ್ಬುಲಗೂಬ್ರು ಮಚ್ಚರಿಸೋದ ಕಂಡು — ಇವ್ರು ಪಾಂಡವರು ಕೌರವ್ರ ವಂಸದೋರೆ ಇರಬೇಕು ಅಂತಿದ್ರು ಊರಿನೋರು" (೧೧–೧೨)

ಗಂಗವ್ವ ಮತ್ತು ಆಡವಿಯಪ್ಪ ಸಹ-ದಾಯಾದಿಗಳು. ಗಂಗವ್ವನನ್ನು ಪಂಚಾಯತಿಗೆ ಎಳೆತರುವ ದೃಶ್ಯ ದ್ರೌಪದಿಯ ಮಾನಭಂಗದ ದೃಶ್ಯ ನೆನಪಿಗೆ ತರುತ್ತದೆ. ಲಕ್ಕ ದರಮನಹಳ್ಳಿಯಲ್ಲಿ ಆಗುವ ಎಲ್ಲ ಘಟನೆಗಳಲ್ಲೂ ಹೆಚ್ಚುಕಡಿಮೆ ಸರ್ವಾಂತರ್ಯಾಮಿಯಾಗಿ ಬರುತ್ತಾನೆ. ಎಲ್ಲ ಆಗು ಹೋಗುಗಳಲ್ಲೂ ಇವನ ಪಾತ್ರವಿದೆ. ಎತ್ತಿನ ಗಾಡಿಗಳಿಗೆ ಸಾರಥಿ ಇವನು. ಕತೆಯ ಹಲವಾರು ಹಂತಗಳಲ್ಲಿ ಒಂದಲ್ಲ ಒಂದು ಪಾತ್ರ ಇವನ ಸಹಾಯ ಬೇಡುತ್ತದೆ: ಸಂದಿಗ್ಧ ಪರಿಸ್ಥಿತಿಯಲ್ಲಿ ಇವನ ಜೊತೆ ವಿಮೋಚನೆ ನಡೆಸುತ್ತಾರೆ. ಇವನ ದೈಹಿಕ ವಿವರಣೆ ಹೀಗೆ ಬರುತ್ತದೆ:

> "......ಅವನ ತೆರೆದ ಕಪ್ಪುಮೈಯ್ಯ ನುಣುಪಾದ ಕಪ್ಪು ಶಿಲೆಯಂತೆ ಥಳಥಳ ಹೊಳೆಯುವುದು" (೨೪೯)

ಅವನ ದೊಡ್ಡಯ್ಯ ಅವನನ್ನು ಮಗುವಾಗಿದ್ದಾಗ

> "ಕಿಷ್ಣನಂಗವ್ನೆ, ಕಿಷ್ಣನಂಗವ್ನೆ ಅಂತ ಮುದ್ದಾಡಿದ್ನಂತೆ" (೩೦೭)

(ಇವನಿಗೆ ಒಬ್ಬ ಅಣ್ಣ ಮತ್ತು ಒಬ್ಬ ತಂಗಿ ಇದ್ದಾಳೆ.) ಇವನನ್ನು ಕೂಡುವ ಹೆಣ್ಣು ರುಕ್ಮಿಣಿ. ಹೀಗೆ ದರುಮನಹಳ್ಳಿಯಲ್ಲಿ ನಡೆಯುವ ಒಳಿತು–ಕೆಡಕಂಗಳ ಹೋರಾಟದ, ಒಳಿತಿಗಿಂತ ಕೆಡುಕೆ ಹೆಚ್ಚಾಗಿರುವ ಕತೆಯಲ್ಲಿ ಕೃಷ್ಣನಾಗಿ ಬರುವವನು ಲಕ್ಕ. ಆದರೆ ಈ ಕೆಡುಕಿನ ವಿರುದ್ಧ ಈ ಕೃಷ್ಣ ಹೋರಾಡಲಾರ. ವ್ಯಂಗ್ಯವೆಂದರೆ ತಾನೆ ಅದಕ್ಕೆ ಬಲಿಯಾಗಿ, ನಂಜೇಗೌಡನ ಹೆಂಡತಿಯ ಶವದ ಮೇಲಿನ ಒಡವೆ ಕದ್ದವರು ತನ್ನ ಮೇಲೆ ಅಪವಾದ ಹೊರಿಸಬಹುದೆಂದು ಹೆದರಿ ದರುಮನಹಳ್ಳಿಯನ್ನು ಸಂಪೂರ್ಣವಾಗಿ ತ್ಯಜಿಸಿ ಹೊರಟುಹೋಗುತ್ತಾನೆ. ಶ್ರೀಕೃಷ್ಣ ಶಮಂತಕ ಮಣಿಯ ಅಪವಾದವನ್ನು ಹೋಗಲಾಡಿಸಿಕೊಳ್ಳಬಲ್ಲ, ಆದರೆ ಇಲ್ಲಿ ಲಕ್ಕ ಬಲಿಯಾಗುತ್ತಾನೆ. ಕತೆಯಲ್ಲಿ ಕೆಡಕು ಸಂಪೂರ್ಣ ಮೇಲುಗೈಯ್ಯನ್ನು ಸ್ಥಾಪಿಸಿಕೊಳ್ಳುತ್ತದೆ.

ಚಿತ್ರಮೂಲನ ಕೋಟೆಯ ವಿವರ ಕಾದಂಬರಿಯಲ್ಲಿದೆ. ಈ ಕೋಟೆ ಕುರುಕ್ಷೇತ್ರದ ಯುದ್ಧದಲ್ಲಿ ದ್ರೋಣರು ನಿರ್ಮಿಸುವ ಅಭೇದ್ಯ ಅಥವಾ ಭೇದಿಸಿದರೂ ತಪ್ಪಿಸಿಕೊಂಡು ಹೊರಬರಲಾಗದಂಥ ಚಕ್ರವ್ಯೂಹದ ಪಡಿಯಚ್ಚು. ಅದು ಜಟಿಲತೆಯ ಮತ್ತೆ ಸಾವಿನ ಪ್ರತೀಕ ಇಲ್ಲಿ ಬದುಕು ಸಾಧ್ಯವಿಲ್ಲ. ಚಕ್ರವ್ಯೂಹವು ಪೌರುಷ ಸತ್ತು ಹೇಡಿತನ ಮತ್ತು ಧರ್ಮಗೇಡಿತನಗಳು ವಿಜೃಂಭಿಸುವುದರ ಪ್ರತೀಕವೂ ಆಗುತ್ತದೆ ಎಂಬುದನ್ನಿಲ್ಲಿ ನೆನೆಯಬಹುದು. ಕತೆ ಬೆಳೆದಂತೆ ಇಡೀ ಹಳ್ಳಿಯೆ ಒಂದು ವಿಧವಾದ ಚಿತ್ರಮೂಲನ ಕೋಟೆಯಾಗಿಬಿಡುತ್ತದೆ. ಹಳ್ಳಿಯ ಬಹಳ ಸಂಸಾರಗಳು ದುರಂತವನ್ನಪ್ಪುತ್ತವೆ, ಇಲ್ಲವೆ ವಿನಾಶಗೊಳ್ಳುತ್ತವೆ. ಚಂದ್ರಿ, ಚಲುವಿ, ಗಂಗವ್ವ, ಸಿವನಿ, ನಿಂಗಯ್ಯ ಇತ್ಯಾದಿ ಎಲ್ಲರೂ ನಾಶವಾಗುತ್ತಾರೆ. ಬದುಕು ಸಾಧ್ಯವಾಗ

ಬಹುದಾದ ಲಕ್ಕ ಮತ್ತು ರುಕ್ಮಿಣಿಯ ಸಮಾಗಮವೂ ವಿನಾಶದಲ್ಲಿ ಪರ್ಯವಸಾನಗೊಳ್ಳುತ್ತದೆ. ಕಾದಂಬರಿಕಾರರು ಇವರ ವಿನಾಶವನ್ನು ಅವರವರ ಕನಸಿನಲ್ಲಿ ಸೂಚಿಸುತ್ತಾರೆ. ರುಕ್ಮಿಣಿ ಕಾಣುವ ದುಃಸ್ವಪ್ನ ಈ ರೀತಿ ಇದೆ :

> ವಿಶ್ವೇಶ್ವರನನ್ನು ಎಳೆದೊಯ್ದ ಜಾಡನ್ನು ಕುರುಡಾಗಿ ಅನುಸರಿಸುತ್ತ ನಡೆದಳು ....ಮರದಿಂದ ಮರಕ್ಕೆ ಢಿಕ್ಕಿ ಹೊಡೆದು ಬಿದ್ದಳು, ಎದ್ದಳು. ಮತ್ತೆ ಅನುಕರಿಸುತ್ತ ಹೊರಟಳು......ಕತ್ತಲೆಯ ಕಾಡು ಸೈನಿಕರಂತೆ ದೃಢವಾಗಿ ನಿಂತು, ಸುಸೂತ್ರವಾಗಿ ಮುಂದುವರಿಯಲು ಅಡ್ಡ ಬಂದು, ದಾರಿ ತಪ್ಪಿಸುವ ಬೃಹದಾಕಾರದ ಮರಗಳು......ಎದ್ದು. ಬಿದ್ದು ಸಾಗಿದಂತೆ, ಥಟ್ಟನೆ ಬಂದು ಕೊಚ್ಚಿ ಗುಂಡಿಗೆ ಮಗುಚಿ ಮುಳುಗಿದಂತಾಯಿತು (೨೩೫)

ರುಕ್ಮಿಣಿ ಈಗಾಗಲೆ ಒಂದು ಬಾರಿ ಆತ್ಮಹತ್ಯೆಗೆ ಪ್ರಯತ್ನಪಟ್ಟು ಸಾವಿನ ಆಸೆಯನ್ನು ತೋರಿಸಿದ್ದಾಳೆಯಾದರೂ ಈ ಕನಸು ಹಳ್ಳಿಯ ಸಮಾಜದ ಬಗ್ಗೆ, ಇನ್ನು ಹೆಚ್ಚಿನದನ್ನು ಸೂಚಿಸುತ್ತದೆ. ದರುಮನಹಳ್ಳಿ ಅವಳ ಪಾಲಿಗೆ 'ಕತ್ತಲೆಯ ಕಾಡು'. ಆಗಿದೆ, ಆಗುತ್ತದೆ. ಇಲ್ಲಿ 'ಸೈನಿಕರಂತೆ ದೃಢವಾಗಿ ನಿಂತು' ಬದುಕಿನಲ್ಲಿ 'ಸುಸೂತ್ರವಾಗಿ ಮುಂದುವರಿಯಲು ಅಡ್ಡ ಬಂದು' ನಿಲ್ಲುವವರು (ನೈಜತೆಯಲ್ಲಿ ಮರಗಳಾದರೂ) ಆಕೆಯ ರೂಪವನ್ನು ವಿಕೃತಗೊಳಿಸಿ ರಕ್ತಕ್ಕಾಗಿ ಹಾಹಾಕಾರ ಮಾಡುತ್ತಿರುವ ಕೇಶವಯ್ಯ, ಲಕ್ಷ್ಮಮ್ಮ, ವೆಂಕಟ ಜೋಯಿಸ ಇತ್ಯಾದಿ ಬ್ರಾಹ್ಮಣ ಹದ್ದುಗಳು ಕನಸಿನ ಕೋಟೆಯಲ್ಲಿ 'ಬಿದ್ದು ಎದ್ದು' ದೈಹಿಕ ವೇದನೆ ಅನುಭವಿಸಿದರೆ, ಬದುಕಿನಲ್ಲಿ ಗರ್ಭಿಣಿಯಾಗಿ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟು, ಅಮಾನುಷ ಬ್ರಾಹ್ಮಣ ಕೇರಿ ತನಗೆ ಘಟಸ್ಫೋಟ ಮಾಡುತ್ತದೆಂದು ತಿಳಿದಾಗ "ಯಾರ ಸಂಗಡ ಹೇಳಿಕೊಳ್ಳಲಿ ?...... ಈ ಸಂದಿಗ್ಧದಿಂದ ನನ್ನನ್ನು ಯಾರು ಪಾರುಮಾಡಬಲ್ಲರು ?" (೨೭೭) ಎಂದು ಮಾನಸಿಕ 'ವೇದನೆ' ಅನುಭವಿಸುತ್ತಾಳೆ. (ಪುಟ ೩೫೧ರ ವಿವರಣೆ ನೋಡಿ) 'ಇವರಿಂದ ತಪ್ಪಿಸಿಕೊಳ್ಳಲು ರುಕ್ಮಿಣಿಗೆ ಯಾವ ದಾರಿಯೂ ಕಾಣದು' (೨೭೭)

> ಈಗ ಅವಳು ಬಂದಿ. ಚಿತ್ರಮೂಲನ ಕೋಟೆಯೊಳಗೆ ತಾನು ಸಿಕ್ಕಿಕೊಂಡಂತಾಗಿದೆ. ಇವರಿಂದ ಪಾರಾಗುವ ಮಾರ್ಗವೆ ಈಗ ಅವಳಿಗೆ ಗೋಚರಿಸುತ್ತಿಲ್ಲ...(೩೫೨).

ಇಲ್ಲಿಯ ಸಂಸ್ಕೃತಿ ಬದುಕನ್ನು ವಿನಾಶಗೊಳಿಸುತ್ತದೆ. ರುಕ್ಮಿಣಿ ಕಣ್ಮರೆಯಾಗಿ ಚಿತ್ರಮೂಲನ ಕೋಟೆಯಲ್ಲಿ ರಾತ್ರಿಯ ವೇಳೆಯಲ್ಲಿ ಕರುಣಾಜನಕವಾಗಿ ಕೂಗುವ ಸಂಕಟದ ಧ್ವನಿಯಾಗಿ ಹೋಗುತ್ತಾಳೆ. ಲಕ್ಕ ಪರದೇಶಿಯಾಗುತ್ತಾನೆ.

●

ಈ ದರುಮನಹಳ್ಳಿಯಲ್ಲಿ ಮುಖ್ಯವಾಗಿ ಎರಡು ರೀತಿಯ ಶೋಷಣೆಗಳಿವೆ. ಒಂದು ಲೈಂಗಿಕ ಶೋಷಣೆ, ಇನ್ನೊಂದು ಆರ್ಥಿಕ ಶೋಷಣೆ. ಎಲ್ಲ ಜಾತಿಯ ಜನಗಳು ಇರುವ

ಈ ಹಳ್ಳಿಯಲ್ಲಿ ಶೋಷಣೆಗೊಳಗಾಗುವವರು ಹೆಣ್ಣುಗಳು ಮತ್ತು ಹೊಲೆಯ
ಮಾತ್ರ. ಕಾದಂಬರಿಯ ೨೪೭ನೆ ಪುಟದಿಂದ ೨೫೦ನೇ ಪುಟದವರೆಗೂ ಒಂದು ಗಭಿ
ಣಿಯ ಹೆಣವನ್ನು ರಣಹದ್ದುಗಳು ಹೊಂಚುಹಾಕಿ, ಒಂದೊಂದೆ ಹೆಜ್ಜೆ ಮುಂದ
ವರಿದು, ಎರಗುವದರಿಂದ ಅಪಾಯವಿಲ್ಲ ಎಂದು ಗಟ್ಟಿಯಾದ ಮೇಲೆ, ಒಂದೊಂ
ಎರಗಿ ಕುಕ್ಕಿ ಕುಕ್ಕಿ ಆಕೆಯ ದೇಹದ ಮಾಂಸವನ್ನು ತಿನ್ನುವ ಭೀಕರ ವಿವರಣೆ ಇದೆ.

ಒಂದು ರಣಹದ್ದು ಎಗರಿ ಬಿದ್ದು ಅವಳ ಎದೆ ಗುಂಡಿಗ್ಯ ಕುಕ್ಕಿ ಪ್ರೋಟ
ಮಾಂಪುಸವ ಆ ಗಂಡಗ್ಯಿಂದ ಕಿತ್ತ ಕ್ಷಣಕೆ ಅವಳ ಸುತ್ತಲು ಕುಂತಿದ್ದ ಎಲ್ಲಾ
ರಣಹದ್ದುಗಳು ನಾ ಮುಂದು ತಾ ಮುಂದು ಅನ್ಕೋವಂಗೆ ಗರಿ ಕೆದರಿ ಅ
ಹೆಂಗಸಿನ ಹೆಣದ ಮ್ಯಾಲೆ ಬಿದ್ದೊ. ಸಿಕ್ಕ ಸಿಕ್ಕದೊಂಟು ಮಾಂಸವನ್ನು ಕಿತ್ತೊ.
ಜಾಗ ಸಿಕ್ಕದೆ ಹೋದಾಗ ಕೀ ಕೀ ಕೀ ಅಂತ ಕೀರ ಕೀರ್ಲಾಗಿ ಕಿರುಚ್ತ ಒಂದಕೊಂದ
ಕಡಿದಾಡಿ ಮಡಿದು ಬೀಳ್ತಾ ಇದ್ದೊ....... (೨೫೦)

ಎದೆ ನಡುಗಿಸುವ ಈ ಭೀಕರತೆ ತಕ್ಷಣ ಕಾದಂಬರಿಯ ಪ್ರಬಲವಾದ ಹಾಗು ಕೇಂದ್ರ ಸಂಕೇತವಾಗುತ್ತದೆ. ಸಹಜವಾಗಿಯೆ ಇದು ಕಾದಂಬರಿಯ ಮುಖಪುಟದ ಮೇಲೆ ಚಿತ್ರಗೊಂಡಿದೆ. ಓದುವರೆಗೂ ತಾವು ಹೇಳುತ್ತಿರುವ ಕತೆಯ ಭೀಕರತೆಯನ್ನು ಚದುರಂಗರು ಈ ಸಂಕೇತದಲ್ಲಿ ಸೆರೆ ಹಿಡಿಯುತ್ತಾರೆ. ಶೋಷಿತರು ಮತ್ತು ಶೋಷಕರು ಈ ಸಂಕೇತದಲ್ಲಿ ಸಂಪೂರ್ಣ ಅಸಹಾಯಕತೆ ಹಾಗೂ ಭೀಕರತೆಯಲ್ಲಿ ಚಿತ್ರಿತವಾಗಿದ್ದಾರೆ. ದರುಮನಹಳ್ಳಿಯ 'ಹದ್ದುಗಳೂ.ಅಷ್ಟೆ ತಮ್ಮ ಬೇಟೆ ಸಂಪೂರ್ಣ ದುರ್ಬಲವಾಗುವವರೆಗೂ ಕಾದು ನಂತರ ಬಲಹೀನ ಘಳಿಗೆಯಲ್ಲಿ ಮೇಲೆ ಬಿದ್ದು ಆವರಿಸಿಕೊಳ್ಳುತ್ತಾರೆ. ಗಂಗವ್ವ ತನ್ನಷ್ಟಕ್ಕೆ ತಾನಿರುವ ದೊಡ್ಡ ಬಾಯಿಯ ಹೆಣ್ಣು. ಅಡವಿಯಪ್ಪ ಆಕೆಯನ್ನು ಶೋಷಿಸುತ್ತಾನೆ. ಪಂಚಾಯತಿಯಲ್ಲಿ ಆಕೆಯೆ ಹೇಳುವಂತೆ "ಒಬ್ಬ ನಿಮ್ಮಂತ ಮೀಸೆಪ್ರೊತ್ತ ಗಂಡಸ ನನ್ನ ಜಾಗದಲ್ಲಿ ಇದ್ದಿದ್ರೆ ಅವನೆ ನಾಕ ತದಕಿ ಉಟ್ಟಿದ ಜನವ ಕಾಣಿಸಿರಾನು !...(೩೩೩). ಆದರೆ ಆಕೆ ಒಂಟಿ ಹೆಂಗಸು. ಕೊನೆಗೆ ನಂಜೇಗೌಡ ಮತ್ತು ಮಠದ ಸ್ವಾಮಿ ಆಕೆಯನ್ನು 'ಊಟ ಮಾಡುತ್ತಾರೆ. ತಂದೆ ತಾಯಿ ಇಲ್ಲದ ಅನಾಥ ಹುಡುಗಿ ಚಂದ್ರಿಯನ್ನು ಶಿವಪಾದಪ್ಪ 'ಫಳಾರ' ಮಾಡಿ ಮುಗಿಸುತ್ತಾನೆ. ಟಗರೂರನನ್ನು ಪಂಚಾಯಂತಿಯಲ್ಲಿ ಸಿಕ್ಕಿಸಿಕೊಂಡು ಲಕ್ಕ ಮದುವೆಯಾಗಬೇಕಿದ್ದ ಚಲುವಿಯನ್ನು ಉಪ್ಪಾರಯ್ಯ ಖರೀದಿ ಮಾಡಿ ಕೊಂಡೊಯ್ಯುತ್ತಾನೆ. ಆ ಹಣವನ್ನು ಪಂಚಾಯತಿದಾರರು ಹಂಚಿಕೊಳ್ಳುತ್ತಾರೆ. ಎಂಕಿಗೆ ಅದರಲ್ಲಿ ಸಿಕ್ಕುವುದು "ಬರಿ ನೂರು ರೂಪಾಯಿ ಮಾತ್ರ." ತಂದೆ ತಾಯಿ ಮತ್ತು ಅಣ್ಣನ ರಕ್ಷಣೆ ಇರುವವರೆಗೂ ಸಿಪನಿ ಕೇಶವಯ್ಯನನ್ನು ತಿರಸ್ಕರಿಸಬಲ್ಲಳು. ಆದರೆ ಅನಾಥಳಾದ ಮೇಲೆ ಕೇಶವಯ್ಯ ಅವಳನ್ನು ಸುಲಭವಾಗಿ ಸವಾರಿ ಮಾಡು

ತ್ತಾನೆ. ಕೆಂಗಣ್ಣಪ್ಪ ಸಿಕ್ಕಸಿಕ್ಕ ಕೂಲಿ ಹೆಂಗಸರ ಮೇಲೆಲ್ಲ ಬಿದ್ದು ಹೊಸಕಾಡು ತ್ತಾನೆ. ಕೃಷ್ಣಶಾಸ್ತ್ರಿ ರಾತ್ರಿಯಲ್ಲಿ ರುಕ್ಮಿಣಿಯ ಮೇಲೆರಗುತ್ತಾನೆ. ಗಂಗಿ ಮತ್ತು ರುಕ್ಮಿಣಿಯರಿಬ್ಬರೂ ಲಕ್ಕನ ಮೇಲೆರಗುತ್ತಾರೆ ಬೆಟ್ಟಯ್ಯ—ಚಿಕ್ಕೀರಮ್ಮನ ಘಟನೆ ಯಲ್ಲಿ ಕಾದಂಬರಿಕಾರರು ಬಳಸಿರುವ ಭಾಷೆಗೂ ಹದ್ದುಗಳು ಹೆಣ ಕುಕ್ಕುವ ಘಟನೆ ಯಲ್ಲಿ ಬಳಸಿರುವ ಭಾಷೆಗೂ ಸಾಮ್ಯವಿರುವುದನ್ನು ನಾವು ಕಾಣಬಹುದು,

> ಬೆಟ್ಟಯ್ಯ ಕುಂತಿದ್ದ ವರುಸೆ ಇಂದುಕೆ ಕಾಡ್ನಲ್ಲಿ ರಣಹದ್ದುಗಳು ಹೆಣದ ಮ್ಯಾಲೆ ಎರಗಕ್ಕೆ ಕಾಯ್ತಾ ಕುಂತಗಿತ್ತು; (೨೯೫)

ಘಟಸ್ಫೋಟಕ್ಕೆ ಬರುವ ಜನ ಒಬ್ಬೊಬ್ಬರೆ ಹದ್ದುಗಳಂತೆ ಬರುತ್ತಾರೆ. ಈ ಸಮಯ ದಲ್ಲಿ ರುಕ್ಮಿಣಿಯೂ ಗರ್ಭಿಣಿ ಎನ್ನುವುದು ಗಮನಿಸಬೇಕಾದ ಅಂಶ, ಹೀಗೆ ಕಾದಂಬರಿ ಯಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ಸಮಯದಲ್ಲಿ ಹದ್ದುಗಳಾಗಿ ಮಾರ್ಪಡು ತ್ತಾರೆ.

ಈ ಘೋರ ದೃಶ್ಯ ನೋಡಿದ ಮೇಲೆ ಜ್ವರದ ತಾಪದಲ್ಲಿ ಲಕ್ಕನೂ ಒಂದು ಕನಸು ಕಾಣುತ್ತಾನೆ;

> ನಾನೊಂದು ಮರದ ಬೊಡ್ಡೆಗೆ ಅಂತು ಕುಂತಿರೋವಂಗೆ ಸುತ್ತಲಾ ಗುಂಡಿಗೆ ಸದ್ದಿಲ್ದಿ ತೆಪ್ಪಗೆ ಕುಂತಿದ್ದ ಆ ರಣದ್ದುಗಳು ವಸಿವಸ್ಯಾಗಿ ಕುಪ್ಪಿತಾ ಕುಪ್ಪತಾ ಬಂದು, ಕಡೀಕೆ ಅವೆಲ್ಲಾ ಒಟ್ಟೊಟ್ಟಿಗೆ ತಮ್ಮ ರೆಕ್ಕೆಗಳ ಪೊಟೋಟು ಅಗಲಕೂ ಕೆದರಿ ಗಕ್ಕನೆ ಮ್ಯಾಲೆರಗಿ ನನ್ನ ಸರೀರದ ಮಾಂಸವ ಕುಕ್ಕಿ ಕುಕ್ಕಿ ತಿಂತಾ ಇದ್ದಂಗೆ ಕಂಡು ಕಿಟಾರ್ನೆ ಕಿರುಚ್ದೆ;....... (೨೫೦)

ಕಾದಂಬರಿಕಾರರು ಮುಂದೆ ಲಕ್ಕನಿಗೆ ಕಾದಿರುವುವನ್ನು ಸಾಂಕೇತಿಕವಾಗಿ ಸೂಚಿಸು ತ್ತಾರೆ. ಅವನು ತನಗೆ ಕಾದಿರುವ ದುರಂತವನ್ನು ಕನಸಿನಲ್ಲಿ ಕಾಣುತ್ತಾನೆ. ಆದರೆ ಅದನ್ನು ಅರಿಯಲಾರ. ಅರಿತರೂ ಮಾಡುವುದೇನೂ ಇಲ್ಲ.

ಈ ಹೆಣ—ಹದ್ದುಗಳ ಸಂಕೇತ ಲೈಂಗಿಕ ಶೋಷಣೆಗೆ ಮಾತ್ರ ಸೀಮಿತವಾಗದೆ ಸಾಮಾಜಿಕ ಆರ್ಥಿಕ ಶೋಷಣೆಯನ್ನೂ ಸಂಕೇತಿಸುತ್ತದೆ. 'ಮನುಷ್ಯನ ರಕ್ತದ ರುಚಿ ಪಾಟಾದ ಹುಲಿ'ಗಳೆಲ್ಲರೂ ಇವರ ರಕ್ತಹೀರುತ್ತಾರೆ ಮೊದಲು ಇವರಿಗೆ ತುತ್ತಾಗು ವುದು ನಿಂಗಯ್ಯನ ಹೊಲ 'ಸಾಲತೀರಿಸಲು ಮುಗ್ಗಲ್ಲ ಕವಡೆ ಕಟ್ಟಿಗೇದರೂವ ನಮ್ಮ ಜಮೀನ ಅಷ್ಟರೆ ತಕ್ಕಂಡ್ರು' (೧೪೧) ಎನ್ನುತ್ತಾನೆ ಲಕ್ಕ. ಇವರಿಂದ ಲಕ್ಕನನ್ನು ಓದಿಸಬೇಕೆಂದಿದ್ದ ತಂದೆ ತಾಯಿಂದಿರ ಆಸೆ ಮಣ್ಣುಪಾಲಾಗುತ್ತದೆ. ಉತ್ತಮ ಜಾತಿ ಯವರೆನಿಸಿಕೊಂಡ 'ಹದ್ದು'ಗಳಲ್ಲೊಂದಾದ ಉಪಾಧ್ಯಾಯ ವೆಂಕಟೇಶಯ್ಯ ಲಕ್ಕ ನಿಂಗಿಯೊಡನೆ ಮಳೆಯಲ್ಲಿ ಒಂದೇ ಗೊರಗಿನಲ್ಲಿ ಬರುತ್ತಿದ್ದುದನ್ನು ನೋಡಿ ನಿಂಗಯ್ಯ ನಿಗೆ ಹೇಳುತ್ತಾನೆ:

ಮೇಲು ಜಾತಿ ಯಜಮಾನ್ರಿಗೆ ಈ ಇಸ್ಯ ಗ್ವತ್ತಾದ್ರೆ ಈ ಉಡಗ್ನ ಚಮುಡ ಸುಲಿದುಬುಡ್ತಾರೆ (೧೬೩)

ಅವರು ಸುಲಿಯುತ್ತಿದ್ದರೂ ಬಿಡುತ್ತಿದ್ದರೂ ಅವಕಾಶ ಸಿಕ್ಕಿದ್ದರೆ ವೆಂಕಟೇಶಯ್ಯ ಖಂಡಿತ ಸುಲಿಯುತ್ತಿದ್ದ ಎನಿಸುತ್ತದೆ ಅವನ ಧ್ವನಿ. ಮುಂದುವರೆದು ನಿಂಗಯ್ಯನಿಗೆ ಸಲಹೆ ಮಾಡುತ್ತಾನೆ:

ಮುಂದಕೋದಿ ಅವನ್ಯಾವ ದಿವಾನಗಿರಿ ಮಾಡಬೇಕಾಗಿದಿತೊ ನಿಂಗ? ...... ಸುಮ್ಕೆ ಇವ್ನ ಯಾರ ಅಟ್ಟೀಲಾರು ಜೀತಕ್ಕಿರಿಸು (೧೬೩)

ಈ ಸಮಾಜದಲ್ಲಿ ಗುಲಾಮಗಿರಿಯಿಂದ ತಪ್ಪಿಸಿಕೊಂಡು ಹೊರಬರಲು ಲಕ್ಕನಿಗೆ ಉಳಿದಿದ್ದ ಏಕೈಕ ದಾರಿಯನ್ನು ವೆಂಕಟೇಶಯ್ಯ ಮುಚ್ಚುತ್ತಾನೆ. ಅಷ್ಟೆ ಅಲ್ಲ ಅವನ ಸ್ಥಾನ ಗುಲಾಮಗಿರಿ, ಅವನನ್ನು ಅಲ್ಲಿ ಇರಿಸು ಎಂದು ಅಧಿಕಾರಯುತವಾದ ತುಚ್ಛ ಧ್ವನಿಯಲ್ಲಿ ನಿರ್ದಾಕ್ಷಿಣ್ಯವಾಗಿ ನುಡಿಯುತ್ತಾನೆ. ಲಕ್ಕನನ್ನು ಶಾಲೆಯಿಂದ ಹೊರಕ್ಕೆಸೆಯುತ್ತಾನೆ.

ಗೆಜ್ಜುಗ ಮಾಲಿಂಗಿ ಮಡುವಿನ ಪಾಲಾದ ಮೇಲೆ ನಿಂಗಯ್ಯ ಕೆಂಗಪ್ಪನಿಂದ ಪಡೆದಿದ್ದ ಹಣದಲ್ಲಿ ಉಳಿದುದ್ದನ್ನು ಹಿಂದಿರುಗಿಸಲು ಹೋದಾಗ ಅವನ ಹೆಂಡತಿ ಸಿದ್ದಮ್ಮ ಹೇಳುತ್ತಾಳೆ:

ಹಯ್ಯಾ ನಿಂಗೊಂದು ಉಚ್ಚು, ಇವಂಗೆ ಇದ್ಯ ಕಲಿಸಿ ಇವ್ನು ಅದ್ಯಾವ ರಾಜ್ಯ ಆಳಬೇಕಾಗಿದ್ದುದ್ದು? ...... ಬ್ರಾಂತು, ಬ್ರಾಂತು ...... ಇವನ್ನು ಯಾವುದಾದರೂ ಅಟ್ಟಿಗೆ ಸೇರಿಸಿ ...... (೧೫೫)

ಸಿದ್ದಮ್ಮನ ಈ ಗೇಲಿ ಮಾಡುವ ತಿರಸ್ಕಾರದ ಧ್ವನಿಯಲ್ಲಿ ವೆಂಕಟೇಶಯ್ಯನ ಮಾತುಗಳನ್ನು ಪುನರುಚ್ಚಾರ ಮಾಡಿಸುವುದರ ಮೂಲಕ ಕಾದಂಬರಿಕಾರರು ದರುಮನಹಳ್ಳಿಯ ಇಡೀ ಸಮಾಜದ ಧ್ವನಿಯನ್ನೆ ಮಾರ್ಮಿಕವಾಗಿ ಸೂಚಿಸಿದ್ದಾರೆ. ರಾಜ್ಯವ ಳುವುದು, ದಿವಾನಗಿರಿ. ಉತ್ತಮರು ಎನಿಸಿಕೊಂಡವರಿಗೆ. ಗುಲಾಮಗಿರಿ ಹೊಲಿಯರದು. ಇವರ ಹುಟ್ಟು ಹಕ್ಕಾದ ಬೆಳವಣಿಗೆ ಮತ್ತು ಪ್ರಗತಿ 'ಭ್ರಾಂತಿ' 'ಉಚ್ಚು' ಆಗಿಬಿಡುತ್ತದೆ. ಅಪಾರ ವೇದನೆಯೊಡನೆ ಗಂಡ ಹೆಂಡತಿಯರು ತಮ್ಮ ಬದುಕಿನ ದುರಂತ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ.

ಯಾರ ಮುಂದ್ಯಾ ನಿನ್ನಾಟ ?–ಅಣದ ಯೆದುರ್ಗೆ ನಿಂತು ಗುದ್ದಾಡಕ್ಕೆ ಯಾವ ಬಡ್ಡೀ ಹೈದನಿಗೆ ಸಾಧ್ಯ......ಸುಮ್ಕೆ ಯಾಕೆ ಚಪಲ ? (೧೫೬)

ಪ್ರಗತಿ ಅಂದರೆ ಚಲನೆ, ಸಂಸ್ಕೃತಿ ಬೆಳೆಯುವ ಗುಣವಾದರೆ 'ವೈಶಾಖ' ದಲ್ಲಿ ಇದು ಸಂಸ್ಕೃತಿಯ ಬೆಳವಣಿಗೆಯನ್ನು ಸ್ಥಗಿತಗೊಳಿಸುವ ಘಳಿಗೆ. ನಿಂಗಯ್ಯ, ಲಕ್ಕ, ದೊಡ್ಡಯ್ಯ, ಕಲ್ಯಾಣಿ, ಸಿವನಿ ಇವರ ಬದುಕಿನಲ್ಲಿ 'ಪ್ರಗತಿ' ಸ್ಥಗಿತಗೊಂಡ ಘಳಿಗೆ

ಗಳೇ ಅಪಾರ ಹಾಗೆ ನೋಡಿದರೆ ಇವರ ಬದುಕು ಹುಟ್ಟಿದ ಘಳಿಗೆಯಲ್ಲಿ ಸ್ಥಗಿತ. ಹುಟ್ಟು ಸಾವುಗಳ ನಡುವೆ ಇವರಿಗಿರುವುದು 'ಮೂಗೆತ್ತುಗಳಂಗೆ ಅವರು ಹ್ಯಾಳಿ ಕ್ಯಾಳಿದಕೆಲ್ಲ ತಾಳ ಆಕ್ಕಂಡು ದುಡಿಯೋದು'. (೧೯೭) ಈ ರೀತಿ ಅವರ ಪ್ರಗತಿ ಯನ್ನು ಸ್ಥಗಿತಗೊಳಿಸುವಲ್ಲಿ, ಬದುಕನ್ನು ನಿರರ್ಥಕಗೊಳಿಸುವಲ್ಲಿ, ವಿನಾಶಗೊಳಿಸು ವಲ್ಲಿ 'ಉತ್ತಮ'ರೆನಿಸಿಕೊಂಡವರೆಲ್ಲರೂ ಜಯಶೀಲರಾಗುತ್ತಾರೆ. ಬುಂಡಮ್ಮನ ೫೦ ರೂಗಳನ್ನು ಕೃಷ್ಣ ಶಾಸ್ತ್ರಿಗಳು ಕೊಟ್ಟು ಅವಳಿಂದ ಲಕ್ಕನನ್ನು ಮುಕ್ತನನ್ನಾಗಿ ಮಾಡಿಸುವುದು ತಮ್ಮ ಬಂದಿಯನ್ನಾಗಿ ಮಾಡಿಕೊಳ್ಳಲು. ಮತ್ತು ದಿನಗೂಲಿ ಯನ್ನು ಆಯಾ ದಿನವೆ ಕೊಡುವುದರಿಂದ ಆಸಲು ಹಾಗೇ ಉಳಿಯುವಂತೆ ನೋಡಿ ಕೊಳ್ಳುತ್ತಾರೆ. ಲಕ್ಕ ಯಾವಾಗಲೂ ಗುಲಾಮನೇ ಆಗಿ ಉಳಿಯುತ್ತಾನೆ.

ವ್ಯಕ್ತಿ ಸ್ವಾತಂತ್ರ್ಯ. ಸಮಾನತೆ, ಮಾನವ ದುರಂತಕ್ಕೆ ಸಹಾನುಭೂತಿ. ಅನುಕಂಪ ಇವು ಉತ್ತಮ ಸಂಸ್ಕೃತಿಯ ಗುರುತಾದರೆ ದರುಮನಹಳ್ಳಿಯಲ್ಲಿ ಇವೆಲ್ಲವೂ ತಲೆ ಕೆಳಕು. ಇಡೀ ಕಾದಂಬರಿಯಲ್ಲಿ ಹೆಚ್ಚು ಪ್ರಮಾಣದಲ್ಲಿ ಅಮಾನುಷತೆಯನ್ನು ನಾವು ಕಾಣುವುದು ಬ್ರಾಹ್ಮಣ ಕೇರಿಯಲ್ಲಿ. ಇದನ್ನು ಕೆಲವು ಘಟನೆಗಳಲ್ಲಿ ಕಾಣಬಹುದು. ಹೇಗೂ ಕಷ್ಟಪಟ್ಟು ವಿದ್ಯೆ ಗಳಿಸಲು ಹೆಣಗುತ್ತಿರುವ ಲಕ್ಕನನ್ನು ಶಾಲೆಯಿಂದ ನಿರ್ದಯವಾಗಿ ಹೊರಗೆ ಹಾಕುವವನು ವೆಂಕಟೇಶಯ್ಯ. ಮಾನವ ಸಮಾನತೆ ಯನ್ನು ಒಪ್ಪಿಕೊಳ್ಳುವ ಸಮಾಜದಲ್ಲಿ ಬದಲಾವಣೆಯನ್ನು ತಿರಸ್ಕರಿಸುತ್ತ, ಪರಂಪರೆ ಆದರ್ಶವೆಂದು ಎತ್ತಿ ಹಿಡಿದಿರುವ ಬ್ರಾಹ್ಮಣ ಭಾವಬಿಂಬ (Image) ವನ್ನು ವೆಂಕ ಟೇಶಯ್ಯ ಪ್ರತಿನಿಧಿಸುತ್ತಾನೆ. ನಮ್ಮ ಸಮಾಜದಲ್ಲಿ ಶತಶತಮಾನಗಳಿಂದ ಬಂದಿರುವ ಅಮಾನುಷ ಪರಂಪರೆಯನ್ನು ಮುಂದುವರಿಸುತ್ತಾನೆ. ಬಿಲ್ವಿದ್ಯೆ ಕಲಿಯುತ್ತಿದ್ದ ಬೇಡರ ಯುವಕ ಏಕಲವ್ಯನ ಹೆಬ್ಬೆರಳನ್ನು ಬಲಿ ತೆಗೆದುಕೊಂಡು ಅವನ ಬದುಕನ್ನು ನಿರ್ವೀರ್ಯ ಗೊಳಿಸಿದವರು ಮಹಾ ಗುರುಗಳಾದ ದ್ರೋಣರಲ್ಲವೆ ? ಭಾರತದ ಪರಂಪರೆಯಲ್ಲಿ ಇಂಥ ಉದಾಹರಣೆಗಳಿಗೇನೂ ಕಡಿಮೆ ಇಲ್ಲ. ಮೇಲು ಜಾತಿಯವರು, ಅವನ 'ಚಮಡ ಸುಲಿದುಬಿಡುತ್ತಾರೆ' ಎನ್ನುವ ವಾಕ್ಯದಲ್ಲಿ ಬೆಂಕಟೇಶಯ್ಯನ ಒಳ ಬಯ ಕೆಯ ತೃಪ್ತಿಯನ್ನು ಕಾಣಬಹುದು.

ಗಂಡ ಸತ್ತ ರುಕ್ಮಿಣಿಯನ್ನು ಆಕೆಯ ಜನ ನಡೆಸಿಕೊಳ್ಳುವ ರೀತಿ ಅವರ ಸಂಸ್ಕೃತಿಯ ಅಮಾನುಷತೆ ಹಾಗೂ ವಿಕೃತರೂಪಕ್ಕೆ ಉದಾಹರಣೆ.

> ಅವಳ ತಲಿ ಬೋಳಿಸಿ ವಿರೂಪಗೊಳಿಸಿದ್ದರೆ ನಮ್ಮ ಬ್ರಾಹ್ಮಣ ಸಮಾಜ ಈಗ ಇಂಥ ವಿಕೃತ ಪರಿಸ್ಥಿತಿಯನ್ನು ಎದುರಿಸಬೇಕಾಗಿತ್ತೆ ?...... (೨೮೩)

ಎನ್ನುವ ವೆಂಕಟಜೋಯಿಸರು ಈ ವಿಕೃತ ಸಂಸ್ಕೃತಿಯ ಪ್ರತಿನಿಧಿ. ಇಲ್ಲಿ ಪರಿಸ್ಥಿತಿ ವಿಕೃತವಲ್ಲ, ಅದನ್ನೆದುರಿಸುತ್ತಿರುವ ಜನರ ಸಂಸ್ಕೃತಿ ವಿಕೃತ. ಪರಿಸ್ಥಿತಿ ಮಾನ

DEVU PATTAR
GUTTIPETH,
HAHAPUR-585223

ವೀಯ. ಆದರೆ ದುರುಮನಹಳ್ಳಿಯ ಸಂಸ್ಕೃತಿ, ಸೌಂದರ್ಯವನ್ನು ವಿರೂಪಗೊ
ಸುವಲ್ಲಿ, ಬದುಕಿನ ಆನಂದವನ್ನು ಕೊಲ್ಲುವಲ್ಲಿ ತನ್ನ ವಿಕೃತ ಕಾಮನೆಯನ್ನು ತೃ
ಪಡಿಸಿಕೊಳ್ಳುತ್ತದೆ. ಡಾ॥ ಯು ಆರ್ ಅನಂತಮೂರ್ತಿಯವರ 'ಘಟಶ್ರಾದ್ಧ
ದಲ್ಲಿಯೂ ಇದನ್ನು ನೋಡಬಹುದು. ಇಲ್ಲಿ ರುಕ್ಮಿಣಿಗೆ ಘಟಸ್ಫೋಟ ಮಾಡ
ತಯಾರಾಗುವ ರೀತಿ ಅತ್ಯಂತ ಅಮಾನುಷ.

......ಅದ್ದರಿಂದ ರುಕ್ಮಿಣಿಗೆ ಘಟಸ್ಫೋಟ ಮಾಡಿ ಮುಂಡೆ ಬೋಳಿಸಿ,
ಕತ್ತೆಯ ಮೇಲೆ ಕೂರಿಸಿ, ಊರು ಬಿಟ್ಟು ಓಡಿಸಬೇಕು...ಆ ಪಾಪಿಗೆ
ಇದೊಂದೆ ತಕ್ಕ ಪ್ರಾಯಶ್ಚಿತ್ತ. (೩೭೪)

ಇಂತ ಪಾಪಿಗೆ ನೀರಿರೊ ಜಾಗದಲ್ಲಿ ಕರ್ಮ ಆಚರಿಸಬಾರದು, ಆವಳ ಮ
ಮುಂದೇನೆ ನಡೆಸಬೇಕು. (೩೧೧)

ಇದು ರುಕ್ಮಿಣಿಯಿಂದ ಎಲ್ಲ ಲಾಭವನ್ನು ಪಡೆದ ಲಕ್ಷ್ಮವ್ವ ಆಕೆಗೆ ಹಿಂದಿರುಗಿಸು
ರೀತಿ. ಇಡೀ ಬ್ರಾಹ್ಮಣ ಸಭೆ ಅವಳ ವಾಕ್ಯವಲ್ಲಿ ಕಾಣುವ ಸಮರ್ಥನೆ :

"ಅವಳ ಮನೆ ಎದುರಿಗೇ ಆಚರಿಸಿದರೆ, ಊರಿನ ಎಲ್ಲಾ ಜನರೂ ನೋಡ್ತಾರೆ"
(೩೭೧) ಕ್ರೌರ್ಯದ ಪರಾಕಾಷ್ಠತೆಯಲ್ಲಿ ಆನಂದ ಪಡುವ ಈ ಸಂಸ್ಕೃತಿ ಧರ್ಮ
ಶಾಸ್ತ್ರಗಳ ಹೆಸರಿನ ವಿಕೃತಿ. ಮಾನವಸಹಜ ಪ್ರಕೃತಿಯ ಸೆಳೆತಕ್ಕೆ ಮಣಿಯುವ
ರುಕ್ಮಿಣಿಯ ಪಾಪವೇನು ? ಆಕೆಯನ್ನು 'ಪಾಪಿ' 'ಪಾಪಿ' ಎಂದು ಹದ್ದುಗಳಂತೆ
ಹಾ ಹಾಕಾರ ಮಾಡುವ ಈ ಸಭೆ ಮಾನವೀಯತೆಯ ಸಂಪೂರ್ಣ ದಿವಾಳಿತನ
ವನ್ನು ತೋರಿಸುತ್ತದೆ. ಇವರಿಗೆ ಶಾಸ್ತ್ರಾಚರಣೆಯೆ ಮುಖ್ಯ, ಮಾನವ ಭಾವನೆ
ಗಳಲ್ಲಿ; ಬದುಕಿನ ನೋವು, ಆನಂದ, ಸುಖ, ದುಃಖಗಳಲ್ಲ. ಈ ಶಾಸ್ತ್ರಾಚರಣೆ
ಯಲ್ಲಾದರೂ ಇವರಿಗೆ ಸಂಪೂರ್ಣ ನಂಬಿಕೆ ಇದೆಯೆ ? ಘಟಸ್ಫೋಟ ಕರ್ಮ
ಆರಂಭವಾದಾಗ ಅಲ್ಲಿಯ ವಾದವಿವಾದ ಇದಕ್ಕೆ ಉತ್ತರ ಕೊಡುತ್ತದೆ. ಪುಟ
೩೮೧–೮೨ರಲ್ಲಿ ಬಹಳ ಉದ್ದದ ಸಂಭಾಷಣೆ ಇದೆ. ಕೆಲವು ವಾಕ್ಯಗಳನ್ನು ಇಲ್ಲಿ
ಉದಹರಿಸಬಹುದು.

ರೀ ಜೋಯಿಸರೆ ವೇಳೆ ಸುಮ್ಮನೆ ವ್ಯಯವಾಗ್ತಾ ಇದೆ. ಇಷ್ಟರಲ್ಲಿ
ನಿಮ್ಮ ಶಾಸ್ತ್ರ ಹೋಗೋದಾದ್ರೆ ಹೋಗಲಿ ಬಿಡಿ.

ಎಂದು ಹೇಳುತ್ತ ಸುಬ್ರಮಣ್ಯ ಎದ್ದು ಹೊರಡುತ್ತಾನೆ.

ಹೋಗಬೇಡವೊ ಮಹರಾಯ...ನಿಲ್ಲು ನಿಲ್ಲು. ನಿನ್ನಿಷ್ಟ ಪ್ರಕಾರವೆ
ಮಾಡೋಣ......ಕಲಿಕಾಲ. ಎಲ್ಲವೂ ಸೂಕ್ಷ್ಮಕ್ಕೆ ಬಂದ್ಹೋಯ್ತು...(೩೮೨)

ಸುಬ್ರಮಣ್ಯನ ಇಷ್ಟದ ಪ್ರಕಾರ ಶಾಸ್ತ್ರವನ್ನು ಸಡಿಲಗೊಳಿಸಿ ನಡೆಸುವುದಾದರೆ ಕೃಷ್ಣ

ಶಾಸ್ತ್ರಿಗಳ ಇಷ್ಟದಂತೆ ಎಲ್ಲವನ್ನು ಕೈಬಿಡಬಹುದಿತ್ತು. "ಶಾಸ್ತ್ರಕ್ಕೆ ಅಪಚಾರ ಮಾಡಲು ಬರುತ್ತವೆಯೆ ?" ಎಂದು ಬೊಬ್ಬೆ ಹೊಡೆವ ಆದೇ ಸಭೆ ಶಾಸ್ತ್ರೋಕ್ತವಾಗಿ ಮಾಡ ಬೇಕಾದುದೆಲ್ಲವನ್ನು ಮೋಟಕು ಮಾಡಿ ಅದಕ್ಕೂ ಅಪಚಾರ ಮಾಡುತ್ತಾರೆ, ರುಕ್ಮಿಣಿಗೂ ಅಪಚಾರ ಮಾಡುತ್ತಾರೆ, ತಮಗೂ ಅಪಚಾರ ಮಾಡಿಕೊಳ್ಳುತ್ತಾರೆ. ಹೆಜ್ಜೆ ಹೆಜ್ಜೆಗೂ ಸ್ವಾರ್ಥ, ಸಣ್ಣತನ, ಅನಾಥಭೂತಿತನ ತುಂಬಿ ತುಳುಕುವ ಈ ಜನಗಳಿಂದ ರುಕ್ಮಿಣಿ ಹಿಂಸೆ ಮತ್ತು ಕ್ರೌರ್ಯವಲ್ಲದೆ ಬೇರೇನನ್ನೂ ನಿರೀಕ್ಷಿಸುವುದು ಸಾಧ್ಯವಿಲ್ಲ.

ಕಾದಂಬರಿಯ ಬ್ರಾಹ್ಮಣ ಸಮಾಜದಲ್ಲಿ ಸ್ವಲ್ಪವಾದರೂ ಮಾನವೀಯತೆ ಇರುವ ಏಕೈಕ ವ್ಯಕ್ತಿ ಎಂದರೆ ಕೃಷ್ಣಶಾಸ್ತ್ರಿ. ಆದರೆ ಈತನೂ ಪರೀಕ್ಷೆಯ ಘಳಿಗೆಯಲ್ಲಿ ಸಂಪೂರ್ಣವಾಗಿ ಸೋಲುತ್ತಾನೆ; ಸ್ವಾರ್ಥವೇ ಮುಖ್ಯವಾಗುತ್ತದೆ. ಇಡೀ ವಿಚಾರಣೆ ತಾನೆ ಅಪರಾಧಿ ಎಂದು ತೋರಿಸುತ್ತಿರುವಾಗ ರಾಜನಾದ ಈತ ಅಪಸ್ವ ವಿಚಾರಣೆ ನಿಲ್ಲಿಸದೆ ಸತ್ಯಶೋಧನೆಯನ್ನು ಮುಂದುವರಿಸುತ್ತಾನೆ; ವಿಚಾರಣೆಗೆ ತನ್ನನ್ನು ತಾನೆ ಒಡ್ಡಿಕೊಂಡು ಸತ್ಯವನ್ನೆದುರಿಸುತ್ತಾನೆ. ಕೃಷ್ಣಶಾಸ್ತ್ರಿ ಸತ್ಯವನ್ನು ಹೇಳುವ ಆಸೆಯನ್ನೇನೊ ತೋರಿಸುತ್ತಾನೆ; ಆದರೆ ಅದನ್ನೆದುರಿಸುವ ನೈತಿಕ ಶಕ್ತಿ ಮಾತ್ರ ಇಲ್ಲ. ಆದರೆ ದೊಡ್ಡಯ್ಯ ಮತ್ತು ಲಕ್ಕ ಆಶ್ಚರ್ಯಕರ ರೀತಿಯಲ್ಲಿ ಸತ್ಯವನ್ನೆದುರಿಸುತ್ತಾರೆ. ಲಕ್ಕನನ್ನು ವಿಚಾರಣೆಗೆ ಕರೆತರುವವನು ಅವನನ್ನು ಅತಿಯಾಗಿ ಪ್ರೀತಿಸುತ್ತಿದ್ದ ದೊಡ್ಡಯ್ಯ. ಲಕ್ಕ ನಿಷ್ಠುರವಾಗಿ ವಿಚಾರಣೆಯನ್ನೆದುರಿಸುತ್ತಾನೆ.

ನರುಮನಹಳ್ಳಿಯಲ್ಲಿ ಮಾನವೀಯತೆ ಇರುವುದಾದರೆ ಅದು ಕೀಳು ಜಾತಿ ಎನಿಸಿಕೊಂಡವರ ಸಮಾಜದಲ್ಲಿ. ತನ್ನ ಜೀವನಾಧಾರವಾದ ಐದು ಎಮ್ಮೆಗಳನ್ನು ಕಳೆದುಕೊಂಡು ಬಂದ ಲಕ್ಕನನ್ನು ಬುಂಡಮ್ಮ ಕ್ಷಮಿಸಬಲ್ಲಳು.

> ಈಗೇನ ಸೋರೊಮ್ದು ?... ಈಗ್ಲೂ ಪೋಟೀಯ. ಅಯಿದು ಎಮ್ಮೆ ಪೋದುರೂವೆ... ಇದ್ಕೆ ನೀ ಯಾಕ್ಲ ಚಿಂತೆ ಮಾಡ್ತಿ ? — ತಿನ್ನು, ತಿನ್ನುಂತ ಪತ್ತಾಯಿಸ್ಸಿ ನಾ ರೊಟ್ಟಿ ಪೂರಾ ತಿನ್ನೋತಂಕ ಆ ಜಾಗ ಬುಟ್ಟು ಅಳ್ಳಾಡಿಪ್ರೆ ಯೋಳ್ತೀನಿ(೫೮)

ಅಷ್ಟೆ ಅಲ್ಲ ಲಕ್ಕನಿಗೆ ಊಟಮಾಡಿಸಿ ಆತನ ಸುಖದುಃಖಗಳನ್ನು ವಿಚಾರಿಸಬಲ್ಲಳು. ಹಳ್ಳಿಯಲ್ಲಿ ಅವನನ್ನು ವಿಚಾರಣೆಗೆ ನಿಲ್ಲಿಸಿದಾಗ ಅವನ ಬಗ್ಗೆ ಅನುಕಂಪ ತೋರಿಸುವವರು ಬುಂಡಮ್ಮ ಮತ್ತು ದ್ಯಾವಾಜಮ್ಮ. ಕೊನೆಗೆ ಅವನಿಗೆ ಹೊಡೆನು ಬೆಂಕಿ ನೀರು ಕೊಡದಂತೆ ಬಹಿಷ್ಕಾರ ಹಾಕಿ ಊರಿನಿಂದ ಹೊರಗೆಸೆದಾಗ ಗೋಸುಸಾಹೇಬರ ಮಾನವೀಯತೆ ಅವನನ್ನು ಕಾಪಾಡುತ್ತದೆ, ಮುಲಗಲು ಒಂದು ಜೋಪಡಿ ಸಿಗುತ್ತದೆ. ಕಾದಂಬರಿಯಲ್ಲೆಲ್ಲ ಮಾನವೀಯ ಘಳಿಗೆಯನ್ನು ನಾವು ಕಾಣುವುದು ಲಕ್ಕ ಮತ್ತು

ಅವನ ತಂದೆ ತಾಯಿ ನಡುವೆ. ನಿಂಗಯ್ಯ ಕುಡಿಯುತ್ತಾನೆಂದು ಆತನ ಬಗ್ಗೆ ಬೇಸರ ವಿದ್ದರೂ ಆತನ ಅಧೋಗತಿಯನ್ನು ಲಕ್ಕ ಅತ್ಯಂತ ಸಹಾನುಭೂತಿಯಿಂದ ನೋಡು ತ್ತಾನೆ. ಕಲ್ಯಾಣಿ ಲಕ್ಕನಿಗೆ ರೊಟ್ಟಿ ತೆಗೆದುಕೊಂಡು ಹೋಗುವ ದೃಶ್ಯ ಉದಾಹರಿಸಲು ಯೋಗ್ಯವಾದದ್ದು. ಅಷ್ಟು ಹೊತ್ತು ನಡೆದು ಬಂದ ಮೇಲೂ ಅವು ಬಿಸಿಯಾಗಿಯೇ ಇರುವ ರಹಸ್ಯವನ್ನು ಆಕೆ ಸತ್ತ ಮೇಲೆ ಅರಿತುಕೊಳ್ಳುವ ಲಕ್ಕ ಮಮ್ಮಲ ಮರುಗು ತ್ತಾನೆ.

> ......ಬೊಡ್ಡನ ಜಗ್ಗಾಟದಲ್ಲಿ ಬಿಚ್ಕೋದ ಅವನ ನೆರಿಗೆ ಸರಿಪಡಿಸ್ತ ಇರೋ ನುವೆ, ಅವ್ವನ ವೊಕ್ಕಳದ ಸುತ್ತ ರೊಟ್ಟಿ ಅಗಲಕ್ಕೆ ಸುಟ್ಟೋಗಿ, ಗುಂಡಗಿನ ಗಾಯಂದ ಕಪ್ಪು ಕಲೆ ಕಾಣಸ್ತು. ಲಕ್ಕ ಬೆಚ್ಕೋದ. ಅವನ್ಗೆ ಈಗ ವೊಳೀತು– ಅವ್ವ ತತ್ತಿದ್ದ ರೊಟ್ಟಿ, ಇಲ್ಗಿ ಬರೋಗಂಟ ಅದೆಂಗೆ ಬೆಚ್ಚಗೆ ಇರ್ತಿದ್ದೋ ಅಂತ!......ಇವ್ವ ಬಿಸಿಯಾಗಿದ್ದಂಗೇಯ ರೊಟ್ಟಿಗಳ ಮೊಡಿಸಿ ತನ್ನ ನೆರಿಗ್ಗೆ ಸಿಕ್ಕಿಸಿ ತತ್ತಿದ್ಲು. ಕೆಬ್ಬೊಟ್ಗೆ ನೆರಿಗ್ಗೆ ನಡೂವಂದ್ಯ ಅವು ತಮ್ಮ ಸಾಖ ಕಳ ಕೊಳ್ಳದೆ ಬೆಚ್ಚಗೆ ಇರ್ತಾ ಇದ್ದೊ...ಲಕ್ಕ ಅವ್ವನ ವೊಕ್ಕಳದ ಸುತ್ತ ಕಯ್ಯಾ ಡಸ್ದ. ಚಿಲ್ಲನೆ ಕಣ್ಣಲ್ಲಿ ನೀರು ಬಸೀತು...(೬೫)

ಅತ್ಯಂತ ಮನಮುಟ್ಟುವ ಹೃದಯಸ್ಪರ್ಶಿ ದೃಶ್ಯವಿದು. ನಾಭಿಯು ತಾಯಿ ಮತ್ತು ಮಗುವಿನ ಕರುಳ ಸಂಬಂಧದ ಮೂಲ ಸ್ಥಾನ, ಕಾದಂಬರಿಕಾರರು ಅವರ ನಡುವಿನ ಮಾನವೀಯ ಸಂಬಂಧದ ಅಂತರಾಳದ ಸೃಜತೆಯನ್ನು ಇಲ್ಲಿ ಸೂಚಿಸು ತ್ತಾರೆ.

ಕಾದಂಬರಿ ಎರಡು ಪ್ರಬಲವಾದ ಸಂಕೇತಗಳೊಡನೆ ಕೊನೆಗೊಳ್ಳುತ್ತದೆ. ಮೊದಲು ನೂರಾರು ಸಾವಿರಾರು ಗೊದ್ದೆಗಳು ಘಟಸರ್ಪ ಒಂದನ್ನು ಕೊಲ್ಲುವುದು. ನಂತರ ಆಗ ತಾನೆ ಹುಟ್ಟಿರುವ ಆನೆ ಮರಿಯನ್ನು ದೊಡ್ಡ ಆನೆಗಳು ಎದ್ದು ನಿಲ್ಲಲು ಸಹಾಯಮಾಡುತ್ತಿರುವ ದೃಶ್ಯ. ಒಂದು ಕೆಳಜಾತಿಯವರನಿಸಿಕೊಂಡವರೆಲ್ಲ ಒಟ್ಟಿಗೆ ಸೇರಿದರೆ ಸಾಧಿಸಬಹುದಾದುದನ್ನು ಸೂಚಿಸಿದರೆ, ಎರಡನೆಯದು ಅದನ್ನೆ ವೈಯುಕ್ತಿ ಕಗೊಳಿಸುತ್ತದೆ. ಲಕ್ಕನಿಗೆ ಮೊದಲಿನಿಂದಲೂ ತನ್ನ ಜಾತಿಯ ಹಿರಿಯರೆಲ್ಲರಿಂದಲೂ ಆಧಾರ ಸಿಕ್ಕಿದ್ದರೆ ತನ್ನ ಸ್ವಾತಂತ್ರ್ಯವನ್ನು ಪಡೆಯುತ್ತಿದ್ದನೊ ಏನೊ ? ಕಾದಂಬರಿ ಕಾರರಂತೂ ಈತ ಸ್ವಾತಂತ್ರ್ಯ ಪಡೆಯುತ್ತಾನೆಂದು ಈ ದುರಂತ ಗಳಿಗೆಯಲ್ಲೂ ಆಶೆಯನ್ನು ವ್ಯಕ್ತಪಡಿಸುತ್ತಾರೆ. ಇದು ಹಕ್ಕಿಯ ಸಂಕೇತದಲ್ಲಿ ಸ್ಪಷ್ಟವಾಗುತ್ತದೆ. ಕಾದಂಬರಿಯ ೨೪೬-೭ನೆ ಪುಟಗಳಲ್ಲಿ ಸೋರೆ ಕಟ್ಟ ಹಕ್ಕಿಯ ವಿವರ ಹೀಗೆ ಬರುತ್ತದೆ :

ಉಪ್ಪುಲ ಸೆಟ್ಟಿ,
ಉಪ್ಪುಲ ಸೆಟ್ಟಿ
ನೀ ಕರ್ರೆ
ನಾ ಪುರ್ರೆ

ಎಂದು ಯಾವದೋ ಹಕ್ಕಿ ಕೂಗಿದಂತಾಗಿ ಆ ಹಕ್ಕಿಯ ಪ್ರಸಂಗ ಇವನಿಗೆ ಜ್ಞಾಪಕಕ್ಕೆ ಬರುತ್ತದೆ :

'ಒಬ್ಬ ಉಪ್ಪುಲ ಸೆಟ್ಟಿ ಒಂದು ಇಂತಾ ಸೋರೆ ಕಟ್ಟನ್ನ ಇಡಿದು, ಅದರ ರೆಕ್ಕೆ ಪುಕ್ಕ ತರದಾಕಿ, ಅದ್ನ ತನ್ನ ಎಗಲು ಮ್ಯಾಲಿ ಕುಂಡರಿಸ್ಕಂಡು, ಉಪ್ಪಿನ ಯಾಪಾರಕೆ ಊರೂರು ತಿರುಗ್ತಾ ಇದ್ನಂತೆ. ಅವನೇನು ತಿಳುಕಂಡಿದ್ದ–ಈ ಹಕ್ಕಿ ರೆಕ್ಕೆ ಪುಕ್ಕ ತರದಾಕಿವ್ನಿ. ಇನ್ನು ಇದು ಹಾರಕ್ಕೆ ಇಲ್ಲ. ನನ್ನ ವಸದಲ್ಲೆ ಇರ್ತದೆ. ಅಟ್ಟಿಗೆ ವೋದಮ್ಯಾಲೆ ನನ್ನ ಎಡತಿ ಕೈಯ್ಕಲ್ಲಿ ಇದ ಬೇಯಿಸಿ. ಪಳದ್ಯ ಮಾಡಿ ತಿನ್ನ ಬೇಕೂಂತ ಲೆಕ್ಕ ಆಕಿದ್ದ. ಅದ್ರೆ ಕಾಲ ಕಳದಂಗೆ, ಇಂಕರ ಇಂಕರಾಗಿ ಆ ಹಕ್ಕಿಯ ರೆಕ್ಕೆ ಪುಕ್ಕ ಬೆಳೀತ ವೋದೊ ಒಂದು ದಿನ, ಪೂರ ಬೆಳುದ ಮ್ಯಾಗೆ, ಆ ಸೋರಕಟ್ಟ ಆ ಉಪ್ಪುಲ ಸೆಟ್ಟಿ ಹೆಗಲ ಮ್ಯಾಗಿ ನಿಂದ ವಶ್ಯಾಕ್ಕೆ ಹಾರಿ, 'ಉಪ್ಪಲ ಸೆಟ್ಟಿ, ಉಪ್ಪಲ ಸೆಟ್ಟಿ–ನೀ ಕರ್ರೆ, ನಾ ಪುರ್ರೆ ....ಅಂತ ಈಯಾಳ್ಸಿ ವೊಂಟೋಯ್ತಂತೆ!.......

ಇಲ್ಲಿ ಸಾವಿನ ಬಂಧನದಿಂದ ತಪ್ಪಿಸಿಕೊಂಡ ಆ ಸೋರೆಕಟ್ಟೆ ಲಕ್ಕನಿಗೆ ಕಾದಂಬರಿಯ ಕೊಟ್ಟಕೊನೆಯ ಪುಟದಲ್ಲಿ ಕಾಣಿಸಿಕೊಳ್ಳುತ್ತದೆ. ಅವ್ನ ನಡೀತಿದ್ದಂಗೆ ಒಂದು ಸೋರೆಕಟ್ಟ ಧೂಪದ ಮರದ ಮ್ಯಾಲೆ ಕುಂತು ಹಾಡ್ತು :

ಉಪ್ಪುಲ ಸೆಟ್ಟಿ
ಉಪ್ಪುಲ ಸೆಟ್ಟಿ
ನೀ ಕರ್ರೆ
ನಾ ಪುರ್ರೆ

ಲಕ್ಕ ಕತ್ತೆತ್ತಿ ನ್ವಾಡ್ದ, ಬೂದು ಬಣ್ಣದ ಆ ಪುಟಾಣಿ ಹಕ್ಕಿ ಧೂಪದ ಮರದ ರೆಂಬೆಮ್ಯಾಗ್ನಿಂದ ಪುರ್ರಂತ ಹಾರ್ತು. ಅವ್ನ ದ್ರುಸ್ಟಿ ಅದರಾಗೆ ನೆಟ್ತು. ಆ ಸೋರೆ ಕಟ್ಟ ಅಲ್ಹಾರಿ, ಇಲ್ಹಾರಿ, ಎತ್ತತ್ತಗೊ ಹಾರೊಯ್ತು !

ಮುಂದೆ ಗರುಡಾಳ ಪಕ್ಷಿ ಸ್ವತಂತ್ರವಾಗಿ ಹಾರಾಡುತ್ತಿರುವ ದೃಶ್ಯವೂ ಇದೆ. ಹೀಗೇ ಸಾಂಕೇತಿಕವಾಗಿ ಲಕ್ಕನಿಗೆ ಮುಂದೆ ರೆಕ್ಕೆ ಪುನಃ ಬೆಳೆದು ತನ್ನ ಸ್ವತಂತ್ರವನ್ನು ಗಳಿಸಿ

ಕೊಂಡಾನು ಎನ್ನುವ ಆಸೆಯಿಂದ ಕಾದಂಬರಿ ಕೊನೆಗೊಳ್ಳುತ್ತದೆ. ಕಾದಂಬರಿ ಅನುಭವವಾಗುವುದಕ್ಕೆ ಮುಂಚೆ ಇವರು ಉದಹರಿಸಿರುವ ಜರ್ಮನ್ ತತ್ವಶಾಸ್ತ್ರಜ್ಞನ "tragic optimism" ಎನ್ನುವ ಪದಗಳ ಅರ್ಥವನ್ನು ಈ ಹಕ್ಕಿಯ ಸಂಕೇತದಲ್ಲಿ ಸೂಚಿಸುತ್ತಾರೆ.

ಕಾದಂಬರಿಯ ಮೌಲ್ಯಮಾಪನದಲ್ಲಿ ಉಂಟಾಗಬಹುದಾದ ತೊಡಕನ್ನು ಈಗಾಗಲೇ ಸೂಚಿಸಿದ್ದೇನೆ. ಇಲ್ಲಿ ಯಾವ ಪಾತ್ರವನ್ನೂ ಪ್ರಮುಖ ಪ್ರಜ್ಞೆಯಾಗಿ ಪರಿಗಣಿಸಲು ಸಾಧ್ಯವಾಗದೇ ಇರುವುದರಿಂದ ಈ ತೊಡಕು ಉದ್ಭವಿಸುತ್ತದೆ. ಇದು ವಿವಾದಾಸ್ಪದವಾಗಬಹುದಾದ ಪ್ರಶ್ನೆ. ದೈಹಿಕ ಅಥವಾ ಸಾಮಾಜಿಕ ಮಟ್ಟದಲ್ಲಿ ಗ್ರಾಹ್ಯವಾಗುವ ಅನುಭವಗಳನ್ನು ಬೌದ್ಧಿಕ ಮಟ್ಟದಲ್ಲಿ ಅಥವ ತಾತ್ವಿಕ ಮಟ್ಟದಲ್ಲಿ ಮಥನ ಮಾಡಬಲ್ಲ ಶಕ್ತಿ ಯಾವ ಪಾತ್ರಕ್ಕೂ ಇಲ್ಲ. ನೈತಿಕ ದೃಷ್ಟಿಯಿಂದ ನೋಡಿದರೆ ಲಕ್ಕ ಎಲ್ಲ ಗಂಡು ಪಾತ್ರಗಳಿಗೂ ವಿಭಿನ್ನವಾಗಿ ಪ್ರತ್ಯೇಕವಾಗಿ ಉಳಿಯುವ ವ್ಯಕ್ತಿ. ಆದರೆ ಇವನಿಗೆ ಬೌದ್ಧಿಕ ಅಥವಾ ದಾರ್ಶನಿಕ ಮಟ್ಟದಲ್ಲಿ ನಿಂತು ನೋಡುವ ಆಯಾಮವಿಲ್ಲ. ಇವನದು ಆ ಮಟ್ಟಿಗೆ ಸೀಮಿತವಾದ ಪ್ರಜ್ಞೆ. ರುಕ್ಮಿಣಿಯೂ ಅಷ್ಟೆ; ಹಳ್ಳಿಯ ಎಲ್ಲ ಅಧರ್ಮ ಘಟನೆಗಳನ್ನು ನೆನೆಸಿಕೊಂಡು ಮರುಗುತ್ತಾಳೆ. ಈ ಮಟ್ಟಿಗೆ ಈ ಎರಡು ಪಾತ್ರಗಳು ಹ್ಯಾಮ್ಲೆಟನನ್ನು ಜ್ಞಾಪಕಕ್ಕೆ ತರುತ್ತಾರೆ. ಆದರೆ ಹ್ಯಾಮ್ಲೆಟನಿಗಿರುವ ತಾತ್ವಿಕ ಆಯಾಮ ಇವನಿಗಿಲ್ಲ. ಸ್ವಲ್ಪಮಟ್ಟಿಗೆ ಈ ಶಕ್ತಿ ಇರುವಂತೆ ಆರಂಭದಲ್ಲಿ ತೋರುವ ಕೃಷ್ಣಶಾಸ್ತ್ರಿ ಸಂಕ್ರಮಣ ಘಳಿಗೆಯಲ್ಲಿ ಸೋತು ಹೋಗುತ್ತಾನೆ. ದರುಮನಹಳ್ಳಿಯ ಅನೈತಿಕ ಬದುಕಿನಿಂದ ಮೇಲೆದ್ದು ಅದಕ್ಕೆ ಹೊಸ ಆಯಾಮವನ್ನು ಕೊಡುವ ಶಕ್ತಿ ಇರುವ ಪಾತ್ರ ಎನಿಸುವ ಸಂದರ್ಭದಲ್ಲಿ ರುಕ್ಮಿಣಿಯ ಪತನಕ್ಕೆ ಮೂಲ ಕಾರಣನಾಗುತ್ತಾನೆ. ಸತ್ಯವನ್ನೆದುರಿಸುವ ಘಟನೆಯಲ್ಲಿ ಸಂಪೂರ್ಣ ಸೋತು ಸಾಧಾರಣ ವ್ಯಕ್ತಿಯಾಗಿಬಿಡುತ್ತಾನೆ.

ಇನ್ನು ಬುಡ್ಡಮ್ಮ ಹಾಗೂ ದ್ಯಾಮವ್ವ ಹಳ್ಳಿಯ ಅಧರ್ಮ, ಅನೀತಿಯುತ ಘಟನೆಗಳನ್ನು ಗುರುತಿಸುತ್ತಾರೆ, ಕಾರಣಕರ್ತರನ್ನು ನಿಂದಿಸುತ್ತಾರೆ. ಆದರೆ ಅವರ ಧ್ವನಿಗಳು ಹಿನ್ನಲೆಯಲ್ಲಿ ಉಳಿದುಬಿಡುತ್ತವೆ. ಹಳ್ಳಿಯ ಆಗುಹೋಗುಗಳಲ್ಲಿ ಇವರ ಧ್ವನಿಗಳು ಯಾವ ಪರಿಣಾಮವನ್ನು ಮಾಡುವುದಿಲ್ಲ.

ಕಾದಂಬರಿಯ ಹಿನ್ನೆಲೆಯಲ್ಲಿ ಮಹಾಭಾರತದ ಕತೆಯನ್ನು ಇಟ್ಟುಕೊಳ್ಳಲಾಗಿದೆ ಎಂದು ಮೊದಲೇ ಹೇಳಿದ್ದೇನೆ. ಆದರೆ ಭಾರತದ ಕತೆಯಲ್ಲಿ ಮಾನವನಿಗೆ ಸಾಧ್ಯವಾಗುವ ಎಲ್ಲ ಮಟ್ಟಗಳಲ್ಲೂ ಸಂಭವಗಳನ್ನು ಗ್ರಹಿಸಿ, ಮಥಿಸಿ ಉನ್ನತ ಮೌಲ್ಯಗಳ ಬಗ್ಗೆ ನಮ್ಮ ಪ್ರಜ್ಞೆಯನ್ನು ಎಚ್ಚರವಾಗಿರಿಸುವ ಶ್ರೀಕೃಷ್ಣ, ಧರ್ಮರಾಯ, ಭೀಷ್ಮ ಇತ್ಯಾದಿ ಹಲವಾರು ಪಾತ್ರಗಳಿವೆ. 'ವೈಶಾಖ'ದಲ್ಲಿ ಈ ರೀತಿಯ ಪಾತ್ರವಿಲ್ಲ

ದಿರುವುದರಿಂದ ಯಾವ ಮಟ್ಟದಲ್ಲಿ ಅನುಭವವನ್ನು ಗ್ರಹಿಸಬೇಕು ಎನ್ನುವುದು ಓದುಗರಿಗೆ ಸವಾಲಾಗಿಯೆ ಉಳಿಯುತ್ತದೆ. ಇದು ಕಾದಂಬರಿಯ ಪ್ರಮುಖ ಕೊರತೆಯೆ ? ಅಥವಾ ನಮ್ಮ ಸಮಕಾಲೀನ ಸಮಾಜ ಇರುವುದೇ ಹೀಗೆ ಎಂದು ಕಾದಂಬರಿಕಾರರು ಸೂಚಿಸುತ್ತಿದ್ದಾರೆಯೆ ? ಎನ್ನುವುದು ಈ ಕಾದಂಬರಿಯಲ್ಲಿ ಪ್ರಮುಖವಾಗಿ ಚರ್ಚೆಯಾಗಬೇಕಾದ ಅಂಶ.§

೧೯೮೨

§ ಈ ಲೇಖನ ಕೊನೆಯ ಹಂತದಲ್ಲಿದ್ದಾಗ ನನ್ನ ಸ್ನೇಹಿತರಾದ ಜಿ. ಎಚ್. ನಾಯಕರು ದೆಹಲಿಗೆ ಬಂದಿದ್ದರು. ಅವರೊಡನೆ ನಡೆಸಿದ ಚರ್ಚೆಯಿಂದಾಗಿ ಕೆಲವು ಲಾಭಗಳನ್ನು ಪಡೆದಿದ್ದೇನೆ.

ಕೆ. ಆರ್. ದುರ್ಗಾದಾಸ್

ಹುಲಿಗೆಮ್ಮ ನಿನ್ನಾಲ್ಕುಘೋ ಉಘೋ

ಮಳೆ ಇಲ್ಲದೇ
ಬತ್ತಿದ ತೊರೆಯಾಗಿ
ಮುಸುಮುಸು ಅಳುತ್ತಾ
ತುಂಗಭದ್ರೆ ಕುಳಿತಾಗ ನಿನ್ನ ಜಾತ್ರೆ.

ಬಂಡಿ–ಬಸ್ಸು–ರೈಲು
ತುಂಬುತುಂಬಿ ಭಕ್ತರ ಆಗಮನ.
ಎಲ್ಲೆಲ್ಲೂ ಉಘೋ ಉಘೋ ಉಘೋ.

ಜಳಜಳ ಹೊಳೆಯುವ ತಂಗೆ
ಕಂಡವರ ತೋಳಲ್ಲಿ ಸಿಕ್ಕು
ರಾಡಿಯಾಗುವ
ಸೂಳೆ.

‡ ಬಳ್ಳಾರಿ ಸುತ್ತಮುತ್ತ ಬಸ್ವಿ ಬಿಡುವುದನ್ನು ಕುರಿತು ಬರೆದದ್ದು.

ಶ್ರೀಕೃಷ್ಣ ಚೆನ್ನಂಗೋಡ್

ನೂಪುರೇ ತ್ವಭಿಜಾನಾಮಿ....

ಕೌಸಲ್ಯಾತ್ಮಜ ಒಡವೆಗಳ ಗಂಟನ್ನು ಬಿಚ್ಚಿದಾಗ
ಕೇಯೂರ, ಕಂಕಣ...ನನ್ನನ್ನು ಚುಚ್ಚಲಿಲ್ಲ
ನೂ...ಪು....ರ...ಬೆಚ್ಚಿದೆ
ನೆನಪುಗಳ ಗಂಟು ಬಿಚ್ಚಿತ್ತು ಹರಡಿತ್ತು ನನ್ನೆದುರಿನಲ್ಲಿ
ನೂಪುರಗಳನ್ನು ಗುರುತಿಸಬಲ್ಲೆ ಎಂದೆ
ಜನಕಜೆಯ ಚರಣಗಳಿಗೆ ನಮನ ಸಲ್ಲಿಸಿದ್ದೆ
ತುಳಿದ ಹಾದಿಯ ಕಡೆಗೆ ಮನ ಸಲ್ಲಿಸಿದ್ದೆ

ಕೊರಳ ಹಾರವನ್ನು ನೋಡಿರಲಿಲ್ಲ
ಕರ್ಣಾಭರಣವನ್ನು ಬಳೆಗಳನ್ನೂ ಈ ಮೊದಲು.
ಹೇಗೆ ನೋಡಲಿ ಅವಳ ಮೊಗವನ್ನು
ನಮ್ಮ ನೋಟದ ನಾವೆ ನಾವೆ ತೀರ
ಜಗದ ಝಂಝಾವಾತದಲ್ಲಿ ದೂರ

ಮೂಡಿದ್ದವು ನನ್ನೆದೆಯ ಮಳಲ ದಂಡೆಯಲ್ಲಿ
ಅವಳ ಪಾದ ಮೂಡಿಸಿದ ಹೆಜ್ಜೆ ಗುರುತುಗಳು
ಕಾಲದ ಅಲೆಗಳಿಂದ ತೊಯ್ದಿದ್ದವು
ತೊಳೆದು ಹೋಗಿರಲಿಲ್ಲ, ಹೋಗುವಂತಿರಲಿಲ್ಲ
ಕೇಳಿದ್ದವು ನನ್ನ ಬಗೆಗುಡಿಯ ಕಂಬ ಕಂಬಗಳು
ನೂಪುರ ಗಂಟೆಗಳ ಆರ್ತನಾದವನ್ನು
ಅನುರಣಿಸುತ್ತ ವಿಷಾದವನ್ನು
ವರ್ಷಗಳ ಹಿಂದೆ ನೆಲೆ ಬದಲಿದಾಗ
ಊರ್ಮಿಳೆ ಪುರದಲ್ಲಿ
ರಾಮ ಗಹ್ವರದಲ್ಲಿ
ಸೀತೆ ಕಾಂತಾರದಲ್ಲಿ
ನಾನೂ.

ಹಮೀದ್ ಜಬೀನ್

ಅಪರಾಧಿ

ವಿವಾದಕ್ಕೆ ಒಳಗಾಗಿದ್ದ ಒಂದು ಪಾಕಿಸ್ತಾನಿ ಕಥೆ

ರೂಪಾಂತರ : ದು. ನಿಂ. ಬೆಳಗಲಿ

ನೆಲವೆಲ್ಲ ಬಿರುಕು ಬಿಟ್ಟಿತ್ತು. ನದಿತೀರ, ಕಾಲುದಾರಿಗಳು, ಬಾವಿ ಕೆರೆಗಳು ಎಲ್ಲವೂ ಉದಾಸ ಹಾಗೂ ಶೂನ್ಯವಾಗಿದ್ದವು.

ಹಸಿಮಣ್ಣಿನ ವಾಸನೆಗಾಗಿ ಜನ ಪರಿತಪಿಸುತ್ತಿದ್ದರು. ಇಡೀ ವರ್ಷ ಮೋಡಗಳು ಗುಡುಗಲಿಲ್ಲ, ಮಳೆ ಸುರಿಸಲಿಲ್ಲ. ಫಾಲ್ಗುಣ ಕಳೆದು ಹೋಯಿತು. ಚೈತ್ರವು ಮುಗಿಯಿತು. ಆದರೆ ಸೂರ್ಯ ಮಾತ್ರ ಬೆಂಕಿಯನ್ನೇ ಕಾರುತ್ತಲಿದ್ದ. ಭೂಮಿಯ ಎದೆಯನ್ನು ಸೀಳಿ ಹೊರಬಂದ ಮೊಳಕೆಗಳು ಬರುಬರುತ್ತ ಬಾಡಿಹೋಗುತ್ತಲಿದ್ದವು. ನಾಯಿಗಳಂತೆ ನಾಲಿಗೆ ತೆರೆದು ಬೆಂಕಿಯನ್ನು ಉಗುಳುತ್ತಲಿದ್ದ ಸೂರ್ಯನನ್ನು ದಿಟ್ಟಿಸುತ್ತಲಿದ್ದವು. ಎಲ್ಲರ ನಾಲಗೆ ಮೇಲೆ ಒಂದೇ ಮಾತು, ಒಂದೇ ಪ್ರಾರ್ಥನೆ–"ಎಲ್ಲೈ ದೈವ ಕರುಣೆಯೆ! ಎಲ್ಲೈ ದೈವದ ಮಳೆಯೆ!...ನೀರು...ನೀರು!"

ಆದರೆ ಮೂರು ತಿಂಗಳವರೆಗೆ ಅದೇ ರೀತಿಯ ವಾತಾವರಣವಿತ್ತು. ಭೂಮಿಯು ಬಾಯಿ ತೆರೆಯುತ್ತಿರುವುದನ್ನು ನೋಡಿ ನೋಡಿ ಜನತೆ ಭಯಪಟ್ಟಿತು. ಈ ಭೂಮಿ ಪಾಪಗಳ ಭಾರದಿಂದ ತುಂಬಿಹೋಗಿದೆಯೆಂದು ಎಲ್ಲರಿಗೆ ನಂಬಿಕೆಯಾಯಿತು...... ಮತ್ತು ಬೇಗನೇ ಒಂದು ಮಹಾ ಪ್ರಕೋಪ ಒದಗಲಿದೆಯೆಂದು ಕೂಡ ಭಾಸವಾಯಿತು.

ಅಂದು ಶುಕ್ರವಾರ. ಬೆವರಿನಿಂದ ತೊಯ್ದು, ಬೇಗೆಯಿಂದ ಬೆಂದು ಊರಿನ ಜನರೆಲ್ಲ ಮೌಲವಿ ಸಾಹೇಬರ ಉಪದೇಶ ಕೇಳುತ್ತಲಿದ್ದರು.

"ಯಾವಾಗ ಭೂಮಿಯ ಮೇಲೆ ಎಲ್ಲೆಡೆ ಅಪರಾಧಗಳು ಜರುಗುತ್ತವೆಯೋ, ಆಗ ದೈವದ ಆಪತ್ತನ್ನು ಎದುರಿಸಬೇಕಾಗುತ್ತದೆ. ಈ ಊರಲ್ಲಿ ಯಾವುದೋ ಒಂದು ಮಹಾಪರಾಧ ಜರುಗಿದ್ದು ಖಚಿತವಿದೆ. ಆದ್ದರಿಂದ ನಾವೆಲ್ಲ ಬಯಲಿಸಲ್ಲಿ ಸೇರಿ ಪ್ರಾರ್ಥಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ...ಬೇಡಿಕೊಳ್ಳೋಣ...ದೇವರು ನಮ್ಮ ಅಪರಾಧವನ್ನು ಕ್ಷಮಿಸಲಿ! ಆದರೆ ಇದರ ಜತೆ ನಾವು ವಿಚಾರಿಸಬೇಕಿದೆ. ಯಾವ ಅಪರಾಧ ಜರುಗಿದೆಯೋ ಅದನ್ನು ಶೋಧಿಸಬೇಕು. ನಾವು ಯಾವುದೋ ಒಂದು ಅಪರಾಧ ಮಾಡಿದ್ದೇವೆ. ಅದಕ್ಕಾಗಿ ನಮ್ಮ ದೇವರು ಮುನಿದಿದ್ದಾನೆ."

"ನಮ್ಮ ಊರಲ್ಲಿ ಯಾವುದೋ ಅಪರಾಧವಾಗಿದೆ" ಎಂದು ಪ್ರತಿಯೊಬ್ಬನೂ ಹೇಳ ತೊಡಗಿದನು. ಗ್ರಾಮದ ಹಾಜಿಸಾಹೇಬರು ಅಲ್ಲಿಯ ಸಮಿತಿಯ ಪ್ರಮುಖರಾಗಿ ದ್ದರು. ನಡತೆಯಿಂದ ಸಭ್ಯರು, ದಯಾಳು ಮತ್ತು ಧರ್ಮಭೀರು ವ್ಯಕ್ತಿ. ಅವರು ಸಮಿತಿಯ ಸಭೆ ಕರೆದರು.

"ನಿಮ್ಮ ನಿಮ್ಮ ಓಣಿಗಳಲ್ಲಿ ಯಾರಾದರೂ ದುರಾಚಾರಿಗಳಿದ್ದರೆ ಅವರನ್ನು ಕಂಡು ಹಿಡಿಯಿರಿ. ಯಾರ ಮೇಲೆ ಅತ್ಯಾಚಾರ ಜರುಗಿದೆ ? ಇಡೀ ಊರಿಗೆ ಊರೇ ಜ್ವಲಿಸುತ್ತಿರುವುದಕ್ಕೆ ಕಾರಣವೇನು ? ಪ್ರತಿಯೊಬ್ಬರೂ ಅಪರಾಧವನ್ನು ಶೋಧಿ ಸಿರಿ. ವ್ಯಕ್ತಿಗತವೂ ನೋಡಿಕೊಳ್ಳಿರಿ. ಆದಾದ ಬಳಿಕ ಮರುದಿನ ಪ್ರಾರ್ಥನೆ ಜರುಗಲಿ. ಅದರಲ್ಲಿ ಊರಿನ ಮಕ್ಕಳೂ ಭಾಗವಹಿಸಲಿ" ಎಂದು ಎಲ್ಲರಿಗೆ ಹೇಳಿದರು.

ಉಪದೇಶ ಮಾಡಿ ಸಾಯಂಕಾಲದ ನಮಾಜು ಮುಗಿಸಿದ ಬಳಿಕ ಹಾಜೀ ಸಾಹೇಬರು ಮನೆಗೆ ಬಂದಾಗ ಅವರ ಕಿರಿಯ ಹೆಂಡತಿ ಮನೆಯಲ್ಲಿರಲಿಲ್ಲ. ಹಾಜೀ ಸಾಹೇಬರು ಈ ವಿಷಯದಲ್ಲಿ ಅತ್ಯಂತ ಕಠೋರವಾಗಿದ್ದರು. ಅವರ ಹಿರಿಯ ಹೆಂಡತಿ ವಿವಾಹ ವಾದ ಬಳಿಕ ಮನೆ ಸೇರಿದವಳು, ಬಹುಶಃ ಹಕೀಮರ ಹತ್ತಿರ ಕೂಡ ಹೋಗಿರಲಿಲ್ಲ. ಅವಳ ಹೆಣವೇ ಈ ಮನೆಯಿಂದ ಹೊರಬಿದ್ದಿದ್ದು.

ಹಿರಿಯ ಹೆಂಡತಿಯ ಮೇಲಿದ್ದ ಬಂಧನಗಳೇ ಕಿರಿಯ ಹೆಂಡತಿಗೂ ಅನ್ವಯಿಸು ತ್ತಿದ್ದವು. ಆದರೆ ಆಕೆ ಈ ದಿನ ಎಲ್ಲಿ ಹೋದಳು ? ಹೇಳದೆ ಕೇಳದೆ ಎಲ್ಲಿಗೆ ಹೋಗಿರಬೇಕು ? ಹಾಜೀ ಸಾಹೇಬರು ಸಿಟ್ಟು ಬೆಂಕಿಯಾದರು. ಅವರು ವೇಗ ವಾಗಿ ಮಾಲೆಯನ್ನು ಸುತ್ತತೊಡಗಿದರು. ಅಷ್ಟರಲ್ಲಿ ಅವರ ಹಿರಿಯ ಮಗ, ಕೆಲವು ದಿನಗಳಿಂದ ನಗರದಲ್ಲಿ ವಾಸಿಸುತ್ತಿದ್ದು, ಆ ಸಮಯ ಹಳ್ಳಿಗೆ ಬಂದಿದ್ದವನು, ಕೋಣೆಯನ್ನು ಪ್ರವೇಶಿಸಿದನು.

"ಅಬ್ಬಾಜೀ ನೀವು ಮಸೀದೆಯಿಂದ ಬಂದಿರೇನು ? "

"ಹಾಂ. ಮೈಯಲ್ಲಿ ಅಷ್ಟು ಸರಿಯಿರಲಿಲ್ಲ, ಬೇಗ ಬಂದೆ....ಆದರೆ ನಿಮ್ಮ ಚಿಕ್ಕಮ್ಮ ಎಲ್ಲಿ ? ನಮ್ಮ ಮನೆಯ ಹೆಂಗಸರು ಹೊರಗೆ ಹೋಗಬಾರದೆಂಬುದು ಆಕೆಗೆ ತಿಳಿದಿಲ್ಲವೆ ?"

"ಅಮ್ಮ ಮನೆಯಲ್ಲಿಯೇ ಇದ್ದಾರೆ. ಈಗ ಅಂಗಳದಲ್ಲಿದ್ದರು...ಹಾಂ....ಮಾಳಿಗೆ ಮೇಲೆ ಇರಬಹುದು...ಮಳೆ ಇಲ್ಲವಲ್ಲ...ಒಳಗೆ ಕುಳಿತು ಕುಳಿತು ಬೇಸರಪಟ್ಟಿರ ಬೇಕು. ಹೋಗಿ ನೋಡುತ್ತೇನೆ..."

ಅನಂತರ ಕೆಲ ಸಮಯ ಬಿಟ್ಟು ಅವನು ಮರಳಿ ಬಂದನು.

"ಅಮ್ಮಿ ಮಾಳಿಗೆ ಮೇಲೇ ಇದ್ದಾರೆ. ಮಳೆಗಾಗಿ ಪ್ರಾರ್ಥಿಸುತ್ತಿದ್ದಾರೆ!" ಎಂದು ಹೇಳಿದನು.

ಹಾಜೀ ಸಾಹೇಬರು ನೆಮ್ಮದಿಗೊಂಡರು. ಮಾಲೆಯನ್ನು ಸುತ್ತುತ್ತಲಿರುವ ಅವರ ಬೆರಳುಗಳ ಗತಿ ನಿಧಾನವಾಯಿತು. ಮಗ ಇನ್ನೂ ಅವರ ಹತ್ತಿರಕ್ಕೆ ಬಂದ. ಅವರ ಪಕ್ಕದಲ್ಲಿ ಕುಳಿತ.

"ಅಬ್ಬಾಜೀ, ನಾನು ಶಹರದಿಂದ ಬರುವಾಗ ಊರಲ್ಲಿ ತಂಪು ಹವೆ ಇದ್ದಿರಬಹು ದೆಂದು ತಿಳಿದಿದ್ದೆ. ...ಆಕಾಶದಲ್ಲಿ ಕಪ್ಪು ಮೋಡಗಳು ಮುಸುಕಿರಬಹುದೆಂದು ಭಾವಿಸಿದ್ದೆ. ಧೋ ಧೋ ಮಳೆ ಸುರಿಯುತ್ತಿರುವ ಕಲ್ಪನೆ...ಎಲ್ಲೆಡೆ ನೀರು.... ಆದರೆ ಇಲ್ಲಿ...ಊರವರು ಈ ಸಲದ ಹೊಸ ಫಸಲನ್ನು ಕನಸಿನಲ್ಲಿಯೇ ಕಾಣ ಬೇಕಾಗುವುದೇನೋ !" ಎಂದು ಹೇಳಿದನು.

"ಅಲ್ಲಾ ಕರುಣೆ ಬೀರುವನು, ಅಲ್ಲಾ ತನ್ನ ಕಾರ್ಯ ಮಾಡುವನು !" ಎಂದು ಹಾಜೀ ಸಾಹೇಬರು ಆಕಾಶದತ್ತ ದೃಷ್ಟಿ ಬೀರಿ ಅಲ್ಲಿಂದ ಎದ್ದರು. ಅಂಗಳದತ್ತ ಹೋದಾಗ ಅವರಿಗೆ ಮಾಳಿಗೆ ಮೇಲೆ ಕಟ್ ಕಟ್ ಎಂದು ಸದ್ದು ಕೇಳಿ ಬಂತು. ಮಾಲೆಯ ಮಣಿಗಳನ್ನು ಎಣಿಸುತ್ತ ಎಣಿಸುತ್ತ ಅವರ ಬೆರಳುಗಳು ತಡೆದವು. ಅವರಿಗೆ ತಮ್ಮ ಹಿರಿಯ ಹೆಂಡತಿ ತೀರಿಹೋದ ಸಮಯ ಸ್ಮರಣೆಯಾಯಿತು. ಆಗ ಅವರ ಮನಸ್ಸು ಇಡದಿಂದ ಬೇಸತ್ತಿತ್ತು. ಸಂಸಾರದಲ್ಲಿ ರುಚಿ ಕಳೆದಿತ್ತು. ಆದರೆ ದೈವದಲ್ಲಿ ಬರೆದು ದನ್ನು ಯಾರು ಅಳಿಸಬಲ್ಲರು ? ಪತ್ನಿಯ ನಲವತ್ತನೆಯ ದಿನದ ಬಳಿಕ ಅವರ ಸಂಬಂಧಿಕರು, ಸ್ನೇಹಿತರು ಯಾರು ಬಂದರೂ ಅದೇ ಮಾತನ್ನು ಹೇಳುತ್ತಲಿದ್ದರು. "ಮನೆಯಲ್ಲಿ ದೀಪ ಹಚ್ಚುವವರು ಯಾರಾದರೂ ಬೇಕೇ ಬೇಕು."

"ನನ್ನ ವಯಸ್ಸು ಅರವತ್ತಕ್ಕೆ ಸಮೀಪಿಸಿದೆ. ನನಗೆ ತಮ್ಮ ಮಗಳನ್ನು ಯಾರು ಕೊಡಬಲ್ಲರು ?" ಎಂದು ಕೇಳಿ ಹಾಜೀ ಸಾಹೇಬರು ನಕ್ಕು ಬಿಡುತ್ತಿದ್ದರು.

"ತವಂಗ ಹುಡುಗಿಯರಿಗೇನು ಕೊರತೆ ? ಒಂದು ಸಲ 'ಹಾಂ' ಎಂದು ಹೇಳಿ ನೋಡಿರಿ" ಎಂದು ಒಬ್ಬ ಗೆಳೆಯ ನುಡಿದನು. ಆತನ ಹದಿನೆಂಟು ಮಧ್ಯದ ವಯಸ್ಸಿನ ಸೋದರ ಸೊಸೆಯ ಬಗೆಗೆ ಮಾತಂಕತೆ ನಡೆಯಿತು. ಒಂದು ಅವ್ಯಕ್ತ ಅನುಭವ ಹಾಜೀ ಸಾಹೇಬರ ಹೃದಯದಲ್ಲಿ ಕಚಕಂಳಿ ಇಟ್ಟಿತು ಅವರು ಆ ಮಾತಿಗೆ ಒಪ್ಪಿಬಿಟ್ಟರು.

ಮದುವೆಯ ದಿನ ಹಾಜೀ ಸಾಹೇಬರು ತಮ್ಮ ಹೊಸ ಹೆಂಡತಿಯನ್ನು ಕಂಡು ಸೋಜಿಗ ಪಟ್ಟಿದ್ದರು...ಅವಳು ಯುವತಿ ಅಲ್ಲದೆ ರೂಪವತಿ ಕೂಡ! ಅವಳ ಹೆಸರು ರೇಶಮ್.

•

ನಮಾಜಿಗಾಗಿ ಹಾಜೀ ಸಾಹೇಬರು ಮಸೀದೆಯತ್ತ ಹೊರಟು ಹೋದಾಗ ಅನ್ವರನು ರೇಶಮಳ ಹತ್ತಿರ ಬಂದು ಕುಳಿತ. ಅವಳ ಜತೆಯಾಗಿ ಆತ ರೊಟ್ಟಿಗಳನ್ನು ಬೇಯಿಸತೊಡಗಿದ. ಆತನ ಸಾಮೀಪ್ಯದಿಂದ ರೇಶಮಳಿಗೆ ಯಾವಾಗಲೂ ಗೊಂದಲ ವುಂಟಾಗುತ್ತಲಿತ್ತು.

"ನಾನು ರೊಟ್ಟಿಯನ್ನು ಲಟ್ಟಿಸಲೆ ?" ಎಂದು ಅನ್ವರ್ ಕೇಳಿದಾಗ ರೇಶಮ್ ನಕ್ಕು ಬಿಟ್ಟಳು. ಆದರೆ ಅನ್ವರನ ಬಿಸಿದೃಷ್ಟಿಯು ಬೆಂಕಿ ಆಕೆಯದೇಹವನ್ನು ಸುಡುತ್ತಲಿತ್ತು. ಆಕೆ ಭೂಮಿಯಂತೆ ಉರಿಯತೊಡಗಿದಳು.

"ಅವರೆಂಥ ದುಷ್ಟರು! ಅವರು ಒಬ್ಬ ರಾಜಕುಮಾರಿಯನ್ನು ಒಬ್ಬ ಮುದುಕ ಸೈತಾನನ ಸೆರಗಿಗೆ ಕಟ್ಟಿದ್ದಾರೆ!" ಎಂದು ಅನ್ವರ್ ಮೆಲ್ಲಗೆ ನುಡಿದನು. ರೇಶಮಳ ಕಣ್ಣು ತೇವಗೊಂಡವು. ಅವಳ ಉಸಿರು ಕಟ್ಟಿದಂತಾಗಲು, ತವೆಯ ಮೇಲೆ ಬೇಯುತ್ತಿರುವ ರೊಟ್ಟಿಯನ್ನು ಬಿಟ್ಟು ಒಳಗೆ ಓಡಿದಳು.

ಮರುದಿನ ಆ ಗ್ರಾಮದವರಿಗೆ ಒಂದು ಸಮಾಚಾರ ತಿಳಿಯಿತು—ಊರಲ್ಲಿ ಅಪರಾಧವು ಕಂಡು ಹಿಡಿಯಲ್ಪಟ್ಟಿದೆ ಎಂದು.

ದೊಡ್ಡ ಮಸೀದೆಯ ಹತ್ತಿರವೇ ಒಂದು ಮನೆಯಿತ್ತು. ಅಲ್ಲಿ ಶಾದೋ ವಾಸಿ ಸುತ್ತಿದ್ದಳು ಆಕೆಯ ಗಂಡನು ಕೆಲವು ದಿನಗಳಿಂದ ಅಂಗವಿಕಲನಾಗಿದ್ದನು. ಕೂಲಿ ನಾಲಿ ಮಾಡಿ ಶಾದೋ ಆತನ ಹೊಟ್ಟೆಗೆ ಹಾಕುತ್ತಿದ್ದಳು.

ಶಾದೋಳ ಹೊಟ್ಟೆ ಬೆಳೆಯುತ್ತಿದ್ದಂತೆ, ಎಂಟು ತಿಂಗಳು ತುಂಬಿದ ಬಗ್ಗೆ ದಾಯಿ ಹೇಳಿದ್ದಳು. ಶಾದೋ ಅಪರಾಧಿ ಎಂದು ಎಲ್ಲರೂ ಕಂಡು ಹಿಡಿದರು. ಖಚಿತವಾಗಿ

ಆಕೆ ವ್ಯಭಿಚಾರ ಮಾಡಿದ್ದಾಳೆ, ಇಲ್ಲದಿದ್ದರೆ ಪಾರ್ಶ್ವವಾಯು ರೋಗಿಯು ಮಗುವಿನ ತಂದೆಯಾಗಲು ಹೇಗೆ ಸಾಧ್ಯ ?

ಶಾದೋ ಬಹಳ ಅತ್ತಳು, ಆದರೆ ಯಾರೂ ಕೇಳಲಿಲ್ಲ, ಕನಿಕರಿಸಲಿಲ್ಲ. ಆಕೆಯ ಬಿಕ್ಕಳಿಕೆಗಳ ಸದ್ದು ಯಾರ ಕಿವಿ ಸೇರಲಿಲ್ಲ. ಶಾದೋಳನ್ನು ಊರುಬಿಡಿಸಿ ಹೊರ ಹಾಕಬೇಕು ಮತ್ತು ಆಕೆಯ ಅಪರಾಧದ ಬಗೆಗೆ ದೇವರಲ್ಲಿ ಕ್ಷಮೆ ಬೇಡಿಕೊಳ್ಳ ಬೇಕು ಎಂದು ಗ್ರಾಮದ ಜನರೆಲ್ಲ ಸೇರಿ ನಿರ್ಧರಿಸಿದರು.

ಮರುದಿನ ಬೆಳಗಿನಲ್ಲಿಯೇ ಜನರು ಬಯಲಿನಲ್ಲಿ ಸೇರಿದರು. ಅಲ್ಲಿ ಊರಿನ ಚಿಕ್ಕ ಬಾಲಕರು ಕೂಡ ಬಂದಿದ್ದರು. ಊರು ಬಿಟ್ಟು ಹೋಗಬೇಕೆಂದು ಎಲ್ಲರೂ ಶಾದೋಳಿಗೆ ಆಜ್ಞೆ ಮಾಡಿದರು. ಶಾದೋ ಎಲ್ಲರತ್ತ ದುಃಖದಿಂದ ಒಮ್ಮೆ ನೋಡಿದಳು. ತನ್ನ ವಿಕಲಾಂಗ ಗಂಡನನ್ನು ಹೊತ್ತುಕೊಂಡು ಏಳುತ್ತ ಬೀಳುತ್ತ ಊರ ಹೊರಗೆ ಹೋಗುವ ಕಚ್ಚಾ ರಸ್ತೆಯಿಂದ ನಡೆದಳು. ಆಕೆಯ ಕಾಲು ಕಂಪಿಸುತ್ತಿದ್ದವು. ಊರಿನವರು ಆಕಾಶದತ್ತ ನೋಡಿದರು, ಪ್ರಾರ್ಥನೆಗಾಗಿ ಕೈ ಎತ್ತಿದರು.

ಊರ ಬಿಟ್ಟು ಹೊರಟ ಶಾದೋ ರಸ್ತೆಯಲ್ಲಿ ಯಾವುದೋ ಒಂದು ಬಿಂದುವಿನಂತೆ ಕಂಡುಬರುತ್ತಿದ್ದಳು. ಎಲ್ಲರೂ ಅತ್ತ ನೋಡುತ್ತಲಿದ್ದರು. ಯಾವಾಗ ಆ ಬಿಂದು ಮಾಯವಾಗುವುದರಲ್ಲಿತ್ತೋ ಆಗ ನೋಡುನೋಡುವುದರಲ್ಲಿ ಪಶ್ಚಿಮದ ಕಡೆಯಿಂದ ಮೋಡಗಳ ಒಂದು ಕಪ್ಪು ಗುಂಪು ತೂಗಾಡುತ್ತ ಬಂದು ಊರ ಮೇಲೆ ಮುಸುಕಿತು...! ರಸ್ತೆಯಲ್ಲಿ ಶಾದೋಳ ಬಿಂದು ಮಾಯವಾದಂತೆಯೇ ರಪ ರಪ ಮಳೆ ಸುರಿಯತೊಡಗಿತು. ಸಿಡಿಲು ಮಿಂಚಿತು. ಮೋಡಗಳ ಗರ್ಜನೆಯಿಂದ ಊರಿಗೇ ಊರೇ ಪ್ರತಿಧ್ವನಿಸಿತು. ಜನರು ಮೋಡಗಳಂತೆಯೇ ಮಳೆಯಲ್ಲಿ ಪರಸ್ಪರ ಆಲಿಂಗಿಸಿಕೊಂಡು ಅಭಿವಂದನೆ ಸುರಿಸತೊಡಗಿದರು. ಪ್ರತಿಯೊಬ್ಬರ ನಾಲಗೆ ಮೇಲೆ ಒಂದೇ ಮಾತು—ಅಪರಾಧ ಊರಿನಿಂದ ಹೋಯಿತು ಮತ್ತು ಮಳೆ ಸುರಿಯಿತು !

ಹಾಜೀ ಸಾಹೇಬರು ಸಂತೋಷದಿಂದ ಮನೆಗೆ ಬಂದಾಗ ರಾತ್ರಿಯಾಗಿತ್ತು. ಅವರ ಬಟ್ಟೆಗಳನ್ನೆಲ್ಲ ತೊಯ್ದು ಹೋಗಿದ್ದವು. ಒಳಗೆ ಹೋಗುತ್ತಿರುವಲ್ಲಿ ಮದರಂಗಿಯ ಕಂಟಿಯ ಹತ್ತಿರದಲ್ಲಿಯೇ ಅವರಿಗೆ ಯಾರದೋ ನಗು ಕೇಳಿ ಬಂದಿತು...ಮತ್ತೆ ಬಳೆಗಳ ಸದ್ದು...! ಮತ್ತೆ ಬಟ್ಟೆಗಳ ಸರಸರ ಸಪ್ಪಳ !.... ಅವರು ಮರಳಿ ಬಂದು ಹೊರಬಾಗಿಲ ಆಸರೆಗೆ ಕುಳಿತರು. ಮತ್ತೆ ಎದ್ದರು. ಮದರಂಗಿಯ ಕಂಟಿಯ ಹಿಂದಿನಿಂದ ಹೊರಟಾಗ ರಪರಪ ಮಳೆಯಲ್ಲಿ ತೊಯಿಸಿಕೊಳ್ಳತೊಡಗಿದರು.

ತಂದೆಯನ್ನು ಕಂಡು ಅನ್ವರ್ ಗಾಬರಿಯಾಗಿ ಹತ್ತಿರ ಬಂದ.

"ವಾತಾವರಣದಲ್ಲಿ ಎಷ್ಟು ತಂಪು ಇದೆ ಅಬ್ಬಾಜೀ!" ಎಂದು ನುಡಿದ.

ಹಾಜೀ ಸಾಹೇಬರು ರೇಶಮುಳತ್ತ ದೃಷ್ಟಿಬೀರಿದರು......ಅವಳ ಮುಖದ ಮೇಲೆ ಅದೇ ಸಂತೋಷ ಉಕ್ಕುತ್ತಲಿತ್ತು. ಅದೇ ಮಳೆಯಾದ ಬಳಿಕ ಊರ ಜನರ ಮುಖದ ಮೇಲೆ ಸುರಿಯುತ್ತಿರುವ ಕಾಂತಿಯೇ ಅವಳ ಮುಖವನ್ನೂ ಆವರಿಸಿತ್ತು.

●

ಶಂಕರಗೌಡ ಸಾತ್ಮಾರ

ಬೇರುಗಳು

ಆ ಬೇರುಗಳು
ಮೋಟುಮರದ ಬೇರುಗಳು
ಹಳೆಯದಾದ ಕೊರಡಾದ ಬೇರುಗಳು

ನೀರು
ಸುರಿದು ಸುರಿದು ಸಾಕಾಗಿದೆ
ಅವು ಚಿಗುರಲೊಲ್ಲವು
ಕಣ್ಣು ಮನ ತಂಪಾಗಿಸಲೊಲ್ಲವು

ನಿರಾಶೆಯನ್ನೇ ತಂದಿವೆ

ಅವುಗಳನು ಕೀಳುವುದೇ ಸರಿ
ಕಿತ್ತು
ಹೊಸ-ಸಸಿಯ ನೆಡುವೆ.

ಆದರೆ
ಈ ಭೂಮಿಗುಣವನು
ಬದಲಾಯಿಸುವುದು ಹೇಗೆ ?

●

ನಾಲ್ಕು ಕವನಗಳು

೧. ಅನೂಚಾನ

ಕತ್ತಲು ಅವುಚುತ್ತಿರಲು ಹೆಣಭಾರ
ಮೌನ ಧಾವಿಸಿದಳು;
ಕಾತುರಕ್ಕೆ ಕಾಲೊಡೆದಂತೆ.

ಬಿಸಿಯುಸಿರಿನ ಕವನದ ತಹತಹ
ಚೈತನ್ಯದ ಚಿಲುಮೆಯಾದವು;
ಕಿಚ್ಚುಕ್ಕುವ ಕುಲುಮೆಯಂತೆ.

ಬಿಗಿಭದ್ರದ ಧಡಪಡ
ಕ್ರಿಯೆ ನಿರಂತರವಾದವು;
ಭರತ ಒಹಟಿಗಳು ಬೆರೆತಕ್ಕೆ ತವಕಿಸಿದಂತೆ.

ಧುಮುಗುಡುವನಂತ ನನಿಧಪ
ದಂಡೆ ನಿಶ್ಚಿಲ ತಲುಪಿತ್ತು;
ಸಂತೃಪ್ತಿಗೆ ಸೆಲೆಯೊಡೆದಂತೆ.

ಹಕ್ಕಿಯುಲಿ ತುಳುಕುತ್ತಿರಲು ಹೂಹಗುರ
ಮೌನ ಮರಳಿದಳು;
ತಂಗಾಳಿಯ ತೇರಿನಂತೆ.

೨. ದಾಂಪತ್ಯ

ಒಂದು ದಿನ ಗಂಡ ಹೆಂಡತಿಯನ್ನು ಹುಡುಕಿದ :

ಅಡಿಗೆ ಮನೆಯಲ್ಲಿ, ತೊಡುಗೆ ಮನೆಯಲ್ಲಿ
ಮನೆಯ ಕೊನೆಯಲ್ಲಿ, ಕೊನೆಯ ಮೊದಲಲ್ಲಿ

ಹಿತ್ತಿಲ ಪಕ್ಕದಲ್ಲಿ, ಗೋಡೆಯ ಗೂಡಿನಲ್ಲಿ
ನಡುಮನೆ ಉದ್ದದಲ್ಲಿ, ಬೆಡ್‌ರೂಮ್ ಛದ್ರದಲ್ಲಿ
ತೊಂಡೆ ದೊನ್ನೆ ಉಪ್ಪುಖಾರ, ಬೇಳೆ ಹುಳಿ ಮೆಂತೆ ಸೊಪ್ಪು
ಪೌಡರ್ ಫೀಡರ್ ಹಣಿಗೆ ಕನ್ನಡಿ, ಬ್ರಾರವಿಕೆ ಬಟ್ಟೆಯಂಗಡಿ
ಸಿನಿಮಾ ನಾಟಕ ಸ್ವರಸಂಯೋಜನ, ಗಾಡ್ ಗಾಸಿಪ್ ಜಗನ್ಮೋಹನ
ನಿರತನಿದ್ದೆಯ ಸುರತದ ಮಧ್ಯ ಏದುಸಿರೆಳೆಯುವ ಗಾಳಿಯ ಮಧ್ಯ;
ಒಂದು ದಿನ ಗಂಡ ಹೆಂಡತಿಯನ್ನು ಹುಡುಕೇ ಹುಡುಕಿದ.

ಹಾಗೆಯೇ ಒಂದು ದಿನ ಹೆಂಡತಿ ಗಂಡನನ್ನು ಹುಡುಕಿದಳು :

ಹೊರಗಿನ ಮನೆಯಲ್ಲಿ, ಒಳಗಿನ ಕೊನೆಯಲ್ಲಿ
ಸೋಮಾರಿ ಮಂಚದಲ್ಲಿ, ಅಲಮಾರಿ ಉಡುಪಿನಲ್ಲಿ
ಪಕ್ಕದಾಕೆಯ ಕಣ್ಣುಗಳಲ್ಲಿ, ಖಾಲಿ ವ್ಹಿಸ್ಕಿಯ ಸೀಸೆಗಳಲ್ಲಿ
ಜೂಜು ಅಟ್ಟೆಯ ಹಾದಿಯಲ್ಲಿ, ಓವ ಕೂಡುವ ಉಪಟಳದಲ್ಲಿ
ವ್ಹಿಸ್ಕಿ ಸೋಡಾ ವಡಾ ಪಕೋಡಾ, ಸ್ಯಾಲರಿ ಸರ್ವೀಸ್ ಆಫೀಸ ಪತ್ರ,
ಗಬ್ಬರಸಿಂಗನ ಶೋಲೆ ಚಿತ್ರ, ಬಣ್ಣದ ಹೆಣ್ಣಿನ ಬೆತ್ತಲೆ ಚಿತ್ರ
ಕರಿಯ ಬಣ್ಣದ ಕುದುರೆಯ ಬಾಲ, ನೀಲೀ ಕಣ್ಣಿನ ಹೆಣ್ಣಿನ ಜಾಲ
ಇಸ್ಪೇಟ್ ಎಕ್ಕಾ ರಾಜಾ ರಾಣಿ, ಓಸಿ ಅಂಗಡಿ ಜೇಮ್ಸ್ ಜಾನಿ;
ಒಂದು ದಿನ ಹೆಂಡತಿ ಗಂಡನನ್ನು ಹುಡುಕೇ ಹುಡುಕಿದಳು.

ಹೀಗೆ ಧಡಬಡ ಹುಡುಕುವ ಗಡಿಬಿಡಿಯಲ್ಲಿ
ಧಡೀರೆಂದು ಪರಸ್ಪರ ಎದುರು ಬಂದಾಗ
ಅರೆ ಅರೆ ಎಂದು ಇಬ್ಬರೂ ಗಡಬಡಿಸಿದರು;
ಎಲಾ ಇದರ ಎಂದು ಚಡಪಡಿಸಿದರು;
ಬದುಕುವ ಚಟದಲ್ಲಿ ಒಂದು ಅನಿವಾರ್ಯ ಆಟದಂತೆ;
ಒಬ್ಬರನ್ನೊಬ್ಬರು ಕಟಕಟ ಕತ್ತರಿಸಿ, ಉಪ್ಪು ಕಾರ ಹಚ್ಚಿ,
ತಕ್ಕ ಸಮಯಕ್ಕಿಷ್ಟಿಷ್ಟು ಚಪ್ಪರಿಸಿ ಬಿಟ್ಟು,
ಈಗ ಸತ್ತ ಆಸೆಗಳ ಶವಗಳಷ್ಟೇ ಆಗಿ
ನಾರುತ್ತ ಬಿದ್ದುಕೊಂಡದ್ದು ನೆನಪಾಗಿ,
ಅಂತೂ ಇಂತೂ
ಸಂತೃಪ್ತಿಯಲ್ಲಿ ಕುದ್ದುಹೋದರು.

೩. ಮುಗಿದ ಯುದ್ಧ

ಈಗ ಯುದ್ಧ ಮುಗಿದಿದೆ :
ಆರ್ತದಲ್ಲಿ ಭುಸುಗುಡುವ
ಭಾವಗಳ ಮರ್ಮರ ಮಾತ್ರ,
ಗಹನದಲ್ಲಿ ಗಡಗುಡುವ
ಬಿಸಿಯುಸಿರ ಉಮ್ಮಳ ಮಾತ್ರ.

ಈಗ ಯುದ್ಧ ಮುಗಿದಿದೆ :
ಜೀವ ಸತ್ತ ಕಣ್ಣಳಿಸುವ
ಹನಿಯಾಗದ ಕಸಿವಿಸಿ ಮಾತ್ರ,
ದನಿಯಾಗದ ಆಕ್ರಂದನದ
ಸನ್ನೆ ಮಾತ್ರದ ಚಟಪಟ ಮಾತ್ರ.

ಈಗ ಯುದ್ಧ ಮುಗಿದಿದೆ :
ತೊಟ್ಟಿಕ್ಕುವ ನರಕ ನಾಲಗೆಯ
ಕಡುಕೆಂಪು ತಟತಟ ಮಾತ್ರ,
ಚೆಲ್ಲಿದ ಕೊನೆಯುಸಿರಿನ
ಭಾರ ಮೌನದ ಭಣಭಣ ಮಾತ್ರ.

ಈಗ ಯುದ್ಧ ಮುಗಿದಿದೆ :
ಹಣಾ ಹಣಿ ರಣಾ ರಣಗಳ
ನೇಪಥ್ಯದ ನಿನಾದ ಮಾತ್ರ,
ಮರಸು ಕೂತ ಮಸೆತಗಳ
ಕುದಿಯುಸಿರ ತಹ ತಹ ಮಾತ್ರ.

ಹೌದು, ಈಗ ಯುದ್ಧ ಮುಗಿದಿದೆ :
ಸಮಸ್ಯೆಗಳೆಲ್ಲವೂ ಸುಡುಗಾಡು ಮಾತ್ರವಾಗಿ
ಮನುಷ್ಯ ಮಂಗಳ ಹಾಡಿದ್ದಾನೆ.

೪. ಸನ್ಮಾನ್ಯ ಮಂತ್ರಿಗಳೆದುರು, ಸರ್ಕೀಟ್ ಹೌಸಿನಲ್ಲಿ

ಕ್ಷಮಿಸಿ,
ದಯವಿಟ್ಟು ನಮ್ಮ ಮನ್ನಿಸಿ :
ನಿಮ್ಮೆದುರು ಹೀಗೆ ಬರಬಾರದಿತ್ತು,
ತಲೆಯ ಮೇಲೊಂದು ಸುಡುಗಾಡು ಹೊತ್ತು.

(ಗೊತ್ತು, ಸಾಕಷ್ಟು...)

ಸುತ್ತಿದ್ದೀರಿ; ದೇಶ ದೇಶದ ಸುತ್ತು
ನಮ್ಮ ಶಗಣಿ ಬದುಕಿನ ಬವಣೆ ಹೊತ್ತು,
ಗಾಸಿಗೊಂಡ ಗೋಸುಂಬೆ ಬದುಕಿನಲ್ಲಿ
ಬೆಳಕ ಬಿತ್ತುವ ಯೋಜನೆ ಹೊತ್ತು :
ಆದ್ದರಿಂದ
ನಿಮ್ಮೆದುರು ಹೀಗೆ ಬರಬಾರದಿತ್ತು,
ಕೊಲೆಯಾಗಿ ಹೋದ ಕನಸುಗಳ ಹೊತ್ತು.

ನಿಂತಿದ್ದೀರಿ; ದುಗುಡ ಮುಖಗಳ ಭಂಗಿಯು ಕೊಟ್ಟು
ವಿಗಡ ಭರವಸೆಯ ವೇಷವ ತೊಟ್ಟು,
ಬದುಕಿಡೀ ಹೊಟ್ಟೆ ಮಾತ್ರದ ಭಿಕಾರಿ ಬದುಕಿದಷ್ಟು
ಭಾಷಣದನ್ನದ ಭಿಕ್ಷೆಯು ತೆತ್ತು;
ಆದ್ದರಿಂದ
ನಿಮ್ಮೆದುರು ಹೀಗೆ ಬರಬಾರದಿತ್ತು,
ಕೊಳೆತ ಆಶೆಗಳ ಶವಗಳ ಹೊತ್ತು.

ಕೂತಿದ್ದೀರಿ; ಖಿನ್ನ ಸುಕ್ಕುಗಳ ಇಳಿಯುಬಿಟ್ಟು
ಇಲ್ಲದ ತೊಟ್ಟುಗಳ ಕಣ್ಣಲ್ಲಿಟ್ಟು,
ಎಲ್ಲೋ ಒತ್ತೆ ಇಟ್ಟು ಮರೆತುಬಿಟ್ಟ
ನಮ್ಮ ಜೀವ ದುರಂತಕ್ಕೆ ಕಳವಳ ಪಟ್ಟು;
ಆದ್ದರಿಂದ
ನಿಮ್ಮೆದುರು ಹೀಗೆ ಬರಬಾರದಿತ್ತು,
ಮಾರುಕ ಸತ್ತ ನರಕವ ಹೊತ್ತು.

ಮಲಗಿದ್ದೀರಿ: ಮರಳಿ ಏಳದಂತೆ ವೈಮಾನ ಮರೆತು
ಹೊತ್ತು ಹಾಕುವದ್ದೇಗೆಂಬ ಚಿಂತೆಯು ತೊಟ್ಟು,
ದನವಾಗಿ, ಪಶುವಾಗಿ ಕೊನೆಗೊಮ್ಮೆ ಪ್ರೇತವಾಗಿ ಹೋದ
ನಮ್ಮ ಹೇಲು ಅಸ್ತಿತ್ವದ ಬಗ್ಗೆ ಹೇಸಿಗೆ ಪಟ್ಟು,
ಆದ್ದರಿಂದ,
(ಖಂಡಿತಕ್ಕೂ ತಪ್ಪು!)
ನಿಮ್ಮೆದುರ ಹೀಗೆ ಬರಲೇಬಾರದಿತ್ತು,
ನಿಮ್ಮ ಭವ್ಯ ಭಾರತದ ಹೆಣವನು ಹೊತ್ತು.

ಡಾ. ಬಸವರಾಜ ಸಬರದ

ಕುವೆಂಪು ನಾಟಕಗಳಲ್ಲಿ ದಲಿತ ಪ್ರಜ್ಞೆ ?

ಕುವೆಂಪು ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. ಕುವೆಂಪು ರಸಋಷಿ-ರಾಜರ್ಷಿ ಎಂದು ಭಾವುಕರಾಗಿ ಬೊಗಳೆ ಹೊಡೆಯುವದಕ್ಕಿಂತ,ಅವರ ಒಟ್ಟು ಬದುಕು–ಬರಹ, ಧೋರಣೆ. ದ್ವಂದ್ವ ಇವುಗಳನ್ನು ಅರ್ಥೈಸಿಕೊಳ್ಳುವದರಮೂಲಕ ನಾವಿಂದು ಬೆಳೆಯಬೇಕಾಗಿದೆ, ಅವತ್ತಿನ ಸಂದರ್ಭದಲ್ಲಿ ಮಲೆನಾಡಿನವನೊಬ್ಬ ಮೊಟ್ಟಮೊದಲು ಸಾಹಿತ್ಯದ ಮುಖಾಂತರ ಮಾತನಾಡಿದ್ದು, ಬ್ರಾಹ್ಮಣೇತರನೊಬ್ಬ ಈ ನಾಡಿನಲ್ಲಿ ದೊಡ್ಡ ಸಾಹಿತಿಯಾಗಿ ಬೆಳೆದು ನಿಂತಿದ್ದು ಕೇವಲ ಚಾರಿತ್ರಿಕ ದಾಖಲೆಗಳಾಗಿ ವಿಜೃಂಭಿಸದೆ, ಇವತ್ತಿಗೂ ಹೊಸ ಆಯಾಮಗಳಾಗಿ ತೆರೆಮುಕೊಳ್ಳುತ್ತವೆ.

ಕುವೆಂಪು ಅವರನ್ನು ಕೆಲವರು ಮಿಲ್ಟನ್ ಕವಿಗೆ ಹೋಲಿಸುತ್ತಾರೆ. ಮಿಲ್ಟನ್ ಇಗ್ಲಂಡಿನ ಮಠವ್ಯವಸ್ಥೆಯ ವಿರುದ್ಧ ಸಿಡಿದೆದ್ದಂತೆ, ಕುವೆಂಪು ನಮ್ಮಲ್ಲಿನ ಮಠ–ಜಾತಿ–ದೇವಾಲಯಗಳ ವಿರುದ್ಧ ಬಂಡೆದ್ದವರು. ಆದರೆ ಕುವೆಂಪು ಅವರ ಈ ಬಂಡಾಯ ಅವರ ಕೃತಿಗಳಲ್ಲಿ ಎಷ್ಟರಮಟ್ಟಿಗೆ ಮತ್ತು ಹೇಗೆ ವ್ಯಾಪಿಸಿದೆ ಎಂಬುದು ಬಹಳಮುಖ್ಯ.

ಈ ನಾಲ್ಕು ವರ್ಷಗಳ ಹಿಂದೆ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಾಗ, ಈ ದಶಕವಲ್ಲಿ ಮೊಟ್ಟಮೊದಲ ಬಾರಿಗೆ ಹೆಚ್ಚು ಸಂಖ್ಯೆಯಲ್ಲಿ ದಲಿತರು ಸಾಹಿತ್ಯದಲ್ಲಿ ಧ್ವನಿಯೆತ್ತಿದಾಗ ಪತ್ರಿಕೆಗಳಲ್ಲಿ ಕೆಲ ವಿಷಯ ಪ್ರಸ್ತಾಪವಾದವು. 'ಮೊಟ್ಟಮೊದಲ ದಲಿತ ಸಾಹಿತಿಯೆಂದರೆ ಕುವೆಂಪು. ದಲಿತರ ಬಗೆಗೆ ಅವರು ಆವಾಗಲೇ ಬರೆದಿದ್ದಾರೆ' ಎಂಬಂತಹ ವಿಚಾರಗಳು ಪ್ರಕಟಗೊಂಡವು, ಕುವೆಂಪು ತಮ್ಮ ಮೂರು ನಾಟಕಗಳಲ್ಲಿ ದಲಿತರನ್ನೆ ನಾಯಕರನ್ನಾಗಿ ಮಾಡಿಕೊಂಡಿರುವದು ಸತ್ಯ. ಆದರೆ ಆ ಮೂರು ನಾಟಕಗಳಲ್ಲಿ ಅವರು ದಲಿತರ ಬಗೆಗೆ ವ್ಯಕ್ತಪಡಿಸಿದ ಕಳಕಳಿ ಎಂತಹದು ಎಂಬುದು ಬಹಳ ಮುಖ್ಯ. ಈ ಹಿನ್ನಲೆಯಲ್ಲಿ ಈ ಲೇಖನವನ್ನು ನೋಡುವದು ಅಗತ್ಯವೆನಿಸುತ್ತದೆ,

"ಜಲಗಾರ" ನಾಟಕದಲ್ಲಿ ಬರುವ ಜಲಗಾರ, "ಬೆರಳ್‌ಗೆ ಕೊರಳ್" ನಾಟಕದಲ್ಲಿನ ಏಕಲವ್ಯ ಮತ್ತು "ಶೂದ್ರ ತಪಸ್ವಿ" ನಾಟಕದಲ್ಲಿನ ಶಂಬೂಕ—ಈ ಮೂವರು ದಲಿತರು. ಕುವೆಂಪು ಆವಾಗಲೇ ತಮ್ಮ ಮೂರೂ ನಾಟಕಗಳಲ್ಲಿ ದಲಿತರನ್ನೇ ನಾಯಕರನ್ನಾಗಿ ಮಾಡಿಕೊಂಡು ಬರೆದರು ಎಂಬುದು ಮುಖ್ಯವಲ್ಲ. ದಲಿತರ ಬಗೆಗೆ ಅವರ ಧೋರಣೆಗಳೇನು ಮತ್ತು ದಲಿತರಿಗೆ ಕುವೆಂಪು ಎಂತಹ ಪರಿಹಾರ ಕಲ್ಪಿಸಿದರು ಎಂಬುದು ಬಹುಮುಖ್ಯ. ಸಾಮಾಜಿಕ ಜವಾಬ್ದಾರಿಯನ್ನು ಹೊತ್ತು ಕೊಂಡು ಕುವೆಂಪು ಈ ನಾಟಕಗಳಲ್ಲಿ ಏನನ್ನು ಸಾಧಿಸಿದರೆಂಬುದು ಅಷ್ಟೇ ಮಹತ್ವದ್ದು.

ಈ ಮೂರೂ ನಾಟಕಗಳಲ್ಲಿನ ದಲಿತನಾಯಕರು ಕ್ರಿಯಾತ್ಮಕವಾಗಿ ಬೆಳೆಯದೆ, ಲೇಖಕರ ಕನಸುಗಾರಿಕೆಯಲ್ಲೇ ತೃಪ್ತಿಪಡೆದು 'ಪರಿಪೂರ್ಣ'ರಾಗುತ್ತಾರೆ. ಸಾಧನೆ ಇಲ್ಲಿ ಕೇವಲ ಆದರ್ಶದ ಮಟ್ಟದಲ್ಲಿ ನಿಂತು ಗೀತೆಯ ಮಾತಿಗೆ ಗಿರಕಿ ಹೊಡೆಯುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದಾಗ ಲೇಖಕರ ಇಲ್ಲಿನ ಧೋರಣೆ ಅಪಾಯಕಾರಿಯಾಗುತ್ತ, ದಲಿತರ ನಿಜವಾದ ಬೆಳವಣಿಗೆಗೆ ಅಡ್ಡಿಯನ್ನುಂಟು ಮಾಡುತ್ತದೆ.

ಎರಡು ದೃಶ್ಯಗಳಲ್ಲಿ ಮೂವತ್ನಾಲ್ಕು ಪುಟಗಳಲ್ಲಿ ಬಿಚ್ಚಿಕೊಳ್ಳುವ 'ಜಲಗಾರ' ನಾಟಕದಲ್ಲಿ ಸಾಮಾಜಿಕ ಪ್ರಜ್ಞೆಯೇನೊ ದಟ್ಟವಾಗಿದೆ. ಶೋಷಿತ ವರ್ಗದಿಂದ ಬಂದ ಜಲಗಾರ ಈ ನಾಟಕದ ಕೇಂದ್ರಬಿಂದು. ಎಲ್ಲರಿಗೂ ದೇವರ ಜಾತ್ರೆಗೆ ಹೋಗುವ ಸಂಭ್ರಮವಾದರೆ, ಜಲಗಾರ ಕಾಯಕವೇ ನಿಜವಾದ ಪೂಜೆಯೆಂದು ಹಾಡುತ್ತಾನೆ. ಚಂದ್ರ, ನಕ್ಷತ್ರ, ಗಿಡ, ಮರ, ಹೂ-ಬಳ್ಳಿಗಳ ಪ್ರಕೃತಿಯೇ ಜಲಗಾರನ ದೇವಾಲಯ ವಾಗುತ್ತದೆ. ಇಲ್ಲಿ ಬರುವ ದೃಶ್ಯಗಳನ್ನು ಕುವೆಂಪು ಅತಿ ಉತ್ಸಾಹದಿಂದ ವರ್ಣಿಸಿ ದ್ದಾರೆ. ಆದರೆ ಇಲ್ಲಿಯ ತತ್ತ್ವ ಮಾತ್ರ ಬಹಳ ಹಳೆಯದು. ಬಸವಣ್ಣನ ಕಾಲದ ಕಾಯಕ ತತ್ತ್ವವೇ ಇಲ್ಲಿ ಬಂದಿದೆ. ಹೊಸ ದೃಷ್ಟಿಯಿಂದ ನೋಡುವವರಿಗೆ ನಾಟಕ ನಿರಾಶೆಗೊಳಿಸುತ್ತದೆ. ಜಲಗಾರನ ಬಡತನ, ಅವನ ಅಸ್ಪೃಶ್ಯತೆಗೆ ಕಾರಣ, ಅವನ ಆರ್ಥಿಕ ಸಾಮಾಜಿಕ ಬದುಕಿನ ಕಾಳಜಿ ಇದಾವುದೂ ಕುವೆಂಪು ಅವರಿಗೆ ಬೇಕಾಗಿಲ್ಲ. ಅವನನ್ನು ಪ್ರಕೃತಿಯ ನಡುವೆ ಬಿಟ್ಟು ಬಣ್ಣಿಸಿದರೆ ಪರಿಹಾರ ಕಂಡಂತಾಗುವದಿಲ್ಲ. ಶತಮಾನಗಳಿಂದ ಶೋಷಿತನಾದ ಜಲಗಾರನಿಗೆ ನಿಜವಾಗಿಯೂ ಬೇಕಾಗಿರುವದು ಸಮಾನತೆ ಮತ್ತು ಪ್ರೀತಿ ತುಂಬಿದ ಬದುಕು. ಇವಾವುದನ್ನೂ ಕುವೆಂಪು ಅವನಿಗೆ ಕೊಡುವದಿಲ್ಲ, ಅದು ಸಿಗುವ ಹೋರಾಟದ ಮಾರ್ಗವನ್ನೂ ಸೂಚಿಸುವದಿಲ್ಲ, ಅದಕ್ಕೆ ಬದಲಾಗಿ ಅವನಿಗೊಂದು ಗುಡಿ ಕಟ್ಟಿಸಿ ಶಿವನ ದರ್ಶನ ಮಾಡಿಸಿ ಮುಕ್ತಿ ಮಾರ್ಗಕ್ಕಾಗಿ ಆಕಾಶದ ಕಡೆ ಕೈತೋರಿಸಿ ಕೈಬಿಟ್ಟುಬಿಡುತ್ತಾರೆ. ಜಲಗಾರನಿಗೆ ಮತ್ತು

ಅಸ್ಪೃಶ್ಯರಿಗೆ ನಿಜವಾಗಿಯೂ ಬೇಕಾಗಿರುವದು ಗೊಡ್ಡು ಆದರ್ಶದ ಮೋಕ್ಷವೂ ಅಲ್ಲ, ಕಾಣದ ಶಿವನ ದರ್ಶನವೂ ಅಲ್ಲ. ಜಲಗಾರನಿಗೆ ಬೇಕಾಗಿರುವದು ಜೀವಂತ ಬದುಕು, ಉಚ್ಚ ಜಾತಿಯವರೊಡನೆ ಸ್ಪರ್ಷ, ಸಕಲರೊಡನೆ ಕೂಡಿ ಬಾಳುವ ಸಾಮಾಜಿಕ ಸುಖ. ಕುವೆಂಪು ಇದಾವುದನ್ನೂ ಅವನಿಗೆ ಕೊಡದೆ, ಮತ್ತೆ ಸುಮ್ಮನೆ ಬಿಡದೆ, ಭಾವುಕರಾಗಿ, ಕಾಣದ ದೇವರನ್ನು ವೈಭವೀಕರಿಸಿ, ನಿಜವಾದ ಸಮಸ್ಯೆಯೇ ಅವನಲ್ಲಿ ಸುಳಿಯದಂತೆ ಮಾಡುತ್ತಾರೆ, ಇದು ಕುವೆಂಪು ಅವರು ದಲಿತರಿಗೆ ಮಾಡಿರುವ ದೊಡ್ಡ ಅನ್ಯಾಯ.

ಜಲಗಾರನ ಹಾಡನ್ನು ದೂರದಿಂದ ಕೇಳಿದ ಹಾರವರು "ಯಾರೋ ದಿವ್ಯಾತ್ಮ ನಿರಬೇಕು, ಮಧುರತಮ ಗಾಯನವು ಅಮಲತಮ ಹೃದಯದಿಂದಲ್ಲದೆ ಹೊರ ಹೊಮ್ಮಲರಿಯದು"–ಎಂದು ಮಾತನಾಡುತ್ತಾ ಬಂದವರು, ಆ ಹಾಡನ್ನು ಹಾಡಿದವನು ಕೀಳು ಜಾತಿಯವನಾದ ಜಲಗಾರ ಎಂದು ತಿಳಿದಕೂಡಲೇ "ಸಂಗೀತ ವೆನಿತೇನು ಮನಮೋಹಿಪಂತೆ ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್ ಒಲಿಯುವಳೆ ?" ಎಂದು ತಿರಸ್ಕರಿಸುತ್ತಾರೆ. ಜಾತಿಗೆ ಮಹತ್ವ ಕೊಡುತ್ತಿದ್ದ ಡಾಂಭಿಕ ಹಾರವರ ಸ್ಪಷ್ಟ ಚಿತ್ರಣವನ್ನು ಕುವೆಂಪು ಕೊಟ್ಟರೂ, ಇದೇ ಜನ ಜಲಗಾರ ನಂತವರಿಗೆ ಶತ–ಶತಮಾನಗಳಿಂದ ಹೇಗೆ ಅಪಾಯಕಾರಿಯಾಗಿದ್ದಾರೆಂಬುದನ್ನು ಕುವೆಂಪು ವಿವರಿಸುವದಿಲ್ಲ.

ಈ ನಾಟಕದಲ್ಲಿ ಬರುವ ಭಟ್ಟ, ಯುವಕ, ಹುಡುಗಿ, ತಿರುಕ, ರೈತ, ತರುಣರು–ಇವರೆಲ್ಲಾ ಸಮಾಜದ ವಿವಿಧ ಮುಖಗಳ ಪರಿಚಯ ಮಾಡಿಕೊಡುತ್ತಾರೆ. ಈ ನಾಟಕದಲ್ಲಿ ಯಾವುದೇ ಕತೆಯಿಲ್ಲದಿದ್ದರೂ, ಮಾತುಗಳಿಗೆ ಒಂದು ಬಗೆಯ ತೀವ್ರತೆ ಯಿರುವದರಿಂದ ನಾಟಕ ರಂಗದ ಮೇಲೆ ಚೆನ್ನಾಗಿ ಮೂಡುತ್ತದೆ. ಕೊನೆಗೆ ಬರುವ ಭಿಕ್ಷುಕನ ಸಂದರ್ಭದಲ್ಲಿ "ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ ?" ಎಂಬ ವಾಸ್ತವ ಸತ್ಯದಿಂದ ನಾಟಕ ಅರ್ಥಪೂರ್ಣವೆನಿಸುತ್ತದೆ.

ವರ್ಣಭೇದ, ಮಡಿವೈಲಿಗೆ ಮತ್ತು ಡಾಂಭಿಕತೆಗೆ ಇಲ್ಲಿನ ಹಾರವರು ಉದಾಹರಣೆ ಯಾಗುತ್ತಾರಾದರೂ, ಜಲಗಾರನ ಬೆಳವಣಿಗೆಗೆ ಅವರೇ ಪ್ರಮುಖ ಅಪಾಯಕಾರಿ ಯೆಂಬುದು ಸ್ಪಷ್ಟವಾಗುವದಿಲ್ಲ. ಜಲಗಾರನನ್ನು ಪ್ರಕೃತಿಯಲ್ಲಿ ಬಿಟ್ಟು ವರ್ಣಿಸಿದರೆ ಪ್ರಕೃತಿ ಪರಿಹಾರ ಕೊಡುವದಿಲ್ಲ; ಹಸಿದವನಿಗೆ ಪ್ರಕೃತಿ ಎಂದೂ ಮದ್ದಲ್ಲ.

ಇತ್ತೀಚಿಗೆ ನಾಟಕವಾಗಿ ಪ್ರಯೋಗಗೊಳ್ಳುತ್ತಿರುವ ಶಿವರಾಮ ಕಾರಂತರ 'ಚೋಮನ ದುಡಿ' ಯಲ್ಲೂ ಹೀಗೆ ಚೋಮನ ಶೋಷಣೆ ಅವನ ಬದುಕಿನ ವ್ಯವಸ್ಥೆಯಲ್ಲೇ ಅಡ

ಗಿದೆ ಎಂಬುದನ್ನು ಪ್ರತಿಪಾದಿಸದ ಲೇಖಕರು ಚೋಮನನ್ನು ದಂಡಿ ಬಾರಿಸಹಚ್ಚಿ ಭಾವುಕತನದಲ್ಲೇ ಮೂಲ ಸಮಸ್ಯೆಯನ್ನು ಮರೆಯುತ್ತಾರೆ.

ಒಬ್ಬ ದಲಿತ-ಬಂಡಾಯ ಲೇಖಕ ಹೀಗೆ ಎಂದಿಗೂ ಬರೆಯಲಾರ. ಬದುಕನ್ನು ನೇರವಾಗಿ ಸ್ವೀಕರಿಸಬಲ್ಲ ಆತ ವ್ಯವಸ್ಥೆಯ ಬೇರಿಗೆ ಕೈಹಾಕದೆ ಇರಲಾರ,

ಆಧ್ಯಾತ್ಮದ ಗುಂಗಿನಲ್ಲಿ, ಪ್ರಕೃತಿಯ ವರ್ಣನೆಯಲ್ಲಿ ಜಲಗಾರನ ಜ್ವಲಂತ ಸಮಸ್ಯೆಯೇ ಕರಗಿಹೋಗುತ್ತದೆ. ಹೀಗಾಗಿ 'ಜಲಗಾರ' ನಾಟಕ ದಲಿತ ಕಾಳಜಿಗಳನ್ನು ಒಳಗೊಳ್ಳದೆ ಮತ್ತೆ ವೈದಿಕ ಸಂಸ್ಕೃತಿಯ ಕಡೆಗೆ ಕರೆದೊಯ್ಯುತ್ತದೆ.

" ನಾಟಕದಲ್ಲಿ ತತ್ವ ಕೊನೆಯಲ್ಲಿ ತೀರಾ ಸರಳೀಕೃತಗೊಂಡಿದೆಯೆನಿಸಿದರೂ ಸಾಮಾನ್ಯ ವರ್ಗದವನೊಬ್ಬನು ಕೂಡ ಶಿವನನ್ನು ಸೇರಬಲ್ಲ, ಶಿವನಾಗಬಲ್ಲ ಎಂಬ ನಾಟಕಕಾರರ ನಂಬಿಕೆಗನುಗುಣವಾಗಿದೆ" [೧] ಎನ್ನುವಂತಹ ಮಾತುಗಳು ವಿಚಾರಾರ್ಹವೆನ್ನಿಸಿದರೂ ಕೂಡ ಹನ್ನೆರಡನೇ ಶತಮಾನದಲ್ಲಿ ವಚನಕಾರರು ಹೇಳಿದ ಜೀವ-ಶಿವನಾಗುವ ಆಧ್ಯಾತ್ಮದ ಹಳೆಯ ತತ್ವವನ್ನೇ ಕುವೆಂಪು ಇಪ್ಪತ್ತನೇ ಶತಮಾನದಲ್ಲೂ ಹೇಳಿದಾಗ ಅವರ ಬಂಡಾಯ ಕೇವಲ ಶಾಬ್ದಿಕವಾಗಿ ಬಿಡುತ್ತದೆ.

ಕುವೆಂಪು ಜಾತಿ ವ್ಯವಸ್ಥೆಯನ್ನು ಕುರಿತು ಬರೆಯುವಾಗಲೆಲ್ಲ ವರ್ಣಧರ್ಮವನ್ನು ಒಪ್ಪಿಕೊಂಡು ಬಗೆಗೆ ಅವರ ನಾಟಕಗಳಲ್ಲಿ ಸಾಕಷ್ಟು ಉದಾಹರಣೆಗಳಿವೆ. ಅವರ "ಬೆರಳ್ಗೆ ಕೊರಳ್" ನಾಟಕದ ನಾಯಕ ಏಕಲವ್ಯ-ಶೂದ್ರ. ಇಲ್ಲಿಯೂ ಕೂಡ ಪ್ರಕೃತಿಯ ವರ್ಣನೆ ದಟ್ಟವಾಗಿ ಮತ್ತು ಸಹಜವಾಗಿ ಮೂಡಿದೆ. ಏಕಲವ್ಯನ ಬಗೆಗೆ ಕೈಲಾಸಂ ಹೆಚ್ಚು ಹತ್ತಿರವೆನಿಸುತ್ತಾರೆ. ಕುವೆಂಪು ಅವರ ಕರ್ಮತತ್ತ್ವ, ಯಜ್ಞತತ್ತ್ವ ಮತ್ತೆ ನಮ್ಮನ್ನು ಭಗವದ್ಗೀತೆಯ ಕಂದಕದಲ್ಲಿ ಹಾಕುತ್ತವೆ.

"ಜೀವಿಗಳ ಕರ್ಮಜಟಿಲತೆ ಏಕಲವ್ಯ, ಈ
ಕುಟಿಲ ಕಾರ್ಯಂಗಳಿಗೆ ನಮ್ಮನ್ ನಿಯೋಜಿಪುದು
ದೇವನಿಚ್ಛೆಯ ದಿವ್ಯಲೀಲಾ ಪ್ರಯೋಜನಕೆ " [೨]

ಎನ್ನುವ ದ್ರೋಣನ ಮಾತಿನಲ್ಲಿ ಕರ್ಮಯೋಗ ತತ್ತ್ವವನ್ನು ಅಡಕಗೊಳಿಸಿದ್ದಾರೆ. ಆ ನಾಟಕದ ಟಿಪ್ಪಣೆಯಲ್ಲೇ ಹೇಳುವಂತೆ "ಕರ್ಮ, ವಿಧಿ, ಈಶ್ವರೇಚ್ಛೆ- ಈ ಮೂರೂ ವಿಭಿನ್ನ; ಒಂದೇ ತತ್ತ್ವದ ಮೂರು ಮುಖಗಳು. ಕರ್ಮ ಫಲಸ್ವರೂಪಿಯಾದ ಈಶ್ವರೇಚ್ಛೆಯ ಮುಂದೆ ಮನುಷ್ಯೇಚ್ಛೆ ಪ್ರತಿಭಟಿಸಿ ಗೆಲ್ಲಲಾರದು; ಗೆದ್ದರೂ ಅದರ ಅನುಮತಿಯಿಂದಲ್ಲದೆ ಅನ್ಯ ರೀತಿಯಿಂದಲ್ಲ. ಅದರ ಗತಿಯ ಮರ್ಮ ಮಾನವನ ಅಪೂರ್ಣ ದೃಷ್ಟಿಗೆ ನಿಲುಕದು " [೩] ಎಂಬಂತಹ ಮಾತುಗಳು ಮನುಷ್ಯನ ಹೋರಾಟ ಮನೋಭಾವವನ್ನೇ ಅಳಿಸಿಹಾಕುತ್ತವೆ. ಶೂದ್ರನಾದ ಏಕಲವ್ಯ ಇವರ

ನಾಟಕದ ನಾಯಕನಾದರೂ, ನಾಟಕದ ತುಂಬ ತುಂಬಿಕೊಂಡಿರುವ ವಿಚಾರಗಳೆಲ್ಲಾ ಭಗವದ್ಗೀತೆಯ ಹೊಟ್ಟೆಯೊಳಗಿಂದ ಬಂದಂತವುಗಳು. ಹೀಗಾಗಿ ನಾಟಕ ದಲಿತರ ಪ್ರತಿಭಟನೆಯನ್ನು ಅಲ್ಲಗಳೆಯುತ್ತಾ ದಲಿತರನ್ನು ದಿಕ್ಕುತಪ್ಪಿಸುತ್ತದೆ. ಯಜ್ಞತತ್ತ್ವದಲ್ಲಿ ಕುವೆಂಪು ಹೇಳುವ ಮಾತುಗಳಂತೂ ಸಮಾಜದ ಆರೋಗ್ಯಪೂರ್ಣ ಬೆಳವಣಿಗೆಗೆ ಭಯಂಕರ ಅಪಾಯಕಾರಿ ಎನಿಸುತ್ತವೆ.

"ಮಾನವ ತನ್ನದೆಂದು ಹೇಳಿಕೊಳ್ಳುವ ವಸ್ತು ಪ್ರಪಂಚದಲ್ಲಿ ಯಾವುದೂ ಇಲ್ಲ. ಅವನು ಸ್ವಾರ್ಥಕ್ಕಾಗಿ ಸಂಪಾದಿಸಿದ ಹಣ ಮೊದಲಗೊಂಡು ಮುಕ್ತಿಗಾಗಿ ಮಾಡುವ ತಪಸ್ಸಿನ ತನಕ ಎಲ್ಲಕ್ಕೂ ಯಜ್ಞವೇ ಮೂಲ. ಕೊನೆಗೆ ಎಲ್ಲವೂ ಅದರಲ್ಲಿಯೆ ಲಯ ಹೊಂದಬೇಕು. ಒಟ್ಟಿನಲ್ಲಿ ಮಾನವನ ಸರ್ವಸಿದ್ಧಿ ಆ ಯಜ್ಞದಿಂದಲೇ ಲಭಿಸಬೇಕು. ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ ಯಜ್ಞದಿಂದ ಬಂದುದನ್ನು ಮತ್ತೆ ಯಜ್ಞರೂಪದಿಂದ ನಿವೇದಿಸದಿದ್ದರೆ ಮಾನವ ವಂಚಕನಾಗುತ್ತಾನೆ." ೪ ಎಂಬಂತಹ ಮಾತುಗಳು ನೇರವಾಗಿ ಗೀತೆಯನ್ನೇ ಪಠಿಸುತ್ತವೆ.

"ಸಹಯಜ್ಞಾಃ ಪ್ರಜಾಃ ಸೃಷ್ಟ್ವಾಪುರೋವಾಚ ಪ್ರಜಾಪತಿಃ
ಅನೇನ ಪ್ರಸವಿಷ್ಯಧ್ವಮ್। ಪಪೋऽಸ್ತ್ವಿಷ್ಟ ಕಾಮಧುಕ್" ೫

"ಇಷ್ಟಾನ್ ಭೋಗಾನ್ ಹಿಪೋದೇವಾ ದಾಸ್ಯಂತೇ ಯಜ್ಞಭಾವಿತಾ
ತೈರ್ದತ್ತಾನ ಪ್ರದಾಯೈಭ್ಯೋಯೋಂ ಭುಂಕ್ತೇಸ್ತೇನ ಏವಸಃ" ೬

ಇಂತಹ ಗೀತೆಯ ತತ್ತ್ವಗಳ ಮೂಲಕ ಹುಟ್ಟಿಕೊಂಡ ಈ ನಾಟಕದಲ್ಲಿ ನಿಜವಾದ ದಲಿತ ಪ್ರಜ್ಞೆ ಕಾಣಿಸುವದೇ ಇಲ್ಲ. ಕುವೆಂಪು ಅವರಿಗೆ ನಿಜವಾಗಿಯೂ ದಲಿತರ ಬಗೆಗೆ ಕಾಳಜಿಯಿದ್ದಿದ್ದರೆ ಅವರು ಗೀತೆ ಗೋಣಗಿದ ಗೊಡ್ಡು ತತ್ತ್ವಗಳ ಬೆನ್ನು ಹತ್ತುತ್ತಿರಲಿಲ್ಲ.

"ಉಚ್ಚವರ್ಗದವರ ಬಗೆಗೆ ಕುವೆಂಪು ಅವರಿಗೆ ಗಂಟ್ಟಾಗಿ ಗೌರವವಿದೆ, ಒಂದು ಕಡೆಯಿಂದ ಹೋದ ಆಚಾರ ಇನ್ನೊಂದು ಕಡೆಯಿಂದ ನುಸುಳುತ್ತದೆ. ಏಕಲವ್ಯ ಕೊನೆಗೂ ತ್ಯಾಗಮೂರ್ತಿಯಾಗಿರುವದು ದ್ರೋಣನ ಬಗ್ಗೆ ಅವನಿಗಿರುವ ಭಕ್ತಿಯಿಂದಲೆ" ೭ ಎಂಬಂತಹ ಲಂಕೇಶರ ಮಾತುಗಳು ವಿಚಾರ ಯೋಗ್ಯವಾಗಿವೆ. ಉಚ್ಚವಾದದ್ದನ್ನು ಬರೆಯಬೇಕು, ಉಚ್ಚವಾದದ್ದನ್ನು ಸೇರಬೇಕು ಎಂಬಂತಹ ಹುಚ್ಚು ಹಳವಂಡವೇ ಕುವೆಂಪುರಂತಹ ಒಬ್ಬ ಅವೈದಿಕ ಸಾಹಿತಿಯನ್ನೂ ದಿಕ್ಕು ತಪ್ಪಿಸಿದೆ. ಇದು ವೈದಿಕ ಸಂಸ್ಕೃತಿಯ ಶತಮಾನಗಳ ದಟ್ಟ ಪ್ರಭಾವವನ್ನು ತೋರಿಸುತ್ತದೆ. ಹೀಗಾಗಿ ಕುವೆಂಪು ಎಷ್ಟೇ ಬಂಡಾಯ ಮಾಡಲು ಹೊರಟರೂ ಕೂಡ ಅವರ ಅಂತರಂಗದಲ್ಲಿನ 'ಉಚ್ಚ'ದ ಪ್ರೀತಿ ಅವರನ್ನು ಅದರಿಂದ ಹೊರ

ಬರದಂತೆ ಮಾಡಿದೆ. ಆದ್ದರಿಂದಲೇ ಬೇಂದ್ರೆ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಜನಭಾಷೆಯಲ್ಲೇ ಕಾವ್ಯ ಬರೆದು ಜನಸಾಮಾನ್ಯರ ಹತ್ತಿರ ಹೋದರು; ಆದರೆ ಬ್ರಾಹ್ಮಣೇತರರಾದ ಕುವೆಂಪು ಸಂಸ್ಕೃತ ಭೂಯಿಷ್ಠವಾದ ಶೈಲಿಯಲ್ಲಿ ಬರೆದು ಸಾಮಾನ್ಯರಿಂದ ದೂರವಾದರು.

'ಶೂದ್ರ ತಪಸ್ವಿ' ನಾಟಕದಲ್ಲೂ ಹೀಗೇ ಶೂದ್ರನಾದ ಶಂಭೂಕ ತಪಸ್ಸು ಮಾಡಲು ಹಾತೊರೆಯುತ್ತಾನೆ. ಇವರ ಕೃತಿಗಳಲ್ಲಿ ಎಲ್ಲೂ ಬ್ರಾಹ್ಮಣ ಶೂದ್ರ ನಾಗುವದಿಲ್ಲ. ಆದರೆ ಅದೇ ಶೂದ್ರ ಬ್ರಾಹ್ಮಣ ಸಂಸ್ಕೃತಿಯ ಗುಲಾಮನಾಗುತ್ತಾನೆ. ಎಲ್ಲಾ ನಾಟಕಗಳಲ್ಲೂ ಕುವೆಂಪು ಪಾಲಿಸಿದ ತತ್ತ್ವ ಇದು. ಜಲಗಾರ ಹೊಸ ದೇವರನ್ನು ಕಾಣಲು ಕಾತರಿಸುವದು, ಏಕಲವ್ಯ ಕರ್ಮಸಿದ್ಧಾಂತದಲ್ಲಿ ಸಿಕ್ಕು ಗುರು ವಿನ ಗುಲಾಮನಾಗಿ ನರಳುವದು, ಶಂಭೂಕ ತಪಸ್ಸು ಮಾಡಲು ಇಚ್ಛಿಸುವದು— ಇಲ್ಲೆಲ್ಲಾ ಬ್ರಾಹ್ಮಣಿಕೆಯನ್ನು ಶುದ್ಧಿಮಾಡುವ ಕೆಲಸದಲ್ಲಿ ಕುವೆಂಪು ತೊಡಗುತ್ತಾರೆ.

ತಪಸ್ಸು ಮಾಡುವದು, ಸಂಸ್ಕೃತ ಕಲಿಯುವದು, ಗಂಭೀರವಾಗಿರುವದು, ಗೀತೆ ಪಠಿಸುವದು ಇವೆಲ್ಲಾ ಕುವೆಂಪು ಅವರ 'ಉತ್ತಮ'ತೆಯ ಲಕ್ಷಣಗಳು. ಇಂತಹ ಉತ್ತಮತೆಯ ಗೆರೆಗಳಲ್ಲೇ ಅವರು ಈ ನಾಟಕಗಳನ್ನು ರಚಿಸಿರುವದರಿಂದ ಅವರ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ ತೆಳುವಾಗುತ್ತದೆ.

ಕುವೆಂಪು ನಾಟಕಗಳನ್ನು ಹೊಸ ದೃಷ್ಟಿಕೋನದಿಂದ ನೋಡಿದಾಗ ಈ ಮೇಲಿನ ವಿಚಾರಗಳು ಬಂದುಹೋಗುವದು ಸಹಜ. 'ಕುವೆಂಪು ಅವರು ಸೃಷ್ಟಿಸಿದ ಸಂದ ರ್ಭವನ್ನು ನಾವು ನೋಡಬೇಕು; ಅವರು ನಂಬಿರುವ ತತ್ತ್ವವನ್ನು ನಾವು ಅರಿಯ ಬೇಕು. ಸುಮ್ಮನೆ ಇವತ್ತು ನಿಂತುಕೊಂಡು ಹಿಂದಿನ ಕೃತಿಗಳನ್ನು ನೋಡಿದರೆ ಹೇಗೆ ?' ಎಂಬಂತಹ ವಿಚಾರಗಳು ಬರುವದೂ ಕೂಡ ಅಷ್ಟೇ ಸಹಜ ಆದರೆ ಕುವೆಂಪು ಕನ್ನಡದ ಪ್ರಮುಖ ಸಾಹಿತಿ. ಅವರಲ್ಲಿ ದ್ವಂದ್ವವಿದೆ. ಅವರ ಹಿಂದಿನ ಭಾಷಣಗಳಲ್ಲಿ ಕಾಣುವ ಬಂಡಾಯ ಮನೋಭಾವ ಅವರ ನಾಟಕಗಳಲ್ಲಿಲ್ಲ.

ಐವತ್ತು ವರ್ಷಗಳ ಹಿಂದೆಯೇ ಕುವೆಂಪು ನಿಷ್ಠುರವಾಗಿ ಮಾತನಾಡಿದ್ದಾರೆ: "ಮತ ನಮಗೊಂದು ದೊಡ್ಡ ಬಂಧನವಾಗಿದೆ, ನಾಡಿನ ಏಳಿಗೆಯ ಕುತ್ತಿಗೆಗೆ ಉರುಲಾಗಿದೆ" ಎಂದು ಹೇಳಿದ್ದಾರೆ. "ದೇವಾಲಯಗಳು ಸೆರೆಮನೆಗಳು, ಪೂಜಾರಿ–ಅಲ್ಲಿಯ ಕಾವಲುಗಾರ. ಸಹರಾ ಮರಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯ ಜಪ ಮಾಡಿಸಿದರೆ ಮಳೆ ಬಂದು ಅದು ಫಲವತ್ತಾಗುವದೆ?" [೯] ಎಂದು ಆವಾಗಲೇ ಧೈರ್ಯದಿಂದ ಕೇಳಿದ್ದಾರೆ. ಧೀರ ಪ್ರಶ್ನೆ ಕೇಳಿಕೊಳ್ಳಿರಿ, ವಿಚಾರಮಾಡಿರಿ, ನಿರಂಕುಶ

ಮತಿಗಳಾಗಿ ಎಂದು ಮತ್ತೆ-ಮತ್ತೆ ಕೇಳಿಕೊಂಡ ಕುವೆಂಪು ಅವರ ನಾಟಕಗಳಲ್ಲಿ ಮಾತ್ರ ಭಾಷಣದಕಾವು ಆರಿ ತಣ್ಣಗಾಗಿದೆ.

ಬ್ರಾಹ್ಮಣರಾಗಿ ಹುಟ್ಟಿದ ಶ್ರೀರಂಗ, ಕೈಲಾಸಂ ಅವರು ತಮ್ಮ ಜಾತಿಯನ್ನು ವಿಡಂಬನೆ ಮಾಡುತ್ತಿದ್ದ ಸಮಯದಲ್ಲಿ ಬ್ರಾಹ್ಮಣೇತರರಾದ ಕುವೆಂಪು ಬ್ರಾಹ್ಮಣಿಕೆಯನ್ನು ಶುದ್ಧಿಮಾಡಿ ಪ್ರವೇಶಿಸಲು ಯತ್ನಿಸಿದ್ದಾರೆ. ಶ್ರೀರಂಗ-ಕೈಲಾಸಂರ ಸಂದರ್ಭದಲ್ಲೇ ಈ ಕವಿಯೂ ಬರೆದಿರುವದರಿಂದ ತುಲನಾತ್ಮಕ ಅಧ್ಯಯನ ಅನಿವಾರ್ಯವೆನಿಸುತ್ತದೆ. ಹಾಗೆ ತುಲನೆ ಮಾಡಿ ನೋಡಿದಾಗ ಕುವೆಂಪು ಅವರ ಅಂದಿನ ಧೋರಣೆ ಬರೀ ಪೊಳ್ಳೆನಿಸುತ್ತದೆ. ಆದ್ದರಿಂದ ಇವತ್ತಿನ ಒಬ್ಬ ದಲಿತ ಲೇಖಕ ದಲಿತರ ಬಗೆಗೆ ಬರೆಯುವದಕ್ಕೂ, ಕುವೆಂಪು ದಲಿತರ ಬಗೆಗೆ ಬರೆಯುವ ವದಕ್ಕೂ ಬಹಳ ಅಂತರವಿದೆ.

ಮೂಲಭೂತ ಬದಲಾವಣೆಗಾಗಿ ಕುವೆಂಪು ಎಲ್ಲೂ ಪ್ರಯತ್ನಿಸಿಲ್ಲ, ಆದರೆ ನಿಜವಾದ ದಲಿತ ಪ್ರಜ್ಞೆ ಕಾಣುವದು ಅವರ ಕಾದಂಬರಿಗಳಲ್ಲಿ. 'ಕಾನೂರ ಹೆಗ್ಗಡತಿ' ಮತ್ತು 'ಮಲೆಯಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆಯೂ ದಟ್ಟವಾಗಿ ಹರಡಿದೆ. ಪ್ರೇಮಿಗಳ ಕಾವು, ಭೀಕರತೆ, ದುರಂತ, ಮಾನವೀಯ ಸಂಬಂಧ, ಮಲೆನಾಡಿನ ಮಣ್ಣಿನ ಭಾಷೆ ಕಾದಂಬರಿಗಳ ತುಂಬಾ ಧಿಮಿಗುಡುತ್ತವೆ. ಆದರೆ ಅದೇ ಕ್ರಮ ನಾಟಕಗಳಲ್ಲಿ ಕಾಣಲಾರದು. ಆದರೆ ಅವರ ಸಮಕಾಲೀನರಲ್ಲೇ ಕುವೆಂಪು ಅವರದು ವಿಶಿಷ್ಟ ಧಾಟಿ. ಕಂದಾಚಾರದ ಮೇಲೆ ಅವರು ಆವಾಗಲೇ ದಂಗೆಯೆದ್ದಿದ್ದಾರೆ. ಅವರ 'ನಿರಂಕುಶಮತಿಗಳಾಗಿ' ಒಂದು ಗಮನಾರ್ಹ ಕೊಡುಗೆ.

ಕುವೆಂಪು ಒಂದು ಹೆಮ್ಮರ. ಇಂದಿಗೂ ರೆಲೆವೆಂಟ್ ಎನ್ನಿಸುವ ಹಲವಾರು ವಿಚಾರಗಳು, ಸನ್ನಿವೇಶಗಳು ಅವರ ಕೃತಿಗಳಲ್ಲಿವೆ. ಕುವೆಂಪು ಅವರ ಸಾಹಿತ್ಯದ ಹಿಂದೆ ದೊಡ್ಡ ಸಾಧನೆಯಿದೆ. ಅದನ್ನು ಯಾರೂ ಅಲ್ಲಗಳೆಯಲಾರರು. ಅವರ ಇತಿಮಿತಿಗಳನ್ನು ಮರೆತು ಅವರ ಕೃತಿಗಳಲ್ಲಿ ಒಳ್ಳೆಯದನ್ನು ಆರಿಸಿಕೊಳ್ಳುವದು ಕಷ್ಟವೇನಲ್ಲ. ಕುವೆಂಪು ಮತ್ತು ಅವರ ಸಮಕಾಲೀನರ ಕೃತಿಗಳನ್ನು ಅರ್ಥೈಸಿಕೊಳ್ಳುತ್ತಲೇ ಹೊಸ ದೃಷ್ಟಿಯಿಂದ ನೋಡುವದು ಮುಂದಿನ ಬೆಳವಣಿಗೆಗೆ ಅನುಕೂಲವಾಗುತ್ತದೆ.

ಅಡಿಟಿಪ್ಪಣಿಗಳು

೧. 'ಸಂವಹನ' — ಶಿವರಾಮು ಕಾಡನಕುಪ್ಪೆ, ಪುಟ ೨೫

೨. ಬೆರಳ್ಗೆ ಕೊರಳ್ — ಕುವೆಂಪು, ಪುಟ ೪೭
೩. ,, ,, ಪುಟ ೬೦
೪. ,, ,, ಪುಟ ೬೧
೫. ಭಗವದ್ಗೀತೆ ೩-೧೦
೬. ,, ೩-೧೨
೭. 'ಪ್ರಸ್ತುತ'—ಪಿ. ಲಂಕೇಶ, ಪುಟ ೨೭
೮. ಕುವೆಂಪು ಭಾಷಣಗಳು
೯. ,, ,,

ದ. ರಾ. ನಾಗೇಶ್

ಎರಡು ಕವನಗಳು

೧. ಗಾಂಧಿ

ಅಕ್ಟೋಬರ್ ಎರಡರಂದು ಹುಟ್ಟಿ
ಜನವರೀ ಮೂವತ್ತಕ್ಕೆ ಸಾಯುತ್ತಾ
ಆಗಾಗ್ಗೆ ಪುಢಾರಿಗಳ
ಬಾಯಿಗೆ ಸಿಕ್ಕುವ
ಕಾಂಗ್ರೇಸ್ ಕಡ್ಲೇಬೀಜ.

೨. ಸಾವು

ರಕ್ತ ಹೀರುತ್ತಿದ್ದ
ಸೊಳ್ಳೆಯನ್ನ, ಹೊಡೆದು
ಸಾಯಿಸಿದ್ದು,
ಸಾಹುಕಾರನೊಬ್ಬನಿಗೆ
ಪುಕ್ಕಟೆ ರಕ್ತ ಕೊಟ್ಟದ್ದಕ್ಕೆ
ಬಂದ 'ರಾಜ್ಯಪಾಲ'ರ
ಪ್ರಶಸ್ತಿ ಪತ್ರದಿಂದ !

ಸ. ಉಷಾ

ಒಂದು ಜನಪದ ಗೀತೆಯ ವಿಶ್ಲೇಷಣೆ

ನನ್ನ ಕರುಳಿನ ಕುಡಿ ನೀನು
ಹಿಂಗ ಅಳಕೊಂತ ಕುಂತ್ಯಾಕ
ನಿನ್ನ ಕೈಯ ಹಿಡಿದವನ ಮನೆಯನ್ನು ಸೇರೊಲ್ಲ್ಯಾಕ ॥ ನನ್ನ ಕರುಳಿನ

ಹೆಣ್ಣು ಸಣ್ಣಾಕಿ ಇರುವಾಗ
ತಂದೆ ತಾಯಿಯ ಮಡಿಲಾಗ
ನಿನ್ನ ಯೌವನೆಂಬ ಕಾಲ—ನಿನ್ನ ಗಂಡನ ತೋಳಾಗ ॥ ನನ್ನ ಕರುಳಿನ

ನಿನ್ನ ಮುಪ್ಪಿನ ಕಾಲ್ದಾಗ
ಹೆತ್ತ ಮಕ್ಕಳ ಕೈಯಾಗ
ಈ ಪರತಂತ್ರ ಜನುಮವನು ಶಿವ ಕೊಟ್ಟಾನು ಹೆಣ್ಣೀಗ ॥ ನನ್ನ ಕರುಳಿನ

ಮಡಿಲಾಗ ಹುಟ್ಟಿದ ಬಳ್ಳಿ
ಮಡಿಲಾಗ ಇರುವುದೇನ
ಕುಡಿಬಿಟ್ಟು ಹೊರಗೆ ಬಂದು ಹೂ ಹಣ್ಣು ಕೊಡುವುದೆಂದು ॥ ನನ್ನ ಕರುಳಿನ

ನಿಂಗ ಬ್ಯಾಸರ ಬ್ಯಾಡವ್ವ
ನಗು ನಗುತಾ ನೀ ಹೋಗವ್ವ
ನಾ ಎಂಟು ದಿನಕ್ಯಾಕವ್ವ, ಕಡೆತನಕಾ ನಿನ ಗಂಡವ್ವ ॥ ನನ್ನ ಕರುಳಿನ

ನೀ ಹುಟ್ಟಿದ ಮನೆ ಬಿಟ್ಟು
ಆ ಈ ಮನಿಗ್ಹೋಗಬ್ಯಾಡ
ಗಂಡ ಉಣುವ ಮೊದಲು ನೀ ಎಂದೆಂದು ಉಣಬ್ಯಾಡ ॥ ನನ್ನ ಕರುಳಿನ

ಅತ್ತೆ ಮಾವ ಮೈದುನರಿಗೆ
ಎದುರುತ್ತರ ಕೊಡಬ್ಯಾಡ
ಎಷ್ಟು ಸಂತೋಷ ಅನಿಸಿದರೂ ನೀ ಜೋರಾಗಿ ನಗಬ್ಯಾಡ ॥ ನನ್ನ ಕರುಳಿನ

ನಿನ್ನ ಗಂಡಗ ಇರುತಾರು
ಛಂದ ಸಿರಿವಂತ ಗೆಣೆಯಾರು
ನಿನ್ನ ಚೆಲುವ ರೂಪ ನೋಡೀ ಮೋಹೀಸಿ ಬಿಡತಾರು ॥ ನಿನ್ನ ಕರುಳಿನ

ಗಟ್ಟಿ ಇರಲವ್ವ ನಿನ್ನ ಶೀಲ
ಗಂಡಗೊಬ್ಬಗ ಮೀಸಲ
ಹೋಗಿ ಬಾರವ್ವ ನನ ಮಗಳ ಹೆಚ್ಚು ಹೇಳಾಕವನಿಲ್ಲಾ ॥ ನಿನ್ನ ಕರುಳಿನ

ನಮ್ಮ ಜನಪದ ಸಾಹಿತ್ಯ ಬಾಯಿಂದ ಬಾಯಿಗೆ ಸಾಗಿ ಬಂದದ್ದು ಎಂಬ ಕಾರಣಕ್ಕೇ ಶಿಷ್ಟ ವಿಮರ್ಶಕರ ಗಮನ ಮತ್ತು ವಿಮರ್ಶೆಗಳಿಂದ ವಂಚಿತವಾಗಿ ವಿಶ್ಲೇಷಣೆಗೆ ದೂರವಾಗಿತ್ತು. ಈಚೆಗೆ ಜನಪದ ಸಾಹಿತ್ಯದಲ್ಲಿ ಕಾಣುವ ಕೆಲವು ಮಹಾನವೀಯ ವಾದ ಮಿಡಿತಗಳನ್ನು, ಅದರ ಹಿನ್ನೆಲೆಯಲ್ಲಿರುವ ಅನಿವಾರ್ಯವಾದ ವ್ಯವಸ್ಥೆಯ ಹಿಡಿತವನ್ನು ಗುರುತಿಸಿ ವಿಶ್ಲೇಷಿಸುವ ಹಲವಾರು ಪ್ರಯತ್ನಗಳು ಕಾಣುತ್ತಿವೆ.

ನಾನು ಜನಪದ ಸಾಹಿತ್ಯದ ಅಥವಾ ಜಾನಪದದ ಗಂಭೀರ ವಿದ್ಯಾರ್ಥಿಯಲ್ಲ. ನನ್ನ ಪ್ರಯತ್ನವೇನೂ ಇಲ್ಲದೆ ಒಬ್ಬ ಹುಡುಗನ ಹಾಡಿನ ಮೂಲಕ ನನ್ನನ್ನು ಸೆಳೆದ ಈ ಗೀತೆ ಒತ್ತಾಯವಾಗಿ ನನ್ನಿಂದ ವಿಶ್ಲೇಷಣೆ ಮಾಡಿಸಿಕೊಳ್ಳುತ್ತಿದೆ. "ಹೇಳದಿರೆ ತಾಳಲಾರೆನೋ" ಎನ್ನುವಂತೆ ಮಾಡಿದೆ.

ಇದು ಗಂಡನ ಮನೆಗೆ ಹೋಗುವಾಗ ಮಗಳನ್ನು ಬೀಳ್ಕೊಡುವ ಸಂದರ್ಭದಲ್ಲಿ ಖಿನ್ನಳಾದ ಮಗಳನ್ನು ಸಮಾಧಾನ ಪಡಿಸುತ್ತ ತಾಯಿ ಆಕೆಗೆ ಮುಂದಿನ ಬಾಳಿನ ರೀತಿನೀತಿಗಳನ್ನು ಹೇಳುವ ಒಂದು ಗೀತೆ. ಈ ಇಡಿಯ ಗೀತೆ ಒಂದು ಮನೆಯಲ್ಲಿ ಹುಟ್ಟಿ ಬೆಳೆದು ಇನ್ನೊಂದು ಮನೆಯನ್ನು ಸೇರಿ ಅಲ್ಲಿರುವ ಜನರ ಬೇಕು ಬೇಡಗಳಿಗೆ ಹೊಂದಿಕೊಂಡು ಬಾಳಬೇಕಾದ ಹೆಣ್ಣಿನ ಬಾಳಿನ ಹಿನ್ನೆಲೆಯಲ್ಲಿ ಒಂದು ಅಸಹಾಯಕ ವಾದ ಒಪ್ಪಿಸಿಕೊಳ್ಳುವಿಕೆಯ ಸ್ಥಿತಿಯನ್ನು ಹೇಳುತ್ತಿದೆ.

ಇಲ್ಲಿ ಅಳುತ್ತಿರುವ ಹೆಣ್ಣಿಗೂ ಸಮಾಧಾನ ಪಡಿಸುತ್ತಿರುವ ಹೆಣ್ಣಿಗೂ ಇರುವ ಆತ್ಮೀಯವಾದ ಸಂಬಂಧ ಈಗ ಹೇಳಲ್ಪಡುತ್ತಿರುವ ನೀತಿ ಸಂಹಿತೆಯನ್ನು ಬರಿಯ ಒಣ ಉಪದೇಶದಿಂದ ಭಿನ್ನವಾಗಿಸಿ ಅದರ ಒಣ ಉಪದೇಶದಿಂದ ಭಿನ್ನವಾಗಿಸಿ

ಅವರಲ್ಲಿ ಮಾರ್ದವವನ್ನು ತುಂಬುತ್ತದೆ. ಇವರ ಪ್ರಾರಂಭದಲ್ಲೇ ಬರುವ 'ನನ್ನ ಕರುಳಿನ ಕುಡಿ ನೀನು' ಎಂಬ ಸಂಬೋಧನೆಯಿಂದ ಈ ಮಾರ್ದವ ಸಾಧಿತವಾಗುತ್ತದೆ.

'ಹಿಂಗ ಅಳಕೊಂತ ಕುಂತ್ಯಾಕ' ಎಂಬ ಎರಡನೆಯ ಸಾಲಿನ ಯಾಕ? ಎಂಬುದು ಆಶ್ಚರ್ಯದ ಯಾಕ ? ಅಲ್ಲ. ಯಾಕೆಂದರೆ ಆ ಅಳು ದುಃಖ ಯಾಕೆ ಎಂಬುದು ತಾಯಿಗೆ ಚೆನ್ನಾಗಿ ತಿಳಿದಿರುವುದು ಆದರ ಮುಂದಿನ ಸಾಲಾದ "ನಿನ್ನ ಕೈಯ ಹಿಡಿದವನ ಮನೆಯನ್ನು ಸೇರೊಲ್ಲ್ಯಾಕ" ಎಂಬ ಎರಡನೆಯ 'ಯಾಕ'ದಲ್ಲಿ ತಿಳಿಯುತ್ತದೆ ಹೀಗಾಗಿ ಈ ಎರಡೂ ಯಾಕಗಳು ವಿಧಿಯಷ್ಟು ನಿಯತವಾದ ರೂಢವಾದ ನಡವಳಿಕೆಗಳನ್ನು ನೀನೇಕೆ ಒಪ್ಪಿಕೊಳ್ಳಲು ಹಿಂಜರಿಯುತ್ತೀ ಎಂದು ಪ್ರಶ್ನಿಸುತ್ತ 'ಕರುಳಿನ ಕುಡಿ' ಎಂಬ ಆತ್ಮೀಯ ಸಂಬಂಧವನ್ನು ಮುಂದೆ ಮಾಡಿ ವ್ಯವಸ್ಥೆಗೆ ತನ್ನನ್ನು ತಾನು ಸಂಪೂರ್ಣವಾಗಿ ಒಪ್ಪಿಸಿಕೊಳ್ಳಲು ಪುಸಲಾಯಿಸುವ ಮೂಲಕ ಇದನ್ನು ಹೇಳುತ್ತಿರುದ ತಾಯಿಯನ್ನು ವ್ಯವಸ್ಥೆಯ ಪ್ರತಿನಿಧಿಯಾಗಿಸಿಬಿಡುತ್ತವೆ.

ಮುಂದೆ ಆಕೆ ಹೇಳುವ

'ಹೆಣ್ಣು ಸಣ್ಣಾಕಿ ಇರುವಾಗ
ತಂದೆ ತಾಯಿಯ ಮಡಿಲಾಗ
ನಿನ್ನ ಯೌವನೆಂಬ ಕಾಲ ನಿನ್ನ ಗಂಡನ ತೋಳಾಗ'

ಎನ್ನುವ ಮಾತುಗಳಂತೂ 'ಮುಪ್ಪಿನ ಕಾಲದಾಗ ಮಕ್ಕಳ ಕೈಯಾಗ' ಎಂಬುದರೊಡನೆ ಕೂಡಿಕೊಂಡು

"ಪಿತಾ ರಕ್ಷತಿ ಕೌಮಾರ್ಯೇ
ಭರ್ತಾ ರಕ್ಷತಿ ಯೌವನೇ
ಪುತ್ರಸ್ತು ಸ್ಥವಿರೇ ಭಾವೇ
ನ ಸ್ತ್ರೀ ಸ್ವಾತಂತ್ರ್ಯಮರ್ಹತಿ"

ಎಂಬ ಮನುವಿನ ಕುಪ್ರಸಿದ್ಧ ನುಡಿಯ ಪ್ರತಿಧ್ವನಿಯೇ ಆಗಿದೆ. ಈ ಗೀತೆಯಲ್ಲಿ ಇನ್ನೂ ಒಂದು ಹೆಚ್ಚಿನ ಅಂಶವೆಂದರೆ"ಈ ಪರತಂತ್ರ ಜನುಮವನು ಶಿವ ಕೊಟ್ಟಾನು ಹೆಣ್ಣೀಗ" ಎನ್ನುವ ಮಾತು, ಇದು ಪ್ರಾಕೃತಿಕವಾದ ಸ್ಥಿತಿ, ವಿರೋಧಿಸಲಾಗದ್ದು, 'ಶಿವನೇ' ಅಂದರೆ ಸ್ವಯಂ ದೇವರೇ ಕೊಟ್ಟಿದ್ದು ಎಂಬ ಹತಾಶೆಯ ಶರಣಾಗತಿಯ ಭಾವವಾಗಿದೆ, ಸ್ವಯಂ ತಾಯಿ ಇಂಥ ಸಂಪೂರ್ಣ ಶರಣಾಗತಿಯ ನಿಲುವಿನಲ್ಲಿ ನಿಂತು, ಚೆಲುವು ಮತ್ತು ಯೌವನಗಳನ್ನು ಹೊಂದಿರುವ ತನ್ನ ಮಗಳಿಂದ ಸಂಪೂರ್ಣ ಶರಣಾಗತಿಯನ್ನು ಬಯಸುತ್ತಾ ಆಕೆಗೆ ನಡವಳಿಕೆಗಳನ್ನು ಬೋಧಿಸುತ್ತಿದ್ದಾಳೆ.

ಹಾಗೆ ಬೋಧಿಸುವ ಮುನ್ನ ಆಕೆ ತವರನ್ನು ಬಿಟ್ಟು ಹೋಗಲೇಬೇಕಾದ ಅನಿವಾರ್ಯತೆಯನ್ನು "ಮಡಿಲಾಗ ಹುಟ್ಟಿದ ಬಳ್ಳಿ ಮಡಿಲಾಗ ಉಳಿವುದೇನ — ಕುಡಿಬಿಟ್ಟು ಹೊರಗೆ ಬಂದು, ಹೂ ಹಣ್ಣು ಕೊಡುವುದೆಂದು" ಎಂಬ ಮಾತಿನ ಮೂಲಕ ಸೂಚಿಸುತ್ತಾಳೆ. ಇಲ್ಲಿ 'ಕುಡಿಬಿಡು', 'ಹೂ ಹಣ್ಣು ಕೊಡು' ಎಂಬ ಮಾತುಗಳಲ್ಲಿ ಫಲವಂತಿಕೆಯ ಯೌವನದ ಸೂಚನೆಯಿದೆ. ಅದರ ಹಿಂದೆಯೇ ಬರುವ "ನಾ ಎಂಟು ದಿನಕ್ಯಾಕವ್ವ ಕಡೆತನಕಾ ನಿನ ಗಂಡವ್ವ" ಎಂಬ ಮಾತುಗಳಲ್ಲಿ ತಾಯಿಯೊಡನೆಯ ಸಂಬಂಧ ಕೊನೆಯವರೆಗೂ ಇರುವುದಿಲ್ಲ ಎಂಬ ಸೂಚನೆಯ ಜೊತೆಗೆ 'ಗಂಡ' ಎಂಬುದು ಒಂದು ನಿಯಂತ್ರಣವಾಗಿ, ಒಂದು ಗತಿಯಾಗಿ ಧ್ವನಿಸುತ್ತದೆ. ಗಮನಿಸಿ: ಆತ ಇನಿಯನಲ್ಲ — ಜನಪದ ಸಾಹಿತ್ಯದಲ್ಲಿ ಆಗಾಗ ಬರುವ 'ಗೆಣೆಯ'ನಲ್ಲ, 'ರಾಯ'ನಲ್ಲ, — 'ಕೈಹಿಡಿದವ' 'ಗಂಡ.'

ಮುಂದಿನ ಪದ್ಯಗಳಲ್ಲಿ ಈ ನಿಯಂತ್ರಣ. 'ಕೈ ಹಿಡಿಯುವುದು' ಇನ್ನೂ ಸ್ಪಷ್ಟಗೊಳ್ಳುತ್ತದೆ. "ಕುಡಿಬಿಟ್ಟು ಹೊರಗೆ ಬಂದು ಹೂ ಹಣ್ಣು" ಕೊಡಬೇಕಾದ ಚೆಲುವು, ಜೀವಂತಿಕೆಗಳು ಕುಡಿಬಿಟ್ಟು ಫಲಿಸುವುದಿರಲಿ, 'ಆ ಈ ಮನೆಗೆ ಹೋಗಬಾರದ', ನಿಯಂತ್ರಕನೂ ಗತಿಯೂ ಆದ, 'ಗಂಡ' ಉಣುವ ಮೊದಲು ಉಣಬಾರದ, ನಾಲಗೆಯ ಸವಿಯನ್ನೂ ನಿಯಂತ್ರಿಸುವ, ಅತ್ತೆ ಮಾವ ಮೈದುನರಿಗೆ ಎದುರುತ್ತರ ಕೊಡಬಾರದ — ಇಲ್ಲಿ ಹಿರಿಯರಾದ ಅತ್ತೆ ಮಾವಂದಿರ ಜೊತೆಗೆ ಕಿರಿಯವನಾದ ಮೈದುನನೂ ಸೇರುವುದು ಗಮನಾರ್ಹವಾಗಿದೆ — 'ಗಂಡ'ನ ಸಂಬಂಧಿಗಳೆಲ್ಲರೊಡನೆ ಆಡುವ ಮಾತನ್ನೂ ನಿಯಂತ್ರಿಸುವ, ಕೊನೆಯಲ್ಲಿ "ಎಷ್ಟು ಸಂತೋಷ ಅನಿಸಿದರೂ ಜೋರಾಗಿ ನಗಬಾರದ" ಸರ್ವತೋಮುಖ ನಿರ್ಬಂಧಕ್ಕೆ ಗುರಿಯಾಗಿ ಬಿಡುತ್ತವೆ, ಈ ಎಲ್ಲ ನಿರ್ಬಂಧಗಳ ಹಿನ್ನೆಲೆಯಲ್ಲಿ "ಕುಡಿಬಿಟ್ಟು ಹೊರಗೆ ಬಂದು ಹೂ ಹಣ್ಣು ಕೊಡು" ಎಂಬ ಮಾತಿಗಿರುವ ಸಂತಾನೋತ್ಪತ್ತಿ ಎಂಬ ಅರ್ಥದ ಹೊರತಾಗಿ ಉಳಿದೆಲ್ಲ ಅರ್ಥಗಳು ನಾಶವಾಗಿ ಅದು ಬರೀ ಪುಸಲಾವಣೆಯ ಮಾತಾಗಿ ಬಿಡುತ್ತದೆ.

ಈ ಎಲ್ಲ ನಿರ್ಬಂಧಗಳ ಹಿನ್ನೆಲೆಯಲ್ಲಿ 'ನನ್ನ ಕರುಳಿನ ಕುಡಿ ನೀನು' ಎಂಬುದು ಪಲ್ಲವಿಯಂತೆ ಪುನರಾವರ್ತಿತವಾಗುತ್ತದೆ. ಅದರೊಡನೆ ಈ ಸಂಬಂಧ ಕಡೆತನಕದ್ದಲ್ಲ ಎಂಬ ಅರಿವು ಇದೆ. ಇದೆಲ್ಲಕ್ಕೆ ಕಳಸವಿಡುವ, ಇವನ್ನೆಲ್ಲ ತಾಯಿಯಿಂದ ನಂತ್ರಿ ಬಳಸಿ ಹೇಳಿಸುತ್ತಿರುವುದರ ಮೂಲ ಉದ್ದೇಶ ಮತ್ತು ಈ ಎಲ್ಲ ಮಿದುಳು ತೊಳೆಯುವಿಕೆಯ ಅಂತಿಮ ಗುರಿ ಮುಂದಿನ ಎರಡು ಪದ್ಯಗಳಲ್ಲಿದೆ.

ಹರೆಯದ ಮಗಳು ತಾಯಿಗೆ ಒಂದು ಗುರುತರ ಜವಾಬ್ದಾರಿಯಾಗಿದ್ದಾಳೆ. ಮುಟ್ಟಿದರೆ ಕೆಟ್ಟು ಹೋಗುವ ನಾಜೂಕು ಆಟಿಗೆಯಾಗಿದ್ದಾಳೆ. ತನ್ನ ಕರುಳಿನ ಸಂಬಂಧ

ವನ್ನು ಕೂಡ 'ಎಂಟು ದಿನದ್ದು' ಎಂದು ಪರಿಗಣಿಸಿ ತೊರೆಯುಬೇಕಾಗಿರುವ ಈ ಹೆಣ್ಣಿನ ಗಂಡನಿಗೆ 'ಧಂದ ಸಿರಿವಂತ ಗೆಣೆಯರು' ಇರುತ್ತಾರೆ. ಈ ಗಂಡನಿಗೆ 'ಧಂದ' 'ಸಿರಿ' 'ಗೆಣೆತನ' ಈ ಎಲ್ಲ ಭಾಗ್ಯವೂ ಇದೆ. ಆತ ಯಾವುದನ್ನೂ ತೊರೆಯಬೇಕಾಗಿಲ್ಲ. ಈ ಹೆಣ್ಣಿಗೆ ತಾಯಿಯೊಡನೆಯ ಸಂಬಂಧ ಕೂಡ ಇನ್ನು ಮೇಲೆ ಎಂಟು ದಿನದ್ದಾಗಬೇಕಾಗಿದೆ. ಅವರು ಆಕೆಯ ಚೆಲುವ ರೂಪನ್ನು ನೋಡಿ 'ಮೋಹಿಸು'ತ್ತಾರಂತೆ. ಇಲ್ಲಿ ಕೂಡ ಪ್ರೀತಿ, ಒಲವು, ಕಳೆ ಯಾವ ಶಬ್ದಗಳೂ ಬಳಕೆಯಾಗದೆ 'ಮೋಹ' ಬಳಕೆಯಾಗಿರುವುದನ್ನು ಗಮನಿಸಬೇಕು. ಈ ಮೋಹ ಎಂಬ ಪದಕ್ಕೂ 'ಎಂಟು ದಿನ' ಎಂಬ ತಾಯಿಯ ಮಾತಿಗೂ 'ಕಡೆತನಕ' ಎಂಬ ನಿರ್ಣಾಯಕತೆಗೂ ಒಂದು ತೀರಾ ಆಂತರಿಕವಾದ ಸೂತ್ರೀಕೃತ ಸಂಬಂಧವಿದೆ. ಇಲ್ಲಿಯವರೆಗೆ ಸುತ್ತಿ ಬಳಸಿ ಮಾತಾಡಿದ ತಾಯಿ ಈಗ ನೇರವಾಗಿ ಒಂದೇ ಮಾತಿನಲ್ಲಿ "ಗಟ್ಟಿ ಇರಲವ್ವ ನಿನ್ನ ಶೀಲ ಗಂಡಗೊಬ್ಬಾಗ ಮೀಸಲ" ಎಂದು ಜಳಜಳ ಹೇಳಿ ಬಿಡುತ್ತಾಳೆ. ಈ ಮಾತು ಬಾಯಿಯಿಂದ ಹೊರಬಂದ ತಕ್ಷಣವೇ ಇಲ್ಲಿಯವರೆಗೆ ಹೇಳಿದ ಮಾತುಗಳು, ಮುಂದೆ ಹೇಳಬಹುದಾದ ಮಾತುಗಳು — ಎಲ್ಲ ಗುರಿಯನ್ನು ಸಾಧಿಸಿದ ಮೇಲೆ ದಾರಿ ಅರ್ಥಹೀನವಾಗುವ ಹಾಗೆ — ಅರ್ಥಹೀನವಾಗಿ ಬಿಡುತ್ತವೆ.

ತಕ್ಷಣವೇ ಆ ಅರಿವು ಕೂಡ ನುಡಿಯ ರೂಪವನ್ನುಕಾಳಿ "ಹೆಚ್ಚು ಹೇಳಾಕ ಏನಿಲ್ಲ" ಎನ್ನಿಸಿಬಿಡುತ್ತದೆ.

ಈ ಗೀತೆ ಹೆಣ್ಣಿನ ಪರತಂತ್ರ ಸ್ಥಿತಿಯನ್ನು, ಇರಬೇಕಾದ್ದೇ ಹೀಗೆ ಇದು ಶಿವ ಕೊಟ್ಟದ್ದು ಎನ್ನುವ ಅಸಹಾಯಕ ಸಮರ್ಪಣೆಯನ್ನು, ಆ ಸ್ಥಿತಿಯನ್ನು ಸಂತೋಷ ವಾಗಿ ಒಪ್ಪಿಕೋ, ಅಥವ ಪ್ರತಿಭಟಿಸದೆ ಒಪ್ಪಿಕೋ ಎಂಬ ಹಿರಿಯ ಉಪದೇಶ ವನ್ನು ಒಂದು ಹೆಣ್ಣೇ ಇನ್ನೊಂದು ಹೆಣ್ಣಿಗೆ ಮಾಡುವ ನಾಟಕೀಯ ವ್ಯಂಗ್ಯವನ್ನು, ಮತ್ತು ಆ ಹೆಣ್ಣು ಮತ್ತ್ಯಾರೂ ಅಲ್ಲದೆ ಸಂಪ್ರದಾಯದ ಪ್ರತಿನಿಧಿಯಾಗಿ ಸರ್ವತೋ ಮುಖವಾದ ನಿಯಂತ್ರಣವನ್ನು ರೆಕಮೆಂಡ್ ಮಾಡುತ್ತಿರುವ ಈ ಹಿರಿಯ ಹೆಣ್ಣಿನ ಕರುಳಿನ ಕುಡಿಯಾಗಿರುವುದನ್ನು ಎಷ್ಟು ಪರಿಣಾಮಕಾಗಿ ಹೇಳಿಬಿಟ್ಟಿದೆಯೆಂದರೆ — ಅದನ್ನು ಇನ್ನೂ ಬಿಚ್ಚಿ ಹೇಳುವುದು ಮಾತಿನ ದುಂದುಗಾರಿಕೆಯಾಗಿ ಬಿಡುತ್ತದೆ— ಅದಕ್ಕೇ—"ಹೆಚ್ಚು ಹೇಳಾಕ ಏನಿಲ್ಲಾ".

●

ಸಿ. ವಿ. ಪಾಟೀಲ

ವಿದಾಯ

ನಾಲ್ಕು ದಿನಗಳ ಹಿಂದೆ ಪೇಟೆಗೆ ಬಂದಜ್ಜಿ
ಐದನೇ ದಿನದ ಸೂರ್ಯ
ಕೆಂಪು ಕೆಂಡವಾಗುವ ಮುನ್ನವೇ
ತನ್ನ ಗಂಟುಗದಡಿ ಕಟ್ಟಿ
ಹಳ್ಳಿಗೆ ಹೊರಟು ನಿಂತಿದ್ದಾಳೆ.

ಮನೆಯ ಮುಂದಿನ ಆಲದ ಮರದ
ಕಟ್ಟೆಯಿಂದ ಜಾರಿಬಿದ್ದು
ಕಾಲುಳುಕಿ.
ಸೊಂಟದ ಕೀಲು ತಪ್ಪಿದ್ದರಿಂದ
ಪೇಟೆಯಲ್ಲಿರುವ ಮಗ ಕರೆತಂದಿದ್ದ
ಡಾಕ್ಟರಲ್ಲಿಗೊಯ್ದು ಔಷಧಿ ಕೊಡಿಸಿದ್ದ.

ಒಲೆಗೆ ಹಸಿಕಟ್ಟಿಗೆ ತುರುಕಿ
ಊದಿ ಊದಿ ಕಣ್ಣು ಕೆಂಪಾಗಿಸಿಕೊಳ್ಳದೇ
ಕೈಕಾಲು ಕರಿಕುಗೊಳಿಸದೇ
ಬೇಕೆಂದಾಗ ಸ್ವಿಚ್ ಒತ್ತಿ
ಕೂಳು ಕುದಿಸುವ ಕುಕ್ಕರ್ ಕಂಡು
ಫಂಕಾದ ಗಾಳಿವುಂಡರ
ಮುದುಕಿ ಮೂರುದಿನ ಖುಷಿಯಾಗೇಯಿದ್ದು;
ನಾಲ್ಕನೇ ದಿನಕ್ಕೆ ಹಸಿಗೂಸಿನಂತೆ
ಹಠ ಹಿಡಿದು ಹಳ್ಳಿಗೆ ಹೊರಟುನಿಂತಿದ್ದಾಳೆ.

ಹಳ್ಳಿ ಬಿಟ್ಟು ಬಂದ ಮುದುಕಿಗೆ–
ಪಟ್ಟಣದ ಮದ್ದು ಮುಳ್ಳಾಯಿತೇ ಏನಃ,
ತಪ್ಪಿದ ಸೊಂಟದ ಕೀಲು ನೆಟ್ಟಗಾಗಲಿಲ್ಲ.
ಒಂದು ಮುಂಜಾನೆ ಮಗ "ಏನಮ್ಮ ಸೊಂಟ ಹೇಗಿದೆ?"
ಎಂದದ್ದಕ್ಕೆ : ಮುದುಕಿ ಮುನಿಸಿನಿಂದ,
"ನನ್ನ ಸೊಂಟ ಹಾಳಾಗ್ಲಿ ದಿನದ ಇಪ್ಪತ್ನಾಲ್ಕು ಘಂಟೆ
ಮನೆಯ ಮೂಲೆಯೊಂದರಲಿ ಮುದುರಿಕೊಂಡು
ಕುಳಿತರೆ ತಪ್ಪಿದ ಸೊಂಟದ ಕೀಲು
ನೆಟ್ಟಗಾಗುತ್ತದೆಯೆ ?" ಎಂದು ಪ್ರಶ್ನಿಸಿದ್ದಳು.

ಯಂತ್ರ ಬದುಕಿನ ಮಧ್ಯೆ
ಉಂಡುಡುವ ಮುನ್ನ ಅವಳ ನೆನಪಿಗೆ
ಹಳ್ಳಿಮನೆಯ ಬಾಗಿಲಿಗೆ ಹಾಕಿದ ಬೀಗ.
ವರಲಕ್ಷ್ಮೀ ಹತ್ತಿಗೆ ಬಿದ್ದ ರೋಗ,
ಕರಿಹೊಲದಲಿ ಹಬ್ಬುತ್ತಿರುವ ಕರಕೀ ಬೇರು,
ಗಂಡ್ಡದೋರೆಯಲಿ ಹರಿಯುವ ನೀರು,
ತನ್ನ ಮದುವೆಯ ಸೀರೆ ಜಾಕಿಟಿಟ್ಟ ಬೀರು
ಕಳೆದವಾರ ಪಕ್ಕದ ಮನೆಗೆ–
ಕನ್ನ ಹಾಕಿದ್ದ ಕಳ್ಳರು,
ಎಲ್ಲವೂ ಒಟ್ಟಿಗೆ ಕಣ್ಗೆ ಕಟ್ಟಿದಾಗ–

ತಪ್ಪಿದ ಸೊಂಟದ ಕೀಲು ನೋವು ಮರೆತು
ಕುಂಟುತ್ತಲೇ ತನ್ನೂರಿನ ದಾರಿ ತುಳಿದದ್ದು–
ಕಂಡು ಮಗ ಹೌಹಾರಿದ್ದ.

ಎಂ. ಭೀಮಭಟ್ಟ, 'ವಿಶ್ವಪ್ರೇಮಿ'

ನನಗೊಂದು ಹೊಸ ವಿಳಾಸ ಬೇಕಾಗಿದೆ!

ಮಳೆಗೆ ಸೋರುವ ಮಾಡಿನಿಂದ
ಧಗೆಗೆ ಕಾವೇರಿಸುವ ಬೀಡಿನಿಂದ
ಉಸಿರು ಕಟ್ಟಿಸುವ ಹೊಗೆಗೂಡಿನಿಂದ ದೂರ

ಮನೆಯ ಮುದುಕನ ದಮ್ಮಿನಿಂದ
ನೆರೆಯ ನಾಯಿಯ ಕೆಮ್ಮಿನಿಂದ
ಹ್ಯಾಪೆ ಮೋರೆಯ ಕುರೂಪಿ ಹುಡುಗಿಯ ಹಮ್ಮಿನಿಂದ ದೂರ

ಮಳೆ ತಾರದ ಬಿಳಿ ಮುಗಿಲುಗಳಿಂದ
ಕತ್ತಲೆ ಹುಟ್ಟಿಸುವ ದಿಗಿಲುಗಳಿಂದ
ಆಸೆ ಹುಟ್ಟಿಸುವ ಅಸ್ಪಷ್ಟ ಧ್ವನಿಗಳ ಹಗಲಿನಿಂದ ದೂರ

ಅಡ್ಡಗೋಡೆಗಳ ಎರಕದಿಂದ,
ಬರೆ ಗುಲ್ಲುಗಳ ನರಕದಿಂದ;
ನಂಜಿನ ಕಣ್ಣುಗಳ ಮರುಕದಿಂದ ದೂರ

ಬಿದ್ದಲ್ಲಿ ಬಿದ್ದು ಬರಡಾಗುತ್ತಿರುವ ನೆಲದಿಂದ
ಪೊಳ್ಳು ಭರವಸೆಗಳ ಬಿಲದಿಂದ
ಸಾಕ್ಷರ ರಾಕ್ಷಸರ ಬಲೆಯಿಂದ ದೂರ

ನನಗೊಂದು ಹೊಸ ವಿಳಾಸ ಬೇಕಾಗಿದೆ.

ಆರ್. ವಿ. ಭಂಡಾರಿ / ಸತೀಶ ಕುಲಕರ್ಣಿ

ಹನ್ನೆರಡು ಕವನ ಸಂಕಲನಗಳು

ಪುಸ್ತಕ ಪರಿಚಯ

ಐದು ಕವನ ಸಂಕಲನಗಳು

ನೋವೆ ಹೂವಾದಾಗ : ಜಿ. ಆರ್. ಕುಲಕರ್ಣಿ
ಮುಂಜಾವದ ಮುನ್ನ : ಟಿ. ನಾಗರಾಜ
ಮೀನು ಮಲ್ಲಿಗೆ : ಭವಾನಿ ಶಂಕರ
ನಿನ್ನ ಗುರುತಿನ ಬಳಿ : ಸಿ. ವಿ. ಮುರಳೀಧರ
ದನಿಗಳು : ಹಂಪಣ್ಣ

ಕುಲಕರ್ಣಿಯವರ **ನೋವೆ ಹೂವಾದಾಗ** ಸಂಕಲನದ ಮುನ್ನುಡಿಯಲ್ಲಿ ಶಾಂತ ರಸರು "ಇದಕ್ಕೆ (ಕಾವ್ಯಕ್ಕೆ) ರಮ್ಯ, ನವ್ಯ, ಅತಿನವ್ಯ ಮುಂತಾಗಿ ಹಣೆಪಟ್ಟಿ ಹಚ್ಚ ಬಹುದು. ಏನಿದ್ದರೂ ಮೂಲ ಧನವಾದ ರಮಣೀಯತೆ ಮತ್ತು ರಸ ಇಲ್ಲದೆ ಹೋದರೆ ಅದು ಬರಿಯ ಚೌಕಟ್ಟಾಗಿ, ಮಜ್ಜೆ ಮಾಂಸಗಳನ್ನು ಕಳೆದುಕೊಂಡ ಗುಳ್ಳಿ ಬಸಪ್ಪನಾಗಿ ಅಸಹ್ಯ ಆಗಬಹುದು" ಎಂದು ಹೇಳಿ, ಕುಲಕರ್ಣಿಯವರ ಕಾವ್ಯ ಹಾಗಲ್ಲದ ಕಾವ್ಯ ಎಂದಿದ್ದಾರೆ. ಅದು ಸರಿಯಾಗೇ ಇದೆ. ಅದಕ್ಕೆ ಸಾಕ್ಷಿಯನ್ನು ಕುಲಕರ್ಣಿ ಆರಕ್ಕೆ ಏರದ ಆದರೆ ಮೂರಕ್ಕೆ ಇಳಿಯದ ಕವನಗಳಿಂದ ಒದಗಿಸಿದ್ದಾರೆ. ಕಾವ್ಯ ರಮ್ಯದ ಮೋಡಿನಲ್ಲಿ ಮೂಡಿಬಂದಿದೆ; ಲಯಭರಿತವಾದ ಛಂದಸ್ಸು ಹಾಗೂ ನುಡಿ ಸಂಯೋಜನೆಯಿಂದಾಗಿ ಕಾವ್ಯ ಕಳೆ ಕಟ್ಟಿದೆ. ಅದಕ್ಕೆ 'ಅಪರಿಚಿತ' ಕವನವೇ ಸಾಕ್ಷಿ. ಸುಧಾರಣಾ ಮನೋಭಾವದ ಕವಿ 'ನಂಬಿ ಕೆಟ್ಟೆವು ನಾವು' ಎಂಬ ಉತ್ತಮ ಕವನ ಕೊಟ್ಟಿದ್ದಾರೆ. 'ನಾಲ್ಕು ಹೆಗಲಿನ ಮೇಲೆ ಗುರು ಮುಂದೆ ಮುಂದೆ ಓಂದೆ' ಎಂಬ ಕೊನೆಯ ಸಾಲಿನ ವ್ಯಂಗ್ಯ ಹರಿತವಾಗಿದೆ.

ಉದ್ದ ಕವನಗಳಿಗಿಂತ ಚಿಕ್ಕ ಕವನದಲ್ಲಿ ಕುಲಕರ್ಣಿ ಹೆಚ್ಚು ಯಶಸ್ಸನ್ನು ತೋರು ತ್ತಾರೆ. 'ನೆನಪು', 'ನೋವೆ ಹೂವಾದಾಗ', 'ವಿರಹ' ಮುಂ.

"ಎಲೆಯಿಂರದ ರೆಂಬೆಯಂಲಿ
ಕುಳಿತಿರುವ ಹಕ್ಕಿ ನಾನು,
ಒಳಗಡೆಗೆ ಉಳಿದಿರುವ ಮುರಿದ ಮುಳ್ಳಿನ ತೆರದ ನೆನಹು ನೀವು"

ಕಾವ್ಯ ಒಂದು ಕಾಲದ ಮೂಡಿಗೆ ಪಕ್ಕಾಗಿರುತ್ತದೆ ಎಂದು ನಾನು ಹೇಳಿದ್ದಕ್ಕೆ 'ಚಪಲ' ಮತ್ತು 'ಶಂಕರ ಭಟ್ಟ ಸತ್ತಾಗ' ಒಳ್ಳೆಯ ಉದಾಹರಣೆ. 'ಚಪಲ'ದಲ್ಲಿ ಓರ್ವ ಹೆಣ್ಣು ಮುಂದೆ ಹೋಗುತ್ತಿದ್ದಾಗ ಕವಿ (ಅಂದರೆ ಕವಿತೆಯಲ್ಲಿಯ ಪಾತ್ರ) ಅವಳ ಬೆನ್ನು ಹತ್ತಿ ಹೋಗುತ್ತಾನೆ. ಅತಿ ಸಮೀಪ ಬಂದಾಗ ಅವಳು ಹೆದರಿ ಹೆದರಿ ಹಿಂತಿರುಗಿ ನೋಡಿದರೆ ಈ ಭೂಪ ಅವಳ ಗಂಡನೇ ಆಗಿದ್ದ. ಆಕೆ "ಅಯ್ಯೋ ನೀವಾ" ಎನ್ನುತ್ತಾಳೆ. ಇದು ರಮ್ಯದ ಮೂಡಿನ ಕವಿಗಳ ಜಾಡು. ಅದೇ ಈಚಿನ ಕವಿ ಆಗಿದ್ದರೆ ಕೊನೆಯ ಸಾಲು ಹೀಗಿರುತ್ತಿತ್ತು: "ಉತ್ಸಾಹ ಕರಗಿ ಅಯ್ಯೋ ನೀವೇನಾ ?" ಎಂದು.

●

ಮುಂಜಾವದ ಮುನ್ನದ ಕವಿ ಟಿ. ನಾಗರಾಜ್ ಅವರು ಲೀಲಾಜಾಲವಾಗಿ ಕವಿತೆಯನ್ನು ಬರೆಯಬಲ್ಲರು. ಆದರೆ ಅವರು ತನ್ನ ಆಲೋಚನೆ ಹರಳುಗಟ್ಟ ಬೇಕೆಂಬ, ತನ್ನ ಆಲೋಚನೆ ನಾಟಕೀಯವಾಗಿ ಆಕೃತಿಗೊಳ್ಳಬೇಕೆಂಬ ಕಲೆಯ ಕಷ್ಟದ ಕಡೆಗೆ ಗಮನ ಕೊಡುವುದೇ ಇಲ್ಲ.

ಸಂಕಲನದ ಮೊದಲ ಕವನ 'ಎಲ್ಲವೂ ಒಂದೆ' ಒಳ್ಳೆಯ ಪ್ರಾರಂಭದಿಂದಲೇ ಮೊದಲ್ಗೊಂಡು ಸಾಗುತ್ತಿದ್ದಂತೆ ಗಟ್ಟಿಯಾದುದನ್ನೇ ಹೇಳುತ್ತಾರೆಂದು ಸಾಗುವ ಓದುಗ ಕವನದ ಅರ್ಥ ದಾಟಿದಾಗ ಕವಿ ಏನು ಹೇಳುತ್ತಾನೆ ಎನ್ನುವುದೇ ತಿಳಿಯದೆ ದಿಕ್ಕೆಡುತ್ತಾನೆ. ಮುಖ್ಯವಾಗಿ ಕವಿ ಬಹುತೇಕ ಕವಿತೆಯಲ್ಲಿ ಪರಮಾತ್ಮನ ಕರುಣೆ ಯನ್ನೇ ಯಾಚಿಸುತ್ತಾನೆ. ಅದಾದರೂ ದಾಸರ ಹಾಡಿನ ಹಾಗೆ ಒಂದು ಸಾವಯವ ಪಡೆದ ಭಕ್ತಿಗೀತವಾಗಿದ್ದರೆ ಒಂದು ಭಾವಲಹರಿಯ ಸುಖಾನುಭವವಾದರೂ ಇರುತ್ತಿತ್ತು. ಇಲ್ಲಿ ಅದೂ ಇಲ್ಲ. ಸಂಕಲನದ ಹೆಸರಿನ 'ಮುಂಜಾವದ ಮುನ್ನ' ಒಂದು ಆಶಾದಾಯಕ ಕವನ. ಇಂದಿನ ವಿಧ್ವಂಸಕ-ಪರಿಸರವನ್ನು ಸರಳ ಮಾತು ಗಳಿಂದಲೇ ಆದರೂ ಭಾವತೀವ್ರತೆಯಿಂದ ರಮ್ಯವಾಗಿಸಿದ್ದಾರೆ. ಆಲೋಚನೆಯ ಅಸ್ಪಷ್ಟತೆಯಿಂದ ಬಳಲುವ ಈ ಕವಿ ಅದೇ ಚುಟುಕಾದ ಕವಿತೆಗಳಲ್ಲಿ ಮಿಂಚುತ್ತಾರೆ. ಉದಾ: "ಗರ್ಭಪಾತ" ಚಿಕ್ಕ ಕವಿತೆಯಲ್ಲಿ ಆಧುನಿಕತೆಯ ಭೀಕರತೆಯನ್ನು

ತೋರುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕೆ ಕಾರಣವೇನು ? ಕವಿ ತಾನು ಹೇಳುವುದನ್ನು ನೇರವಾಗಿ ಮಾತಾಗಿಸದೆ ಪ್ರತಿಮೆಯ ಮೂಲಕ ನಾಟಕೀಕರಿಸಿದ್ದರಿಂದ. "ಬೆಳೆದಂತೆಲ್ಲ" "ಸಂಕೇತ ಮಾತ್ರ" ಇಂತವುಗಳು ಕವಿಯ ಶಕ್ತಿಗೆ ದಾರಿದೀಪವಾಗಬಹುದು. ಅವರು ಪರಮಾತ್ಮನ ಕರುಣೆ, ಮುಕ್ತಿಯಂತಾ ಪೊಳ್ಳು ಆದರ್ಶದ ಪಲಾಯನವಾದವನ್ನು ಪರಿಹಾರಸೂತ್ರವನ್ನಾಗಿ ಮಾಡಿಕೊಳ್ಳುವ ಬಾಲಿಶತನದಿಂದ ದೂರವಾಗಿ ಸುತ್ತಲಿನ ವಾಸ್ತವತೆಗೆ ವೈಜ್ಞಾನಿಕ ಮನೋಭಾವದಿಂದ ಸ್ಪಂದಿಸಿದರೆ ಅವರ ಕಾವ್ಯ ಕುಸುಮಗೊಳ್ಳುವುದರಲ್ಲಿ ಸಂದೇಹವಿಲ್ಲ.

●

ಮಿಣುಕುಮಲ್ಲಿಗೆಯ ಕವಿ ಭವಾನಿ ಶಂಕರ ತಮ್ಮ ಸಂಕಲನದಲ್ಲಿ ಯಾವ ಮಹತ್ವಾಕಾಂಕ್ಷೆಯ ಕವಿತೆಯನ್ನು ಕೊಡದಿದ್ದರೂ ತಮ್ಮ ಸೀಮಿತವಾದ ಉದ್ದೇಶದಲ್ಲಿ ಯಶಸ್ವಿಯಾಗಿ ತೋರುತ್ತಾರೆ. ನಿತ್ಯ ಭೆಟ್ಟಿಯಾಗಿ ಮರೆಯಬಹುದಾದ ಎಷ್ಟೋ ಭಾವಲಹರಿಯನ್ನು ನವಿರಾಗಿ ಚಿತ್ರೀಕರಿಸುವಲ್ಲಿ, ಅದನ್ನು ಪ್ರತಿಮೆ, ರೂಪಕ, ಪ್ರತೀಕಗಳಲ್ಲಿ ರಂಗುಗೊಳಿಸುವಲ್ಲಿ ಕುಶಲತೆಯನ್ನು ತೋರುತ್ತಾರೆ. 'ಹುಡುಗಿ-ಚಿನ್ನ', 'ಚರಿತ್ರೆ ಮತ್ತು ಅಪಘಾತ', 'ಓ ಕೃಷ್ಣಾ' ಇವೆಲ್ಲ ಇಂಥ ಕವಿತೆಗಳು.

ಈ ಮಧ್ಯೆ ತನ್ನ ಸಾಚಾತನವನ್ನು ಬಿಟ್ಟು ಖುಶಿ ಕೊಡುತ್ತಲೇ ತುಸು ಗಂಭೀರಕ್ಕೆ ಇಳಿದು ಕೆಲ ಕವಿತೆಗಳು ಪ್ರೌಢವಾಗುತ್ತವೆ. ಇಲ್ಲೆಲ್ಲ ತಮ್ಮ ಹಗುರು ಶೈಲಿಯಲ್ಲೆ ಗಾಂಭೀರ್ಯವನ್ನು ಸಾಧಿಸುವುದು ಒಂದು ವಿಶೇಷತೆ. 'ಕಾಲ ನಿಲ್ಲುವುದು ಬೇಡ' ಇದಕ್ಕೆ ಒಂದು ಒಳ್ಳೆ ಉದಾಹರಣೆ.'ತ್ರಿಜ್ಯಗಳು' ಕವನದಲ್ಲಿ ಬಾಲ್ಯದ ಅನುಭವವನ್ನು ಕಚಗುಳಿ ಇಟ್ಟಂತೆ ಚಿತ್ರಿಸುತ್ತ ಬದುಕಿನ ಬಗೆಗೆ ಒಂದು ಬಗೆಯ ವಿಷಾದ ಧ್ವನಿಯನ್ನು ಕೊಟ್ಟು ಗಂಭೀರಗೊಳಿಸುತ್ತಾರೆ. "ಖಂಗ್ ಫಿಂಗ್" ಸಹ ವ್ಯಂಗ್ಯಮಯವಾಗಿ ವಿಷಾದವನ್ನು ಹೊಮ್ಮಿಸುವುದರಲ್ಲಿ ಯಶಸ್ವಿಯಾಗಿದೆ.

ಒಟ್ಟಾರೆ ಈ ಕವಿತೆಗಳು ಒಂದು ಸೀಮಿತ ಮಟ್ಟದಲ್ಲಿ ಖುಶಿ ಕೊಡುವ ಕವಿತೆಗಳಾಗಿವೆ.

●

ಚುಟುಕಿನಲ್ಲಿ ಸಫಲವಾಗುವ ಕವಿ ಸಿ. ವಿ. ಮುರಳೀಧರ. **ನಿನ್ನ ಹೆಜ್ಜೆಯ ಗುರುತಿನ ಬಳಿ** ಇಡೀ ಸಂಕಲನಕ್ಕೆ ಅನ್ವರ್ಥಕವಾಗಿದೆ. ಯಾಕೆಂದರೆ ಇಲ್ಲಿ ಕವಿ ತನ್ನ ಪ್ರಿಯೆಯ ನೆನಪಿನಿಂದ, ವಿರಹದಿಂದ ಯಾತನೆಗೊಂಡು ಕವನ ಹಿಡಿದು ಅವಳ ಹೆಜ್ಜೆಯ ಗುರುತಿನ ಬಳಿಯೇ ಸುತ್ತುತ್ತಾರೆ.

ಮುರಳೀಧರ ತಮ್ಮ ಭಾವತೀವ್ರವಾದಾಗ ವಚನ ಶೈಲಿಯಲ್ಲಿ ಸಮರ್ಥವಾಗಿ ಕವನಿಸು ತ್ತಾರೆ. ಆದರೆ ವಚನದ ತೀವ್ರತೆ, ಭಾವನೆಯ ಸ್ಫಟಿಕ ಪಾರದರ್ಶಕತೆ ಭಾಷೆಗೆ ಬರದೇ ಹೋಗುತ್ತದೆ. ಆದರೂ ಸಹ ಕಾವ್ಯದ ಕಾಡಿನಲ್ಲಿ ಸಜ್ಜಾಗಿಯೇ ನಡಿಗೆ ಪ್ರಾರಂಭಿಸಿದ್ದಾರೆ ಎನ್ನಲಡ್ಡಿಯಿಲ್ಲ. 'ನಿರೀಕ್ಷೆ' ಕವನದ "ಹೊದ್ದ ಹಸಿರು ಒಣ ಗಿತು । ಬೆತ್ತಲೆಯ ಮಾಡಿತು" ಮುಂತಾಗಿ ಪ್ರಾರಂಭವಾಗುವ ಸಾಲುಗಳು ಸಮರ್ಥ ವಾಗೇ ಇವೆ. ಸರಳ ಎನ್ನುವಂತಿರುವ ಈ ರಚನೆಗೆ ಕೊನೆಯ ಸಾಲು "ದೂರದಲ್ಲಿ ಹೊಳೆವ ಮಿಂಚು, ಈ ಕಡೆಗೂ ಬಾಗಿ ಅವಳ ಮನಸು ಕರಗಿಸೀತೆ?" ಎಂಬ ಆರ್ತತೆ ಮನ ಕರಗಿಸುತ್ತದೆ.

ಕವಿತೆ ಚಿಕ್ಕದಾದಷ್ಟು ಇವರು ಮಾತನ್ನು ಹರಳುಗಟ್ಟಿಸಬಲ್ಲರೆನ್ನುವುದಕ್ಕೆ 'ಅನುಮಾನ' ಸಾಕ್ಷಿಯಾಗಿದೆ. "ಭೂಗತ"ದಲ್ಲಿ "ಬೆಚ್ಚಗಿರಬಯಸಿದ ಎದೆಗೆ ಬಿಗಿದಪ್ಪಿ ಹಿಡಿವ ಮೋಡಗಳು" ಸುಂದರವಾದ ಪ್ರತಿಮೆ.ಚುಟುಕು ೩, ೬, ೯, ೧೫ ಚಪ್ಪರಿಸಬೇಕಾದ ಚಾಕಲೇಟು.ಅಬ್ದುಲ್ ಮಜೀದ್ ಖಾನ್‌ರು ಎನ್ನುವಂತೆ ಇಲ್ಲಿಯ ಮಾತುಗಾರಿಕೆ ಪ್ರಿಯವೆನಿಸಿ ಕವಿಯ ಬಗ್ಗೆ ಭರವಸೆ ಹುಟ್ಟಿಸುತ್ತದೆ.

●

ಹಾಗೆ ನೋಡಿದರೆ ಹಂಪಣ್ಣ ಅವರು ತಮ್ಮ **ದನಿಗಳು** ಮುಖಾಂತರ ಕಲಾತ್ಮಕ ದೃಷ್ಟಿಯಿಂದ ಮಹತ್ತರವಾದ ಕವಿತೆಗಳನ್ನೇನೂ ಕೊಟ್ಟಿಲ್ಲ. ಆದರೂ ಈ 'ದನಿ' ಉಳಿದೆಲ್ಲ ಧ್ವನಿಗಳಿಗಿಂತ ನಮ್ಮನ್ನು ತಟ್ಟನೆ ತಟ್ಟುತ್ತವೆ,ಯಾಕೆ ?

ಯಾಕೆಂದರೆ ಈ ದನಿಗಳು ಇನ್ನೂ ನಮಗೆ ಕೇಳಿಸದ ದನಿಗಳು. ಉಳಿದವರ ಅಬ್ಬರ ದಲ್ಲಿ ಅಡಗಿಹೋದ ದನಿಗಳು. ಈ ದನಿಗಳು ಹಸಿ ಹಸಿಯಾದ ಮಾಂಸ ರಕ್ತಗಳನ್ನು ಮೆತ್ತಿಕೊಂಡು ತಾಜಾ ಆಗಿ, ವಾಸ್ತವವಾಗಿ ರೆಲೆವೆಂಟ್ ಆದುವು. ಆದ್ದರಿಂದಲೇ ಈ ವಸ್ತುಮಹತ್ವ ನಿರ್ವಹಣೆಯ ಕೌಶಲ್ಯವನ್ನೂ ಮೀರಿ ನಮ್ಮನ್ನು ತಟ್ಟುತ್ತವೆ. ಹೌದು, ಇಲ್ಲಿಯ ಬಹಳಷ್ಟು ಕವನಗಳು ವಾಚ್ಯವಾಗುತ್ತವೆ. ಮಾತುಗಳ ಮಟ್ಟ ದಲ್ಲೇ ನಿಲ್ಲುತ್ತವೆ. ಬರಗೂರರು ಮುನ್ನುಡಿಯಲ್ಲಿ ಸರಿಯಾಗಿಯೇ ಅವನ್ನು ಗುರುತಿಸಿ ದ್ದಾರೆ. ಆದರೆ ವಾಚ್ಯವೂ ದಲಿತ ದನಿಯ ಒಂದು ಸ್ಪಷ್ಟ ಲಕ್ಷಣವೇ ಆಗಿದೆ. ಆದ್ದ ರಿಂದಲೇ ಇಲ್ಲಿ ವಾಚ್ಯವೂ ಮಾನ್ಯ

ಹಾಗಂತ ಇವು ಕಲೆಯಾಗದ ಕವನಗಳು ಎಂದರ್ಥವೇನೂ ಅಲ್ಲ. ಹಂಪಣ್ಣ ಅವರ ಉತ್ತಮ ಕವನ ರಚನೆಯ ರೀತಿಗೆ 'ಕತ್ತಲ ಹಾಡುಗಳು', 'ಕಪ್ಪು ಜನರು', 'ನೆನಪುಗಳು ಸುಡುತಿವೆ' 'ನನ್ನ ಜನಗಳೆ' 'ಸಾಗಿದರೊ ಸಾಗಿದರು' 'ಅಜ್ಜಿ ಹಾಸಿಗೆ ಯಲ್ಲಿ' 'ಆಗ ಅಪ್ಪ ಬಂದ' ಕವನಗಳು ಸಮರ್ಥ ಉದಾಹರಣೆಯಾಗಿವೆ.

"ಕತ್ತಲೆಯೊಳಗಿನ ಬೆತ್ತಲೆ ಹಾಡುಗಳು
ಬೆಳ್ಳಂ ಬೆಳದಿಂಗಳ ನಾಚಿಸುವಂತಿವೆ
ಹಾರಾಡಿ ಬೋರಾಡಿ ಕಿರಿಕಿರಿ ನೋವುಂಡು.
ತಾನೇ ತಾನಾಗಿ ಹಾಡುತ್ತಿವೆ"

ಎಂದು ತಮ್ಮ ಹಾಡುಗಳ ಕುರಿತು ಕವಿ ಹೇಳಿರಬಹುದಾದರೂ ಈ ಮಾತು ದಲಿತ ಸಾಹಿತ್ಯಕ್ಕೆ ಪ್ರಾತಿನಿಧಿಕವಾಗಿ ಸಲ್ಲುತ್ತದೆ.

'ನೆನಪು ಸುಡುತ್ತವೆ' ಒಂದು ಭಾವನೆಯನ್ನು ಭಾವ ತೀವ್ರತೆಯನ್ನು ಕುಂದಿಸದೆ ಬೆಳೆಸುತ್ತ 'ನೆನಪುಗಳು ಸುಡುತ್ತಿವೆ ಇತಿಹಾಸ ನಿರ್ಮಿಸಿದ ನನ್ನ ಜನಗಳ ಇತಿಹಾಸವೇ ಇಲ್ಲದ್ದಕ್ಕೆ" ಎಂಬ ಶಿಖರಕ್ಕೆ ಒಯ್ದು ನಿಲ್ಲಿಸುವ ಧ್ವನಿಪೂರ್ಣವಾದ ಕವನ 'ಅಜ್ಜಿ ಹಾಸಿಗೆಯಲ್ಲಿ' ನೋವು, ಪ್ರೀತಿ, ಅಸಹಾಯಕತೆ, ವಂದ್ವಗಳೆಲ್ಲ ಸೊಗಸಾಗಿ ಕಲಾತ್ಮಕವಾಗಿ ಆಕೃತಿಗೊಂಡ ಕವನ. ಬಡಬದುಕಿನಲ್ಲಿ ಸೃಷ್ಟಿಕ್ರಿಯೆಯ ಸಾರ್ಥಕತೆ, ಬದುಕಿನ ಪ್ರೀತಿ ನವಿರಾಗಿ ರೂಪುಗೊಂಡ ಕೃತಿ "ಆಗ ಅಪ್ಪ ಬಂದ."

ಹಂಪಣ್ಣ ಅವರ ದನಿಗಳು ಇನ್ನೂ ಗಟ್ಟಿಯಾಗಿ, ಇನ್ನು ಶಿಸ್ತಾಗಿ ಬರಲಿ ಎಂದು ಹಾರೈಸುವ

ಆರ್. ವಿ. ಭಂಡಾರಿ

ನಾಲ್ಕು ಪ್ರಥಮ ಸಂಕಲನಗಳು

ಬತ್ತದ ನೆನಪಿಗೆ ಬಾಡದ ಕಾವ್ಯ : ಬಸವಲಿಂಗ ಸೊಪ್ಪಿಮಠ
ಕಣ್ಣಗಲಿಸದೆ ಕೇಳು ಗೆಳೆಯಾ : ಎಂ.ಬಿ. ಅಡ್ನೂರ
ಗತಿ : ಸ. ರಘುನಾಥ
ನಿರೀಕ್ಷೆ : ಒಡೆಯರ್ ಡಿ. ಹೆಗ್ಗಡೆ.

ಬತ್ತದ ನೆನಪಿಗೆ ಬಾಡದ ಕಾವ್ಯ ೨೦ ಕವಿತೆಗಳ ಸಂಕಲನ. ಮೊದಲ ಕವಿತೆ 'ಔಡಲ'ದಲ್ಲಿ ಕವಿ ಬದುಕು ಬರಹದ ನಿಖರ ಸಂಬಂಧ ಘೋಷಿಸುತ್ತಾನೆ, ಹೆಚ್ಚು ಎಚ್ಚರದಿಂದ ಕಾವ್ಯ ರಚನೆಯ ಸಂದಿಗ್ಧತೆ ಅರಿವು ಇರುವವನ್ನು ಬಸವಲಿಂಗ ಸೂಪ್ಪಿಮಠ ಈ ರೀತಿ ತೋರಿಸುತ್ತಾರೆ.

ಹೆಮ್ಮರವಾಗು ಮಗನೆ ಅಂದೆ.
ಕೇಳದೆ ತಕತಕ ಕುಣಿದು ಕುಪ್ಪಳಿಸಿದ
ಆಳಕ್ಕಿಳಿಯದೇ ಮೇಲ್ಪದರಿನಲ್ಲೇ ಸೆದರಿಟ್ಟು
ಪುರು ಪುರು ಬೆಳೆದು ನಿಂತ ಗಿಡಾ
ಔಡಲ (ಔಡಲ)

'ಗಾಂಧಿ ಮತ್ತು ಜಗದಂಬಾ ಕ್ಯಾಲೆಂಡರ್' ಕವಿತೆಯ ಆಡುಮಾತಿನ ಶೈಲಿ. 'ಬದುಕು ಬಂದೂಕು" ಕವಿತೆಯಲ್ಲಿ ಕವಿ ಹೇಳುವ "ಬಿತ್ತಿ ಬೆಳೆದದ್ದೆಲ್ಲ ಬೆಂಕಿ ಕಣ್ಣೀರು ಉರಿಯ ರಾತ್ರಿಗಳಲ್ಲ ಆಳುವ ಗಾಳಿಯಗುಂಟ ತೇಲಿ ಬಂದದ್ದೇನು ಮಸಣ ಸೂರು,' ಸಮಕಾಲೀನ ಭಾರತದ ವಿಫಲತೆ ಹೇಳಿದರೂ, 'ಕ್ರಾಂತಿ ಕಾಯುವದಿಲ್ಲ' ಕವಿತೆಯಲ್ಲಿ "ಕೋಟಿ ಕೋಟಿ ಕಪ್ಪು ದೇಹದ ಕೋಮಲ ಜೀವಗಳ ನಿಟ್ಟುಸಿರಿ ನಾಕ್ರೋಶದಲಿ ಎಲ್ಲ ಎಲ್ಲ ನಿಶ್ಚಿಂತವಾಗಿರುತ್ತದೆ" ಎಂಬುವಲ್ಲಿ ತಣ್ಣಗಿನ ಬೆಂಕಿ, ಒಂದು ಹೊಸ ಆಸ್ಫೋಟ ಅನಿವಾರ್ಯವಾದರೂ ಇಲ್ಲಿ ಎಲ್ಲರ ನಡುವೆ ಅಡಗಿದೆ; ಆದ್ದರಿಂದ 'ಕ್ರಾಂತಿ ಕಾಯುವದಿಲ್ಲ' ಎಂದು ಕವಿ ಹೇಳುತ್ತಾನೆ. 'ಅಮೃತ ಮತಿಯ ವಿರಹಗೀತೆ' 'ಲಕ್ಕಿಯ ಹಾಡು' ಶೋಷಿತಹೆಣ್ಣಿನ ಎರಡು ಬೇರೆ ಬೇರೆ ಬಗೆಯ ನೋವು ಅನುಭವಿಸಿದ ಯಶಸ್ವಿ ಕವಿತೆಗಳು. 'ಅಂಗಳ ಮತ್ತು ಹೂವು' 'ಚಿತ್ರ' ಮತ್ತು 'ಬತ್ತದ ನೆನಪಿಗೆ ಬಾಡದ ಕಾವ್ಯ' ಕವಿತೆಗಳಲ್ಲಿ ಕವಿ ಸಾಧಿಸಿದ ಭಾಷೆಯ ಲವಲವಿಕೆ, ಪ್ರಸನ್ನ ಮಾತುಗಾರಿಕೆ, ಉತ್ತಮ ಕಲಾವಂತಿಕೆಗೆ ಸಾಕ್ಷಿ. ಸಮಕಾಲೀನ ತೀವ್ರತೆಯೊಂದಿಗೆ ಸಾಧಿಸಬೇಕಾದ ಅಂಶಗಳನ್ನು ಇಲ್ಲಿ ಬಸವಲಿಂಗ ಸೊಪ್ಪಿಮಠ ಸಾಧಿಸಿದ್ದಾರೆ.

●

ಕಣ್ಣ ಗಲಿಸದೆ ಕೇಳು ಗೆಳೆಯಾ ಎಂ.ಬಿ. ಅಡ್ನೂರರ ಪ್ರಥಮ ಕವನ ಸಂಕಲನ. ಒಟ್ಟು ೪೭ ಕವಿತೆಗಳಿವೆ. ಚಂದ್ರಶೇಖರ ಪಾಟೀಲರು ಹೇಳಿರುವಂತೆ 'ಈ ಕವಿ ಸಾಧಿಸಬೇಕಾದದ್ದು ಅಭಿವ್ಯಕ್ತಿಯಲ್ಲಿ ಸಂಯಮ. ನವ್ಯ ಕಾವ್ಯದ ಅವಧಿಯ ನಂತರ ಹೊಸದಾಗಿ ಬರೆಯುತ್ತಿರುವ ಅನೇಕ ಕವಿಗಳ ಸಮಸ್ಯೆ ಇದಾಗಿದೆ.ಕವನಗಳು ಸಂಕ್ಷಿಪ್ತವಾದಷ್ಟೂ ಭಾಷೆಯ ಸ್ಫೋಟಕ ಗುಣ ಹೆಚ್ಚಾಗುತ್ತದೆ.' ಕವಿ ಅಡ್ನೂರ್ ಇನ್ನೂ ಇಂಥ ಭಾಷೆಯ ಮೇಲಿನ ಸಂಯಮ ಸಾಧಿಸಬೇಕಾಗಿದೆ.

ಪ್ರಸ್ತುತ ಸಂಕಲನದ ಕೆಲವು ಒಳ್ಳೆಯ ಸಾಲುಗಳು ಈ ರೀತಿ ಇವೆ :

ನನ್ನ ನಿನ್ನಂಥವರ
ಅಸ್ಥಿ ಪಂಜರ
ಅಸ್ತಿವಾರದ ಮೇಲೆ
ಸೆಟೆದು ನಿಂತ ಗೋಡೆ
ಗುಡುಗಿದಾಗಲೇ ನಾವು
ಮೈ ಕೊಡವಿದಾಗಲೇ
ನಡುಗೀತು
ಉಡುಗಿ ಬಿದ್ದು
ಹುಡಿಯಾಗಿ ಹೋದೀತು

(ಜಾತಿಯ ಗೋಡೆ)

ಸುಳಿವ ಗಾಳಿಯು ಸಂಗಡ
ಗವ್ವೆನ್ನುವ ಕತ್ತಲೆಯು ಸಂಗಡ
ಮಾತನಾಡುತ್ತಿವೆ ತಮಗೆ ತಾವೇ
ಬಂದಿಯಾಗುತ್ತಿರುವ, ಸೋತು
ಸೊರಗುತ್ತಿರುವ ಕನಸುಗಳು
ಮಾತಾಡಿಕೊಳ್ಳುತ್ತವೆ. (ಕನಸುಗಳು)

ಇದು ಕವಿಯ ಮೊದಲ ಕವನ ಸಂಕಲನ, ಕವಿ ತನ್ನ ಸ್ವಂತಿಕೆಯನ್ನು ಅಲ್ಲಲ್ಲಿ ಸಾಧಿದರೂ ಈ ಸ್ವಂತಿಕೆಯನ್ನು ಕಳೆದುಕೊಳ್ಳದೇ, ಇದನ್ನೂ ಮೀರುವ ಪ್ರಯತ್ನ ಮಾಡಬೇಕು. ಇದೆಲ್ಲ ಕವಿಯ ವ್ಯಕ್ತಿತ್ವದ ಅರಗಿಸಿಕೊಳ್ಳುವ ಶಕ್ತಿ ಬೆಳೆದಂತೆ ಆಗುವಂಥದು. 'ಸಾವಿರದ ನೋವು', 'ಕಣ್ಣ ಗಲಿಸದೇ ಕೇಳು ಗೆಳೆಯಾ' 'ಬಯಲು ಬಟ್ಟೆ ಬಯಲು'ಗಳಂಥ ಕೆಲವು ರಚನೆಗಳಲ್ಲಿ ಕವಿ ಭರವಸೆ ನೀಡುತ್ತಾರೆ.

●

ಗತಿ ಸ. ರಘುನಾಥರ ಮೊದಲ ಕವನ ಸಂಕಲನ. ಸ್ವಂತಿಕೆಯ ಹಲವು ಮುದ್ರೆಗಳನ್ನು ಪಡೆದುಕೊಂಡ ಪ್ರಬುದ್ಧ ಕವಿತೆಗಳು ಇಲ್ಲಿವೆ. ಹೋರಾಟದ ಸೂಕ್ಷ್ಮ ಎಳೆಗಳನ್ನು ಕಾವ್ಯದ ತುಂಬ ಕಾಣಬಹುದು. 'ನನ್ನವ್ವಿ ಏನಂತಿ' ಎಂಬ ಒಂದೇ ಒಂದು ಕವನ ರಘುನಾಥರ ಹಲವು ಮಜಲುಗಳನ್ನು ತೋರಿಸುವಂಥದು.

ಬಲ್ತೊರ ಮನೆಯಾಗ
ಬತ್ತಾವ ಕುಟ್ಟಿ ಕುಟ್ಟಿ
ನೋಯ್ತಾವ ನನ್ನೆಲ್ಡೂ ಕಯ್ಯಿ
ಅವ್ವಿ ಸೋಲ್ತಾವ ನನ್ನೆಲ್ಡೂ ರಟ್ಟೆ……

ಇಲ್ಲಿರುವ ತಾಯಿ ಮಗಳ ಸಂವಾದ, ಎಲ್ಲಿಯೂ ರೊಚ್ಚು, ಆಕ್ರೋಶಗಳಾಗಿ ಪ್ರಕಟಿಯದೆ ಗಾಢ ವಿಷಾದದ ಅಳಲು, ಶೋಷಣೆಯ ಸಂಕೋಲೆಗಳನ್ನು ಬಿಡುಗಡೆಗೆ ಬೆಳಕು ಚೆಲ್ಲುವದು. ಒಂದಿನದೆಲ್ಲವನ್ನು 'ಕಪ್ಪಾಗಿ ನನ್ಯಾಕ ಹಡದಿ' ಎಂದು ಪ್ರಶ್ನಿಸುವಲ್ಲಿ ಮುಗಿಯುತ್ತದೆ. ಎರಡು ತಲೆಮಾರುಗಳೂ ವ್ಯವಸ್ಥೆಯ ತುಳಿತವನ್ನು ಅನುಭವಿಸಿದ್ದರೂ, ಇದನ್ನೆಲ್ಲ 'ತುಳಿತ' ಎಂದು ತಿಳಿಯುವ ಎಚ್ಚರ, ತಲೆಮಾರುಗಳಲ್ಲಿ ಹರಿದು ಬಂದ ಕಪ್ಪು ನೋವನ್ನು ಆಳವಾದ ವಿಷಾದ ಕಟ್ಟಿಯೊಡೆಯುವ 'ನನ್ನವ್ವಿ ಏನಂತಿ ?' ಕವಿತೆಯ ತುಂಬ ಕಾಣಬಹುದು. ಅದಕ್ಕೂ ಮಿಗಿಲಾಗಿ 'ಕಪ್ಪಾಗಿ ಹಡದ್ಯಾಕ ಅವ್ವಿ, ಕಪ್ಪಾಗೆ ನನ್ಯಾಕ ಬುಟ್ಟಿ' ಎಂದು ವಂಶಪರಂಪರೆಯ ಜೈವಿಕ ಪ್ರಕ್ರಿಯೆಯನ್ನು ಪ್ರಶ್ನಿಸುವದು ರಘುನಾಥರ ಪ್ರಬುದ್ಧ ಕಾವ್ಯದ ದೊಡ್ಡ ಹರವು. ಇದೇ ರೀತಿಯಾಗಿ ಧ್ವನಿ ೧, ೨, ೩, ೪ ಕವಿತೆಗಳಲ್ಲೂ ಕಾಣಬಹುದು.

ಇಲ್ಲಿಯೂ ಕೊನೆಗೆ ಸಮಾನತೆಯತ್ತ ಕವಿ ನಿಂತು 'ಅವರಿಗೂ ಕೊಡಿ ನಿಮ್ಮಂಥದೇ ಬದುಕು' ಹೇಳುತ್ತಾನೆ. 'ಪ್ರಶ್ನೋತ್ತರ', "ಇವರು ಅವರ ನಡುವೆ ನಾನು ಮತ್ತು ಕ್ರಿಯೆ" 'ಭಾರತವೆಂದರೆ' ಮುಂತಾದ ಯಶಸ್ವಿ ಕವಿತೆಗಳು ಇಲ್ಲಿವೆ.

●

ನಿರೀಕ್ಷೆ ಒಡೆಯರ ಡಿ. ಹೆಗ್ಗಡೆ ಅವರ ಮೊದಲ ಕವನ ಸಂಕಲನ. ಇಲ್ಲಿ ಒಟ್ಟು ೩೧ ಕವಿತೆಗಳಿವೆ. ರಘುನಾಥರಿಗಿಂತ ಒಂದು ರೀತಿಯಲ್ಲಿ ಬೇರೆಯಾಗಿ ಬರೆದಂಥ ಕವಿತೆಗಳು. ಕವಿತೆಗೆ ಅಂದವಾದ ಬಂಧ, ಶಿಷ್ಟ ಭಾಷೆಯ ಚುರುಕು, ನಾಜೂಕಾದ ಶೈಲಿ ರಘುನಾಥರಿಗಿಂತ ಬೇರೆ ರೀತಿಯಲ್ಲಿದ್ದರೂ ಒಟ್ಟು ಕಾವ್ಯದ ತುಡಿತ, ಈ ಕಾವ್ಯ ಶಕ್ತಿಯ ಹಿಂದೆ ನುಡಿಯುವ ಉದ್ದೇಶ ಎಲ್ಲ ಒಂದೇ ಇದೆ. ಇದು ಒಂದೇ ಕಾಲಘಟ್ಟದಲ್ಲಿ, ಒಂದೇ ಕಾವ್ಯ ಪಂಥದಲ್ಲಿ, ಇಬ್ಬರು ಕವಿಗಳಲ್ಲಿ ಉಂಟಾಗಬಹುದಾದ ಸಹಜ ಸಾಮರಸ್ಯ. 'ದಂತ ಗೊಂಬೆಗಳೊಳಗಿನ ದುರಂತ ಕಿಡಿಗಳು' ಕವಿತೆಯಲ್ಲಿ ಪುರುಷ ಪ್ರಧಾನ ಸಮಾಜದ ಗೇಲಿ ಮಾಡಿವರೆ. 'ಬತ್ತಲೆಯ ಕತ್ತಲೆ ಬದುಕಿನವರು' ಕವಿತೆಯಲ್ಲಿ—

'ನಮ್ಮ ನಗರಗಳೆಲ್ಲ ಸಂತೆಗಳು
ಇವೆಲ್ಲ ಜನಸಾಗರದ ದ್ವೀಪಗಳು'

ಎಂದು ನಾಗರೀಕತೆ ಹುಟ್ಟಿಸಿದ ಛಿದ್ರತೆ, ಭ್ರಮಾಧೀನಗೊಳಿಸುವ ಬದುಕು ಮತ್ತೊಂದು ರೀತಿಯಲ್ಲಿ ಹಿಡಿದಿಟ್ಟಿದ್ದಾರೆ. 'ಮೌನಗೀತೆ' 'ಹುಣಸೆ ಮರದಲ್ಲೊಂದು ಹೆಣ' ಒಳ್ಳೆಯ ಪದ್ಯಗಳು. ಹೆಣ್ಣನ್ನು ಕುರಿತು ಮೊದಲಿನ ಬಹುತೇಕ ಕವಿತೆಗಳು ಬಹಳ ಬಾಲಿಶ ಅನಿಸಿದರೂ, ಕವಿ ಬೆಳೆದಂತೆ ಹೆಣ್ಣಿನ ಶೋಷಣೆ ಕುರಿತು ಬರೆದ ಕವಿತೆಗಳು ಕವಿಯ ಬೆಳವಣಿಗೆ ತೋರಿಸುತ್ತದೆ.

ಸತೀಶ ಕುಲಕರ್ಣಿ

●

ಮೂರು ವಿಭಿನ್ನ ನೆಲೆಗಳ ಆ್ಯಂಥಾಲಜಿಗಳು

ಅವರು ಬೆಳೆಸಿದ ಗಿಡಗಳು ; ಸಂ–ಚಿ. ಶ್ರೀನಿವಾಸ ರಾಜು
ರಕ್ತದ ಹೊಳೆ ಬೆಂಕಿಯ ಮಳೆ ;ಸತ್ಯಾನಂದ ಪಾತ್ರೋಟ, ಯಲ್ಲಣ್ಣ ಇಲ್ಲಾಳ
ಕಮ್ಮಟದ ಕವಿತೆಗಳು : ಸಂ– ಚೊಕ್ಕ ಮೂರ್ತಿ ಪಾಟೀಲ

ಸಮಕಾಲೀನ ಕನ್ನಡ ಕಾವ್ಯದ ಮೂರು'ಮಾದರಿ' ಆ್ಯಂಥಾಲಾಜಿಗಳು ಇಲ್ಲಿವೆ.ಒಂದೇ ಕಾವ್ಯ ಸಂದರ್ಭದಲ್ಲಿ ವಿಭಿನ್ನ ನೆಲೆಗಳಲ್ಲಿ ಕಾವ್ಯ ರಚನೆ ಮಾಡುವಾಗ ಸಮಕಾಲೀನ ಕಾವ್ಯದ ಅಚ್ಚು ಆರಂಭಿಕ ಕವಿಗಳ ಮೇಲೊತ್ತುವ ಬೇರೆ ಬೇರೆ ಪರಿಣಾಮಗಳನ್ನು

ಇಲ್ಲಿ ಕಾಣಬಹುದು. ಹಲವು ಹಸಿಬಿಸಿ ಅನುಭವಗಳು ಸಿದ್ಧಗೊಂಡು. ಗೊಡ್ಡಾದ ತಂತ್ರಗಳು, ಹೆಚ್ಚು ಬೇಗನೆ ಜನರಿಗೆ ತಲುಪುವ ತವಕದೊಂದಿಗೆ ಅತಿ ಆಕ್ರೋಶದ ರಚನೆಗಳು ಅಲ್ಲಲ್ಲಿ ಕಾಣಬಹುದು. ಇವೆಲ್ಲದರ ನಡುವೆ ಭರವಸೆ ನೀಡುವ, ಖುಷಿ ಕೊಡುವ, ಹೆಚ್ಚು ಎಚ್ಚರ ಸಂಯಮದಿಂದ ಕೂಡಿದ ಕೆಲವು ಮಾದರಿಗಳೂ ಇಲ್ಲಿವೆ.

ಅವರು ಬೆಳೆಸಿದ ಗಿಡಗಳು ಸಂಕಲನ ದ. ರಾ. ಬೇಂದ್ರೆಯವರ ನೆನಪಿಗಾಗಿ ಅಂತರ ಕಾಲೇಜು ಕವನ ಸ್ಪರ್ಧೆ ಏರ್ಪಡಿಸಿದಾಗ ಬಹುಮಾನಿತ ಕವಿಗಳ ಕವನ ಸಂಕಲನ. ಒಟ್ಟು ಹತ್ತು ಜನ ಕವಿಗಳು ಇಲ್ಲಿದ್ದಾರೆ. ದಿ। ಕಾ. ಸು. ರಾಮಚಂದ್ರ ಅವರ ಎರಡು ಕವಿತೆಗಳಿಂದ ಆರಂಭವಾದ ಈ ಸಂಕಲನದಲ್ಲಿ ರಾಮಚಂದ್ರರು ಅತ್ಯುತ್ತಮ ಕವಿಯಾಗಬಹುದಾಗಿತ್ತು ಎಂದು ತೋರಿಸುವ ಮೊದಲೆ ತೀರಿಹೋಗಿದ್ದಾರೆ. ಭಯಾನಕತೆಯ ಹಲವು ಮಜಲುಗಳನ್ನು, ಸೂಕ್ಷ್ಮ ಅಭಿವ್ಯಕ್ತಿಯಲ್ಲಿ ಚಿತ್ರಿಸುವ ರಾಮಚಂದ್ರರ ಕವಿತೆಗಳ ಸ್ಯಾಂಪಲ್ಲು ನೋಡಬಹುದು :

> ಕಾರ್ತಿಕ ಮಾಸದ ಕಪ್ಪುರಾತ್ರಿ
> ಕೆಂಪು ತೋಟದಲ್ಲಿ ಸಂಪು ಹೂಡಿದ ಮಹಾಮೌನ.
>
> (ಮೌನ)
>
> ಸತ್ತ ಸೂರ್ಯನ ಸುತ್ತ ಕಪ್ಪುಬಾವಲಿಗಳ ರೆಕ್ಕೆ ಬಡಿತ
> ಬೆಳಕು ಮೋಡಗಳ ಮೇಲೆ ರಣಹದ್ದುಗಳ ತುಳಿತ
> ....
> ಕಣ್ಣು ರೆಪ್ಪೆಗಳ ಮೇಲೆ ಸದಾ ಹೆಪ್ಪುಗಟ್ಟುವ ಕಪ್ಪುರಾತ್ರಿ
>
> (ಅಂಧವೃಕ್ಷದ ಅಡಿಯಲ್ಲಿ)

ಕಪ್ಪುರಾತ್ರಿಯ ಭಯಾನಕ ಲೋಕದ ಚಿತ್ರಣ ಮೂಡಿ ಬಂದುದು, ಮತ್ತು ರಾಮಚಂದ್ರರ ಸಾವು ತೀರ ಆಕಸ್ಮಿಕ ಇದ್ದರೂ ವಿಹ್ವಲಗೊಳಿಸುವ ಬರವಣಿಗೆ ಅಪರೂಪದ್ದು. ಅಬ್ದುಲ್ ರಶೀದರ 'ಬಲಿ' ಇನ್ನೊಂದು ಯಶಸ್ವಿ ಕವಿತೆ ಒಂದು ಸಾವು, ತಂಗಿಯ 'ಸಿಖಾ' ಮಾತುಕತೆ, ಮತ್ತು ಕೋಳಿಯ ಬಲಿ ಹೀಗೆ ಒಂದೇ ಬಾರಿಗೆ ಮೂರು ಮಟ್ಟದಲ್ಲಿ ಒಟ್ಟು ಕ್ರೂರ ವ್ಯವಸ್ಥೆಯನ್ನು, ಚಿತ್ರಿಸುವದು, ಒಂದಕ್ಕೊಂದು ತಳಕು ಹಾಕಿಕೊಂಡು ಪೂರಕವಾಗಿ ಕವಿತೆ ಬೆಳೆಯುವದು ಕವಿತೆಯನ್ನು ಸಾರ್ಥಕ ಮಾಡಿದೆ ಎಲ್ಲ ಕವಿಗಳು ಕಡ್ಡಾಯವಾಗಿ ಗಾಂಧಿಯ ಮೇಲೆ ಕವಿತೆ ಬರೆಯುವಷ್ಟು 'ಆಕರ್ಷಕ' ವಸ್ತು ಗಾಂಧಿಯಾಗಿದ್ದರೂ. ಬೇರೆ ಬೇರೆ ಕಾಲಘಟ್ಟದಲ್ಲಿ ಒಬ್ಬೊಬ್ಬ ಕವಿ ಅದೇ ಗಾಂಧಿಯ ಹೊಸ ಹೊಸ ಆಯಾಮದಲ್ಲಿ ನೋಡಲು

ಸಾಧ್ಯ ಎಂಬುದಕ್ಕೆ ಬಸವರಾಜ ವಕ್ಕುಂದರ 'ಅಕ್ಟೋಬರ್ ೨ ಮತ್ತು ವಿಶ್ವರೂಪ ದರ್ಶನ' ಕವಿತೆ ನೋಡಬಹುದು.

ಹತ್ತು ತಲೆ ರಾವಣರ ಇಪ್ಪತ್ತು ತೋಳುಗಳಲ್ಲಿ
ಸಹಸ್ರ ಸೀತೆಯರು ಬಿಕ್ಕಳಿಸುವದ ಕಂಡೆ
ಪೋಲಿಸರ ಖಾಕಿ ಪ್ಯಾಂಟುಗಳ ಮೇಲೆ
ನೆತ್ತರ ಪ್ರಪಂಚಗಳ
ಕವುಟು ಕಲೆಗಳ ಕಂಡೆ.

ಚಿಂತಾಮಣಿ ಕೊಡ್ಲೆಕೆರೆ, ಅವರು ಕವಿತೆಯ ಲಯದ ಮೇಲೆ ಹೆಚ್ಚು ಹಿಡಿತ ಸಾಧಿಸಿದವರು. ತಮ್ಮ ಸ್ವಾನುಭವಗಳಿಗೆ ಸಹಜವಾದ ಭಾಷೆಯ ಅಲಂಗಾರಿಕೆ ತುಂಬುವದಕ್ಕೆ 'ಈಗ ಅವರಿಲ್ಲ' ಕವನದಲ್ಲಿ ನೋಡಬಹುದು. ವಿದ್ಯಾ ಭರತನ ಹಳ್ಳಿಯವರ 'ಅವಸ್ಥೆ' ಇಲ್ಲಿಯ ಇನ್ನೊಂದು ಉತ್ತಮ ಕವಿತೆ :

ಈ ಇಳಿಯ ಹದಿನಾರು ವರುಷಗಳ
ವೈಶಾಖ ಪಡೆದು ಪುಷ್ಟಿಯರಾಗಿರಲು
ವಸಂತ ನನ್ನತ್ತ ನೋಡಿ ಹಲ್ಕಿರಿದಾಗ
ಮೈ ಮನದಲ್ಲಿ ಗೊಮ್ಮಟನ ನೆನಪು.

ನೆಲದ ಸಹಜ ಸಂಬಂಧ, ಬೆಳೆದ ಗಿಡದಕ್ಕಿ, ಬರುವ ವಸಂತ, 'ಮೈ ಮನದಲ್ಲಿ ಗೊಮ್ಮಟನ ನೆನಪು' ಇತ್ಯಾದಿ ಹೆಚ್ಚು ಆರೋಗ್ಯಕರ ಬರವಣಿಗೆಗಳು. ಕಾರಣ : ಇಲ್ಲದ ಅನುಭವ, ಅನಿಸಿಕೆಗಳ 'ಬಲಾತ್ಕಾರಕ್ಕೆ' ಬಲಿಯಾಗುವ ಇಂದಿನ ಹಲವು ಹೊಸ ಕವಿಗಳ ಕಾವ್ಯಕ್ಕೆ ಈ ಎಚ್ಚರ ಬಹುಮುಖ್ಯ. ಈ ಅವಸ್ಥೆಯನ್ನು ಹೆಚ್ಚು ಸಂಯಮದಿಂದ ದಾಟಿದಾಗ ಮಾತ್ರ ವಿಮರ್ಶೆ ದಕ್ಕಿಸಿಕೊಳ್ಳುವ ಕಾವ್ಯ ಹುಟ್ಟುವದು.

●

ರಕ್ತದ ಹೊಳೆ ಬೆಂಕಿಯ ಮಳೆ ಕವನ ಸಂಕಲನದ ಹೆಸರು ಸಂಕಲನದ ಹಲವು ಘೋರಣೆಗಳನ್ನು ಪ್ರತಿಪಾದಿಸುವಂಥದು. ಉತ್ತರ ಕರ್ನಾಟಕದ ಭಾಷೆಯ ಬೀಸು, ದಿಟ್ಟವಾಗಿ ಅನುಭವವನ್ನು ಒಂದು ರೀತಿಯಲ್ಲಿ ಹೆಚ್ಚು ಕಟುವಾಗಿ ಹೇಳುವ ಬಹಳಷ್ಟು ಕವನಗಳು ಇಲ್ಲಿವೆ. ಈ ಆಕ್ರೋಶವನ್ನು ಮಿಕ್ಕಿ ಹರಳುಗಟ್ಟುವ ಕಾವ್ಯ ಅಭಿವ್ಯಕ್ತಿಯ ಮೇಲೆ ಸಾಧಿಸುವ ಸಂಯಮದಿಂದ ಬರುವಂಥವಾದರೂ ನವ್ಯದ ಕಾವ್ಯದ ಅಚ್ಚು ಹೆಚ್ಚು ತೀವ್ರವಾಗಿ ಇಲ್ಲಿಯ ಎಲ್ಲ ಕವಿಗಳ ರಚನೆಯಲ್ಲಿ ನೋಡಬಹುದು.

ನಮ್ಮ ಹಸಿದ ಹೊಟ್ಟೆ ಮ್ಯಾಗ
ಸಿಮೆಂಟಿನ ಪಾಯಿಂಖಾನೆ ಕಟ್ಟಿ
ಬಂದು ಬಂದು ಉಚ್ಚೆ ಹೊಯ್ದು
ಗೊಂಚಲ ಗೊಂಚಲ ಹೇತು
.... (ಒದ್ದೊಡ್ಡಸರ್ಲ್ಲೆ ಈ ಮಕ್ಕಳ್)

ಕಾಲಾಗಿದ್ದ
ಹರ್ಕ ಮುರ್ಕ ಕೆರವ ಕಿತ್ತಿ
ನಿಮ್ಮ ಮುಖದ ಮ್ಯಾಲೆ
ಹೊಡಿತೀವಿ (ಹೊಡಿತೀವಿ)

ಯಲ್ಲಣ್ಣ ಇಲ್ಯಾಳರ ಇವೆರಡು ಕವಿತೆಗಳು ಒಂದು ರೀತಿಯಲ್ಲಿ ತಮ್ಮ ಸಿಟ್ಟನ್ನು ನೇರವಾಗಿ ಒಂದೇ ಓದಿಗೆ ಮುಗಿದುಬಿಡುವಂತೆ ತೋಡಿಕೊಂಡರೆ, ಕವಿಗಳಾದ ಅಂಬಾದಾಸ ವಡೆ ಮತ್ತು ವೀರೇಂದ್ರ ಶೀಲವಂತರು ತಮ್ಮ ರೊಚ್ಚನ್ನು, ಕಲಾತ್ಮಕವಾಗಿ ಸ್ಫೋಟಿಸುತ್ತಾರೆ, 'ತೆರೆದು ಕಾಸು ಪಡೆದು ನೋವನ್ನೀಯುವಳು, ತಲೆಮೇಲೆ ಅತ್ತು ನಗದ ದೇವತೆಗಳು, (ತಿಜೋರಿ ಮೇಲೊಂದು ಕವಿತೆ) ಎಂದು ಅಂಬಾದಾಸ ವಡೆ ಹೆಣ್ಣು ಸೂಳೆಯಾಗಿ ಮೈ ಮಾರಿದರು, ತಲೆ ಮೇಲೆ ಕುಳಿತ ದೇವಿಗೆ ಶರಣು ಹೋದ ನೀಚತೆ, ಕಟುಸತ್ಯವನ್ನು ಸ್ಫುಟವಾಗಿ ಹೇಳಿದ್ದಾರೆ. ಶೀಲವಂತರ 'ಗ್ರಾಮಾಯಣ' ಇನ್ನೊಂದು ಉತ್ತಮ ರಚನೆ. ಒಂದು ಹಳ್ಳಿಯ ಬದುಕಿನ ಹಲವು ಬೆಚ್ಚಗಿನ ಮಗ್ಗಲುಗಳನ್ನು ಬಿಡಿಸುತ್ತ ಬಿಡಿಸುತ್ತ ರಾಮಾಯಣ ಮಹಾಭಾರತದ ಚಿಕ್ಕ ಚಿಕ್ಕ ಚಿತ್ರಗಳು ಮನುಷ್ಯ ಪ್ರವೃತ್ತಿ ಸಹಜದಲ್ಲಿ ಮತ್ತೆ ಮತ್ತೆ ನಮ್ಮಲ್ಲಿ ಇರುವದನ್ನು ಸರಳತೆಯಲ್ಲಿ ಕಾವ್ಯವಾಗಿಸಿದ್ದಾರೆ. ಬಿ. ಎನ್. ಅಕ್ಕಿ, ಗಿರಿಜಾ ಅಣೆಪ್ಪವರ ಮುಂತಾದವರು ಇನ್ನು ಹೆಚ್ಚು ಪರಿಶ್ರಮ ಪಟ್ಟರೆ ಭರವಸೆ ಕೊಡುವಂಥವರು.

●

ಕನ್ನಡ ಸಾಹಿತ್ಯ ಅಕಾಡಮಿ ಅವರು ೧೯೮೧ರಲ್ಲಿ ಉದಯೋನ್ಮುಖ ಕವಿಗಳಿಗಾಗಿ ಏರ್ಪಡಿಸಿದ್ದ 'ಕಾವ್ಯ ಕಮ್ಮಟ'ದ ಹದಿಮೂರು ಕವಿಗಳ ಕವನ ಸಂಗ್ರಹ **ಕಮ್ಮಟದ ಕವಿತೆಗಳು**. ತೀರ ಪ್ರಾಥಮಿಕಾವಸ್ಥೆಯಲ್ಲಿ ರಚಿಸಿದ ಇಲ್ಲಿಯ ಬಹುತೇಕ ಕವಿತೆಗಳಲ್ಲಿ ಯಾವ ಪರಿಶ್ರಮವಾಗಲಿ ಮಹತ್ವಾಕಾಂಕ್ಷೆಯಾಗಲಿ ಇಲ್ಲ. ಸಂಪಾದಕ ಚೊಕ್ಕಮೂರ್ತಿ ಪಾಟೀಲ, ಸಿ. ಎಂ. ಚೆನ್ನಬಸಪ್ಪ, ವೀಣಾ ಮೈಸೂರ್, ಬಾ. ಹ. ರಮಾಕುಮಾರಿ, ಅಶೋಕ ಹಾಸ್ಯಗಾರ ಈ ಸಂಕಲನದ ಹೆಸರಿಸ ಬಹುದಾದ ಕವಿಗಳು. ಪಾಟೀಲರ 'ನಾನು ಕೊಲೆಯಾಗುತ್ತಿರುತ್ತೇನೆ' ಒಂದು ಉತ್ತಮ ಕವಿತೆ. ಈ ದೇಶದ

ಪ್ರಜ್ಞಾವಂತ ನಿತ್ಯ ಒಂದಿಲ್ಲ ಒಂದು ರೀತಿ ವ್ಯವಸ್ಥೆಯ ಕಾಲಲ್ಲಿ ಸಿಕ್ಕು ಸಾಯುವದು, ಮುರುಟುವದು, ಬದುಕುವದು ಇಲ್ಲಿ ಹಲವು ರೀತಿಯಲ್ಲಿ ಗುರುತಿಸಿ ಕೊಂಡಿದ್ದಾರೆ. ಸಂಕಲನದಲ್ಲಿ ತೀರ ಎಳಸು ಎಳಸಾದ ರಚನೆಗಳಿದ್ದರೂ ನವ್ಯದ ತೀರ ಸಂಕೀರ್ಣ ಭಾಷೆಯ ಗೊಂದಲವಾಗಲಿ ಬಂಡಾಯ-ದಲಿತದ ಅತಿ ಆಕ್ರೋಶವಾಗಲಿ ಇದ್ದಿರದೇ ಅಭಿವ್ಯಕ್ತಿಯ ಸರಳತೆ, ಕವಿತೆ ಕಟ್ಟುವ ಕಲೆಗಾರಿಕೆ ಇಲ್ಲಿ ಅಲ್ಲಲ್ಲಿ ಕಂಡು ಬರುವ ವಿಶೇಷ ಗುಣ.

ಸತೀಶ ಕುಲಕರ್ಣಿ

ಎಂ. ಸಿದ್ದಯ್ಯ

ಗಾಂಧಿ ಮತ್ತು ಸಾಹುಕಾರ

ರಾತ್ರಿ
ನಮ್ಮೂರಿನ ಸಾಹುಕಾರನ
ಮನೆಯ ಜಗುಲಿಯ ಮೇಲೆ

ಅರೆ ಚಿತ್ತಲೆಯ ಕೆಲಸದಾಳುಗಳು
ಮಬ್ಬುಗಾರಿನ ಹನಿಯಲ್ಲಿ ಅರೆ ಬೆಂದ ಅನ್ನ ತಿನ್ನುತ್ತಿರುವ
ಬರಿಮೈನ ಮಕ್ಕಳು
ಕುಪ್ಪಸ ವಿಲ್ಲದ ಕಪ್ಪು ತೊಗಲಿನ ಹೆಣ್ಣುಗಳು
ಈಚಲ ಮರದ ಬೆರಕೆ ಹೆಂಡ ಗುಟುಕರಿಸಿ
ಮೂಲೆಯಲ್ಲಿ ಮುದುಡಿರುವ ನರಕತ್ತರಿಸಿದ ಗಂಡುಗಳು

ಇವೆಲ್ಲಾ ತನ್ನ ಆಸ್ತಿಯೆಂದು
ಸಾಹುಕಾರ
ನಿತ್ಯವು ಗಾಂಧಿ ಫೋಟೋಕ್ಕೆ
ಊದುಬತ್ತಿಯ ಹೊಗೆ
ಹಾಕಿ ಕೈಮುಗಿಯುತ್ತಾನೆ.

ಮೂರು ಜಾನಪದ ಸಾಹಿತ್ಯ ಕೃತಿಗಳು

ಪುಸ್ತಕ ವಿಮರ್ಶೆ

೧. ಜನಪದ ಸಾಹಿತ್ಯ ರೂಪಗಳು : ರಾಗೌ
೨. ಜಾನಪದ ಜಯಂತಿ : ನಿಂಗಣ್ಣ ಸಣ್ಣಕ್ಕಿ
೩. ದೊಂಬರ ಮಂದಾಲ್ಸಿ ಪದಗಳು : ಎಚ್. ಎಂ. ಮಹೇಶ್ವರಯ್ಯ, ಮುರಿಗೆಪ್ಪ

●

ರಾಗೌ ಬರೆದ ಐದು ಪ್ರಬುದ್ಧ ಲೇಖನಗಳ ಸಂಕಲನ– **ಜನಪದ ಸಾಹಿತ್ಯ ರೂಪಗಳು.** ಈ ಲೇಖನಗಳು ಈಗಾಗಲೆ ಬೇರೆಬೇರೆ ಪುಸ್ತಕಗಳ ಪ್ರಸ್ತಾವನೆಯ ರೂಪದಲ್ಲಿ ಪ್ರಕಟವಾಗಿವೆ. ಸ್ಟಿಥ್ ಥಾಂಸನ್‌ರವರ ಹೇಳಿಕೆ–The essential of all Folklore study is collecting & attempting to understand that which has been collected–ಯನ್ನು ರಾಗೌ ಸಾರ್ಥಕಪಡಿಸಿದ್ದಾರೆ ಗಾದೆ, ಒಗಟು, ಕಥೆಗಳನ್ನು ಸಂಗ್ರಹಿಸುವುದರ ಜೊತೆಗೆ ಅವನ್ನು ಅರ್ಥಮಾಡಿಕೊಳ್ಳುವ ಹಾಗೂ ವಿಶ್ಲೇಷಿಸುವ ಪ್ರಯತ್ನ ಮಾಡಿರುವುದು ಈ ಲೇಖನಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಜನಪದ ಗೀತೆ ಎನ್ನುವ ಲೇಖನದಲ್ಲಿ ಜನಪದ ಗೀತೆಗಳು ಜನ್ಮತಾಳಿದ ರೀತಿ ಕುರಿತ ಸಮಸ್ಯೆ ಒಂದು ಸವಾಲಾಗಿ ಪರಿಣಮಿಸಿದೆ ಎನ್ನುತ್ತಾ ಪುರಾತನ ಗೀತೆಗಳು ಪ್ರಾಥಮಿಕ ಆಚರಣೆಯೊಂದರಿಂದ ಹುಟ್ಟಿದ ಸಾಮುದಾಯಿಕ ಚಟುವಟಿಕೆಗಳು; ಸಾಮಾಜಿಕ ಜೀವನದಲ್ಲಿ ಆಚರಣೆಗಳು ಪ್ರಧಾನ ಪಾತ್ರ ವಹಿಸುವ ಕಡೆಯಲ್ಲೆಲ್ಲ ಅವುಗಳ ಪ್ರಮುಖ ಭಾಗವಾಗಿ ಗೀತೆ ಕಾಣಿಸಿಕೊಂಡಿದೆ ಎನ್ನುತ್ತಾರೆ. ಗೀತೆ ಆಚರಣೆಯಲ್ಲಿ ಪ್ರಧಾನಪಾತ್ರ ವಹಿಸಿಕೊಂಡು ಬಂದಿರುವುದನ್ನು ಗಮನಿಸುವಾಗ, ಗೀತೆಯ ಉಗಮವು ಸಾಮೂಹಿಕ ಕ್ರಿಯೆಯಾಗಿ ಹುಟ್ಟಿಬಂದಿದೆ ಎಂಬ ಹೇಳಿಕೆ ಅಷ್ಟು ಸಮಂಜಸವಾದುದಲ್ಲ. ಏಕೆಂದರೆ ಗೀತೆ ಮೊದಲು ವ್ಯಕ್ತಿಯೊಬ್ಬನ ಅಭಿವ್ಯಕ್ತಿಯಾಗಿ, ನಂತರ

ಸಮೂಹದಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಅಲ್ಲದೆ ಜನಪದಗೀತೆ ಛಂದೋಬದ್ಧ ಕ್ರಿಯೆಯಿಂದ ಉದ್ಭವವಾದದ್ದು ಎನ್ನುವ ಮಾತನ್ನೂ ಸಹ ಪುನಃ ಪರಿಶೀಲಿಸಬೇಕಾಗುತ್ತದೆ. ಗೀತೆಯ ಕೆಲವು ಪ್ರಕಾರಗಳು ಹೆಚ್ಚು ಕ್ರಿಯಾತ್ಮಕವಾಗಿ ಉಸಿರಾಟದ ಕ್ರಿಯೆಯೊಡನೆ ಸಂಬಂಧವನ್ನಿರಿಸಿಕೊಂಡರೂ ಅವುಗಳ ಮೂಲರೂಪ ಹೇಗಿತ್ತೆಂಬುದನ್ನು ಊಹಿಸುವುದು ಕಷ್ಟವಾಗುತ್ತದೆ. ಭಾಷೆಯ ಉಗಮವನ್ನು ಕುರಿತು ಕೆಲವು ವಿದ್ವಾಂಸರು 'ಭಾಷೆ ಮೂಲದಲ್ಲಿ ನಾದಯುಕ್ತವಾಗಿತ್ತು' ಎಂದರು. ಆದರೆ ಅದು ಈಗಲೂ ಸಹ ಆಧಾರರಹಿತವಾದ ಊಹೆಯಾಗಿಯೇ ಉಳಿದಿದೆ.

ಸಿ. ಎಂ. ಬೌರಾರವರು ತಮ್ಮ Primitive Songs ಎನ್ನುವ ಪುಸ್ತಕದಲ್ಲಿ ಹೇಳಿರುವ ಜನಪದ ಗೀತೆ ರೂಪಿತವಾದುದು ಅದು ಹುಟ್ಟಿದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಂದಲೇ ಎಂಬ ಅಭಿಪ್ರಾಯವನ್ನು ರಾಗೌರವರು ವಿವರವಾಗಿ ಚರ್ಚಿಸದೆ ಅದನ್ನು ಸಮ್ಮತಿಸಿದ್ದಾರೆ. ಆದರೆ ಈ ಹೇಳಿಕೆ ಕನ್ನಡ ಜನಪದ ಗೀತೆಗಳ ಉಗಮವನ್ನರಿಯುವ ದೃಷ್ಟಿಯಿಂದ ಅಷ್ಟು ಪ್ರಸ್ತುತ ಎನಿಸಲಾರದು. ಗೀತೆಗಳ ಚೌಕಟ್ಟಿನಲ್ಲಿ ಅವು ಹುಟ್ಟಿರಬಹುದಾದ ಆರ್ಥಿಕ ಹಾಗೂ ಸಾಮಾಜಿಕ ಸಂದರ್ಭವನ್ನು ಗುರುತಿಸುವುದು ಕಷ್ಟವಾದಕೆಲಸ. ಪಾಶ್ಚಿಮಾತ್ಯ ವಿದ್ವಾಂಸರ ಹೇಳಿಕೆಗಳು ಎಷ್ಟೋವೇಳೆ ನಮ್ಮ ಸಂದರ್ಭದಲ್ಲಿ ಅಪ್ರಸ್ತುತವಾಗಿ ಕಾಣುತ್ತವೆ. ನಮ್ಮ ವಿವರಣೆಗಳು ಹೆಚ್ಚಾಗಿ ನಮ್ಮ ದತ್ತವನ್ನವಲಂಬಿಸಿರಬೇಕಾಗುತ್ತದೆ.

ಲಾವಣಿ ಎನ್ನುವ ಎರಡನೆಯ ಲೇಖನದಲ್ಲಿ, ಇಂಗ್ಲೀಷಿನ ballad ಮತ್ತು ಕನ್ನಡದ ಲಾವಣಿ ಎರಡೂ ಒಂದೇ ಅರ್ಥವನ್ನು ಸೂಚಿಸುವ ಪದಗಳಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾ ಜರ್ಮನ್, ಫ್ರೆಂಚ್, ಸ್ಪ್ಯಾನಿಷ್, ರಷ್ಯನ್ ಮುಂತಾದ ಭಾಷೆಗಳಲ್ಲಿನ ಪದಗಳನ್ನು ಚರ್ಚಿಸಿದ್ದಾರೆ. ಈ ಸಂವಾದಿಪದಗಳೆಲ್ಲವೂ ಆಯಾ ಭಾಷಿಕ ಸಮೂಹ–ದಲ್ಲಿ ಭಿನ್ನ ಭಿನ್ನ ಅರ್ಥದೊಡನೆ ಬಳಕೆಯಾಗುತ್ತವೆ. ಅಲ್ಲದೆ ಒಂದೇ ಭಾಷಿಕ ಸಮೂಹದಲ್ಲಿ 'ballad'ನ ಕಲ್ಪನೆ ಸಾಕಷ್ಟು ವ್ಯತ್ಯಾಸ ಹೊಂದುತ್ತದೆ. ಲಾವಣಿಯನ್ನು ಭಿನ್ನ ಭಿನ್ನ ಪ್ರಾದೇಶಿಕ ಹಿನ್ನಲೆಯಲ್ಲಿ ಅಭ್ಯಸಿಸಿ ಅದರ ಸ್ವರೂಪ ಮತ್ತು ರಚನೆಯನ್ನು ವಿವರಿಸುವ ಅಗತ್ಯವಿದೆ. ಲಾವಣಿ ರೂಪ (form) ಮತ್ತು ವಿಷಯ (content)ಗಳೆರಡರಲ್ಲೂ ಜನಪದ ಮಾದರಿಯದು ಎಂಬುದನ್ನು ಗಮನಿಸುವ ರಾಗೌ ಅದು ಹೊಸತನ್ನು ಗರ್ಭೀಕರಿಸಿಕೊಂಡು ಹೇಗೆ ತಾನು ಜಾನಪದೀಯವಾಗಿ ಮುಂದುವರಿಯುತ್ತಿದೆ ಎಂಬುದನ್ನು ಚರ್ಚಿಸಬೇಕಿತ್ತು ಎನಿಸುತ್ತದೆ. ಜಾನಪದ ಸಂವಹನದ ಮುಖ್ಯ ಪ್ರಕಾರವಾದ 'ಲಾವಣಿ'ಯನ್ನು ಹೇಗೆ ಸಮೂಹಸಂವಹನದಲ್ಲಿ ಮಾಡಿಸಿಕೊಳ್ಳಬಹುದೆಂಬುದನ್ನು ಚಿಂತಿಸಬೇಕಾಗಿದೆ. ಈ ನಿಟ್ಟಿನಲ್ಲಿ ಲಾವಣಿಯ ಎಲ್ಲ ಸಾಧ್ಯತೆಗಳನ್ನು ಅರಿಯುವ ಅವಶ್ಯಕತೆ ಇದೆ.

ಜನಪದಕಥೆ ಎನ್ನುವ ೪೦ ಪುಟಗಳ ದೀರ್ಘ ಲೇಖನದಲ್ಲಿ ಜಗತ್ತಿನಲ್ಲಿ ನಡೆದ ಜನಪದ ಕಥೆಗಳ ಅಧ್ಯಯನದ ಇತಿಹಾಸ, ಹಾಗೂ ಕಥೆಗಳ ಸ್ವರೂಪವನ್ನು ಕುರಿತು ಬರೆದಿದ್ದಾರೆ. ಕಥೆ ಹೇಳುವ ಹಾಗೂ ಕೇಳುವ ಕ್ರಿಯೆ ಮಾನವ ಇರುವಲ್ಲೆಲ್ಲಾ ಸಮಾನರೂಪವಾಗಿದೆ. ವಾಚಿಕ ಕಥೆ, ಗ್ರಾಂಥಿಕ ಕಥೆಗಳ ಜೊತೆಗೆ ಪದ್ಯಕಥೆ ಹಾಗೂ ಗದ್ಯಕಥೆಗಳೆಂಬ ಪ್ರಕಾರಗಳಿವೆ. ಸ್ಟಿಥ್ ಥಾಂಸನ್ನವರು 'ದಿ ಫೋಕ್ ಟೇಲ್' ಎಂಬ ಪುಸ್ತಕದಲ್ಲಿ ಮಾಡಿಕೊಂಡಿರುವ ವರ್ಗೀಕರಣ ಹೆಚ್ಚು ಶಾಸ್ತ್ರೀಯವಾಗಿದೆ ಎಂದು ರಾಗೌ ಹೇಳುತ್ತಾರೆ. ಆದರೆ ನಮಗೆ ದೊರೆತಿವ ಕಥೆಗಳ ವರ್ಗೀಕರಣವನ್ನು ನಮ್ಮದೇ ಮಾದರಿಯಲ್ಲಿ ಮಾಡಿಕೊಳ್ಳುವ ಅವಶ್ಯಕತೆ ಇದೆ. ಅಲ್ಲದೇ ಕಥಾಸೂತ್ರ, ಕಥನಕ್ರಿಯೆ ಹಾಗೂ ಕಥಾತಂತ್ರವನ್ನಾಧರಿಸಿ ಕಥೆಯ ವಿಶ್ಲೇಷಣೆ ಮಾಡುವ ಕಾರ್ಯ ಕೈಗೊಳ್ಳಬೇಕಾಗಿದೆ. ಜನಪದ ಕಥೆಗಳ ವಿಶ್ವಸಾಮ್ಯತೆಯನ್ನು ಗುರಿತಿಸುವುದ ರೊಡನೆ ದ್ರಾವಿಡ ಪರಿವಾರದ ಬೇರೆ ಬೇರೆ ಭಾಷೆಗಳ ಕಥೆಗಳನ್ನು ಅಧ್ಯಯನ ಮಾಡಬೇಕಾಗಿದೆ. ಆದರೆ ವಿಶ್ಲೇಷಣೆ, ಸಂಗ್ರಹದ ದೃಷ್ಟಿಯಿಂದ ನಮಗೆ ನೆರೆ ಹೊರೆಯ ಭಾಷೆಗಳು ಹೆಚ್ಚು ಸಾಮಗ್ರಿಯನ್ನೊದಗಿಸುವುದರಿಂದ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ.

ಗಾದೆ ಮತ್ತು **ಒಗಟು** ಎನ್ನುವ ಲೇಖನಗಳಲ್ಲಿ ಅವುಗಳ ಸ್ವರೂಪ ಹಾಗೂ ವ್ಯಾಪ್ತಿ ಯನ್ನು ಕುರಿತು ವಿವರಿಸಿದ್ದಾರೆ, ಗಾದೆಗಳಲ್ಲಿ ಗ್ರಂಥಸ್ಥ ಗಾದೆಗಳು ಹಾಗೂ ಬಾಯಿಂದ ಬಾಯಿಗೆ ಬಂದ ಗಾದೆಗಳೆಂದು ಎರಡು ಪ್ರಕಾರಗಳಾಗಿ ವಿಭಜಿಸಬಹುದು. ಗಾದೆಗಳ ವಸ್ತುವಿನ ವಿಶಾಲತೆಯ ಬಗ್ಗೆ ಅವುಗಳು ರೂಪ ತಾಳಿದ ಹಿನ್ನೆಲೆಯ ಬಗ್ಗೆ ಚರ್ಚಿಸಲಾಗಿದೆ, ಗಾದೆ ಹಾಗೂ ಒಗಟುಗಳು ಹೇಗೆ ಅನುಭವ ಮತ್ತು ಬುದ್ಧಿ ಪ್ರಧಾನವಾದವುಗಳೆಂಬುದನ್ನು ವಿವರವಾಗಿ ಚರ್ಚಿಸಿದ್ದಾರೆ ಕನ್ನಡದಲ್ಲಿ ಲಭ್ಯ ವಿರುವ ಅನೇಕ ಉದಾಹರಣೆಗಳ ಮೂಲಕ ಗಾದೆ ಹಾಗೂ ಒಗಟುಗಳ ಅರ್ಥವ್ಯಾಪ್ತಿ ಯನ್ನು ಗುರುತಿಸಿದ್ದಾರೆ ಆದರೆ ಈ ಲೇಖನಗಳಲ್ಲಿ ನನಗೆ ಕಂಡ ಕೊರತೆ ಎಂದರೆ ಗಾದೆ ಹಾಗೂ ಒಗಟುಗಳ ಭಾಷಾ ಸ್ವರೂಪವನ್ನು ಗಮನಿಸದೇ ಇರುವುದು. ಗಾದೆ ಹಾಗೂ ಒಗಟುಗಳಲ್ಲಿ ಭಾಷೆಯ ವಿಶಿಷ್ಟ ಬಳಕೆಯಾಗುವುದರಿಂದ ಅವುಗಳ ವಿವರಣಾ ತ್ಮಕ ಅಧ್ಯಯನವನ್ನು ಮಾಡಬೇಕು. ಒಂದು ಭಾಷೆಯ ವಿಶಿಷ್ಟರೂಪಗಳೆನಿಸಿ ಕೊಂಡಿರುವ ಗಾದೆ ಹಾಗೂ ಒಗಟುಗಳು, ಭಾಷಿಕವಾಗಿ ಹೇಗೆ ಭಿನ್ನ ಭಿನ್ನ ರಚನೆ ಗಳನ್ನು ಪಡೆದಿವೆ ಎಂಬುದನ್ನು ಅರಿಯುವುದು ಮುಖ್ಯವಾಗುತ್ತದೆ. ಗಾದೆ ಮತ್ತು ಒಗಟುಗಳ ಅರ್ಥವ್ಯಾಪ್ತಿಯನ್ನು ಗಮನಿಸುವುದರ ಜೊತೆಗೆ ಒಳಗೊಂಡಿರುವ ಧ್ವನಿ ಮೊತ್ತಗಳ ಅಧ್ಯಯನವೂ ಅಷ್ಟೇ ಕುತೂಹಲಕಾರಿ ಎನಿಸುತ್ತದೆ. ಈ ದೃಷ್ಟಿ ಯಿಂದಲೇ ಆರ್. ಎಸ್. ಭಾಗ್ಯರವರು ಒಗಟು ಮತ್ತು ಗಾದೆಗಳನ್ನು ಭಾಷಿಕ ಬಗೆಯಲ್ಲಿ ಸೇರಿಸಿದ್ದಾರೆ, ಈ ದಿಸೆಯಲ್ಲಿ ಅಧ್ಯಯನ ನಡೆಯಬೇಕಾಗಿದೆ,

ಒಟ್ಟಿನಲ್ಲಿ ರಾಗೌರವರ **ಜನಪದ ಸಾಹಿತ್ಯ ರೂಪಗಳು** ಎನ್ನುವ ಗ್ರಂಥ ಅನೇಕ ಕೊರತೆಗಳನ್ನು ತುಂಬಿಕೊಂಡೂ ಕನ್ನಡದಲ್ಲಿ ಈಪರೆಗೆ ಜನಪದ ಅಧ್ಯಯನಕ್ಕೆ ಸಂಬಂಧಿಸಿ ಹೊರಬಂದ ಕೃತಿಗಳಲ್ಲಿ ಗಮನಾರ್ಹ ಕೃತಿಯಾಗಿದೆ ಎಂಬುದನ್ನು ಅದನ್ನೋದಿದವರಿಗೆ ಅನ್ನಿಸದೇ ಇರದು.

ಮಹಿಮ

●

ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಸಂಗ್ರಹ-ಸಂಪಾದನೆ ಅಧ್ಯಯನದಲ್ಲಿ ತೊಡಗಿ ಈಗಾಗಲೇ ಹತ್ತು ಕೃತಿಗಳನ್ನು ಹೊರತಂದಿರುವ ನಿಂಗಣ್ಣ ಸಣ್ಣಕ್ಕಿಯವರ **ಜಾನಪದ ಜಯಂತಿ**ಯಲ್ಲಿ ಜಾನಪದದ ವಿವಿಧ ವಿಷಯಗಳನ್ನು ಕುರಿತ ಹತ್ತು ಲೇಖನಗಳಿವೆ. ಆರಂಭದಲ್ಲಿರುವ ಗೊಂದಲಿಗರು, ಬುಡುಬುಡುಕಿ ಸಾಹಿತ್ಯ, ವೇಷಗಾರರು-ಎಂಬ ಮೂರು ಲೇಖನಗಳಲ್ಲಿ ಅವರು ವಾಸಮಾಡುವ ಪ್ರದೇಶ, ಆಡುವ ಭಾಷೆ, ವೇಷಭೂಷಣ. ಕಲೆ ಸಂಸ್ಕೃತಿ, ಸಾಹಿತ್ಯ-ಮೊದಲಾದವುಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಜನಾಂಗಗಳನ್ನು ಕುರಿತ ಈ ಲೇಖನಗಳಲ್ಲಿ ಅವರ ಬದುಕನ್ನು ವಿಶ್ಲೇಷಿಸುವಾಗ ಪ್ರಾಚೀನ ಕೃತಿಗಳಿಂದ ಇವುಗಳಿಗೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿರುವ ರೀತಿಯೂ ಸಮಂಜಸವಾಗಿದೆ. ಈ ದೃಷ್ಟಿಯಿಂದ ಈ ಬರಹಗಳಲ್ಲಿ ಹೊಸ ವಿಷಯಗಳಿವೆ. ಅಧ್ಯಯನದ ಹಿನ್ನೆಲೆಯಲ್ಲಿ ಹೆಚ್ಚು ಕ್ರಮವೂ ಇದೆ. 'ಕನ್ನಡ ರಂಗಭೂಮಿಗೆ ಜಾನಪದ ನಾಟಕಗಳ ಕೊಡುಗೆ' 'ಕನ್ನಡದ ದೊಡ್ಡಾಟ'-ಜಾನಪದ ರಂಗ ಪ್ರಕಾರಗಳನ್ನು ಕುರಿತ ಈ ಎರಡು ಪ್ರಬಂಧಗಳಲ್ಲಿ ಉತ್ತರ ಕರ್ನಾಟಕದ ವಿವಿಧ ಮೇಳಗಳನ್ನು ಕುರಿತ ಸಾಕಷ್ಟು ಮಾಹಿತಿ ಇದೆ. ಸಂಗ್ರಹಿತ ಮಾಹಿತಿಯನ್ನು ಕ್ರಮಬದ್ಧ ರೀತಿಯಲ್ಲಿ ಜೋಡಿಸಿ ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದ್ದರೆ ಈ ಪ್ರಬಂಧಗಳಿಗೆ ಹೆಚ್ಚು ಮೌಲಿಕತೆ ಬರುತ್ತಿತ್ತು. 'ಜನಪದ ಕಥೆಗಳಲ್ಲಿ ಮೈತ್ರಿ ಮತ್ತು ದ್ರೋಹ' 'ಬೆಳಗಾಂ ಜಿಲ್ಲೆಯ ಜನಪದ ಹಾಡುಗಳು' 'ಡಾ. ಬೆಟಗೇರಿ ಕೃಷ್ಣಶರ್ಮರ ಜಾನಪದ ಕಾರ್ಯ'-ಇವು ಆಯಾ ವಿಷಯಗಳ ಸಾಮಾನ್ಯ ಪರಿಚಯವನ್ನು ಒಳಗೊಂಡಿವೆ. 'ಜಾನಪದ ಜಗಲಿ' ಸಾಂಸ್ಕೃತಿಕ ಮೌಲ್ಯವನ್ನು ಎತ್ತಿಹಿಡಿಯುವ ಉಪಯುಕ್ತ ಲೇಖನ. ಆದರೆ 'ಜಾನಪದ ಸಾಹಿತ್ಯದ ಸಾರ್ವಕಾಲಿಕ ಮೌಲ್ಯಗಳು' ಎಂಬುದು ಅಪರಿಪೂರ್ಣವಾದದ್ದು. ಯಾಕೆಂದರೆ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಒಳಗೊಳ್ಳುವಂಥ ಶೀರ್ಷಿಕೆಯನ್ನು ದೊಡ್ಡದಾಗಿ ಹಾಕಿಕೊಂಡು ಸಾರ್ವತ್ರಿಕ ಮೌಲ್ಯಗಳನ್ನು ಗುರ್ತಿಸಿರುವುದು ಗಾದೆ ಮತ್ತು ಹಾಡುಗಳಲ್ಲಿ ಮಾತ್ರ. ಹಾಗಾದರೆ ಲೇಖಕರ ಪ್ರಕಾರ 'ಜಾನಪದ ಸಾಹಿತ್ಯ' ಅಂದರೆ ಈ ಎರಡು ಪ್ರಕಾರಗಳೇನೆ ? ಜನಪದ ಕಥೆ, ಒಗಟು, ಒಡಪು, ಆಚರಣೆ, ನಂಬಿಕೆ ಇವುಗಳಲ್ಲಿಯ ಸಾರ್ವತ್ರಿಕ ಮೌಲ್ಯಗಳನ್ನು ಯಾಕೆ ಗುರ್ತಿಸಲಿಲ್ಲ ? ಗುರ್ತಿಸಿ

ರುವ ಪ್ರಕಾರಗಳಲ್ಲಾದರೂ (ಗಾದೆ ಮತ್ತು ಹಾಡುಗಳು) ಮೌಲ್ಯಗಳ ವ್ಯಾಪಕ ಅಧ್ಯಯನ ಕಂಡುಬರದೆ ಜಾನಪದ ಸಂಗ್ರಹಣೆಯ ಆರಂಭದ ದಿನಗಳಲ್ಲಿ ಜಾನಪದದ ಬಗೆಗೆ ಅದರ ಪ್ರಕಾರಗಳ ಬಗೆಗೆ ಕಂಡುಬಂದ ಆವೇಶಪೂರಿತ ವಿವರಣೆ ರಸವಿಮರ್ಶೆ-ಅಬ್ಬರದ ಕಾಳಜಿಗಳು–ವಿಪುಲವಾಗಿವೆಯೋ ಹೊರತು ಸಾರ್ವತ್ರಿಕ ಮೌಲ್ಯಗಳ ನಿಜವಾದ ಅಧ್ಯಯನ ನಡೆದೇ ಇಲ್ಲ.

ಕೃತಿಯ ಬರಹಗಳನ್ನು ಓದಿದ ಮೇಲೆ ಇವುಗಳಿಗೆ ಅನ್ವಯಿಸಿ ಹೇಳುವಂಥ ಇನ್ನೊ ಒಂದು ಮಾತಿದೆ: ಜಾನಪದ ಸಂಗ್ರಹ-ಸಂಪಾದನೆ–ಅಧ್ಯಯನಗಳು ತುಂಬ ವಿಸ್ತೃತ ವಾಗಿ ನಡೆಯುತ್ತಿರುವ ಈ ಸಂದರ್ಭದಲ್ಲೂ ಅನೇಕರಲ್ಲಿ 'ಜಾನಪದ' ಪರಿಕಲ್ಪನೆಗಳ ಬಗೆಗೆ ಒಮ್ಮತದ ಅಭಿಪ್ರಾಯವಿಲ್ಲ, ಇಂಥ ವೈರುಧ್ಯಗಳು–ದ್ವಂದ್ವಗಳು ಈ ಕೃತಿ ಕಾರರಲ್ಲೂ ಕಂಡುಬರುತ್ತವೆ. ಮಾನವನ ಇಡೀ ಬದುಕನ್ನು ಅಭಿವ್ಯಕ್ತಿಸುವ ವಿಶಾಲ ಅರ್ಥವನ್ನು ಒಳಗೊಂಡ 'ಫೋಕ್ಲೋರ್' ಗೆ ಸಂವಾದಿಯಾದ 'ಜಾನಪದ' ಎಂಬ ಶಬ್ದವನ್ನು–ಇದರ ಒಂದು ಶಾಖೆಯನ್ನು, ಕುರಿತು ಹೇಳುವಾಗ ಬಳಸುವ 'ಫೋಕ್' ಗೆ ಸಂವಾದಿಯಾದ 'ಜನಪದ' ಎಂಬ ಶಬ್ದಗಳ ಅರ್ಥವನ್ನು ಸರಿಯಾಗಿ ಗ್ರಹಿಸದೆ ಜನಪದ ಸಾಹಿತ್ಯ ಎಂದು ಹೇಳುವ ಕಡೆ 'ಜಾನಪದ ಸಾಹಿತ್ಯ' ಎಂದೂ ಜನಪದ ಹಾಡುಗಳು ಎಂದು ಹೇಳುವಾಗ 'ಜಾನಪದ ಹಾಡುಗಳು' ಎಂದೂ ಬಳಸಿರುವು ದುಂಟು. ಇಂಥ ಸಂದರ್ಭಗಳಲ್ಲಿ ಜಾನಪದ ಸಿದ್ಧಾಂತಗಳ ಬಗೆಗೆ–ಪರಿಕಲ್ಪನೆಗಳ ಬಗೆಗೆ ಹೆಚ್ಚಿನ ತಿಳಿವಳಿಕೆ ಮತ್ತು ಖಚಿತತೆ ಹೊಂದಿ ಈ ಬಗೆಗೆ ಒಂದು ನಿರ್ಧಾರಕ್ಕೆ ಬರಬೇಕಾದುದು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರ ಆದ್ಯ ಕರ್ತವ್ಯ ಎಂಬುದನ್ನು ನಾವು ಮರೆಯಬಾರದು. ಜಾನಪದದ ಕೆಲವು ವಿಷಯ ಗಳನ್ನು ಕುರಿತು ಅಧ್ಯಯನಿಸುವಾಗ ವಿಷಯಗಳನ್ನು ಸಂಗ್ರಹಿಸಿ ಜೋಡಿಸುವಲ್ಲಿ ಒಂದು ರೀತಿ ಕ್ರಮಬದ್ಧತೆಇದೆ. ಅಂಥ ಕಡೆ ನಿಂಗಣ್ಣ ಸಣ್ಣಕ್ಕಿಯವರ ಪ್ರಾಮಾಣಿಕತೆ ಯನ್ನು ಅಲ್ಲಗಳೆಯುವಂತಿಲ್ಲ. ಆದರೆ ಕೃತಿಯುದ್ದಕ್ಕೂ ಇಂಥ ಜಾಗರೂಕತೆ ಯನ್ನು ವಹಿಸಿದ್ದರೆ ಕೃತಿಯ ಮೌಲ್ಯ ಹೆಚ್ಚುತ್ತಿತ್ತು, ಕೃತಿಕಾರರ ಶ್ರಮವೂ ಸಾರ್ಥಕವಾಗುತ್ತಿತ್ತು.

ದೊಂಬರ ಮುದಾಲ್ಸಿ ಪದಗಳು ಅಲೆಮಾರಿ ಜನಾಂಗದ ಹಾಡುಗಳನ್ನು ಕುರಿತದ್ದು: ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಂಡುಬರುವ ಅಲೆಮಾರಿ ಜನಾಂಗದೊಂಬರು. ಶಕ್ತಿದೇವರು ಹಾಗೂ ಹನುಮಂತಇವರು ಆರಾಧಿಸುವದೇವರು ಗಳು, ಇವರು ಶಕ್ತಿಯುತವಾದ ವ್ಯಾಯಾಮಗಳನ್ನು ಪ್ರದರ್ಶಿಸುತ್ತಾರೆ. ಶಕ್ತಿಪ್ರದ ರ್ಶನ ಕಲೆಗಳಲ್ಲಿ ಹೆಸರಾದಂತೆ ಮಾಟ ಮಂತ್ರಗಳಲ್ಲೂ ಇವರು ಹೆಸರಾಗಿದ್ದಾರೆ. ಇವರ ಆಚರಣೆಗಳಲ್ಲಿ 'ದೊಂಬರ ಹಬ್ಬ' ಎಂಬುದು ವಿಶಿಷ್ಟವಾದುದು. ಈ ಆಚರಣೆಗೆ

ಚಾರಿತ್ರಿಕ ಹಿನ್ನೆಲೆ ಇದೆ. ದೊಂಬರು ಕುಮಾರರಾಮನ ಚಿಕ್ಕತಾಯಿ ರತ್ನಮ್ಮಾಜಿಯ ವಂಶದವರೆಂದು ಹೇಳಿಕೊಳ್ಳುತ್ತಾರೆ. ಕುಮಾರರಾಮನ ಮಲತಾಯಿಯಾದ ರತ್ನಮ್ಮಾಜಿಯು ಆತನಿಂದ ತನ್ನ ಕಾಮತೃಷೆಯನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿ ವಿಫಲಳಾದಳು. ಅದರ ಪ್ರತೀಕಾರವಾಗಿ ಕುಮಾರರಾಮನನ್ನು ಕೊಲ್ಲಿಸುವ ಹಂಚಿಕೆ ಮಾಡಿದಳು. ಆಗ ಚತುರನಾದ ಮಂತ್ರಿಯ ಬುದ್ಧಿವಂತಿಕೆಯಿಂದ ಕುಮಾರ ರಾಮನು ಪಾರಾಗಿ 'ಹೋಲಿಕೆ ರಾಮನು' ತನ್ನ ತಲೆ ಕೊಟ್ಟನು. ಅವನು ಸಾಯುವಾಗ "ಕುಮಾರ ರಾಮನ ಮೇಲೆ ಅನ್ಯಾಯದ ಆಪಾದನೆ ಮಾಡಿ ನನ್ನನ್ನು ಸಾಯಿಸುತ್ತಿರುವ ನಿನ್ನ ವಂಶದಲ್ಲಿ ಗಂಡುಮಕ್ಕಳೇ ಆಗದಿರಲಿ ಹಾಗೂ ವಂಶಪಾರಂಪರ್ಯಕಾಗಿ ತನ್ನ ರುಂಡದೆದುರು ನೀನು ಅವಮಾನಿತಳಾಗುತ್ತಿರು" ಎಂಬುದಾಗಿ ಶಾಪವಿತ್ತನು. ದೊಂಬರ ಹಬ್ಬ ಈ ಶಾಪಕ್ಕೆ ಸಂಬಂಧಿಸಿದ ಆಚರಣೆಯಾಗಿದೆ ಎಂದು ಹೇಳುವುದುಂಟು. ಮಲೆನಾಡು ಪ್ರದೇಶದಲ್ಲಿರುವ ದೊಂಬರು ಈ ಹಬ್ಬದ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಇಲ್ಲಿ ಸಂಕಲಿಸಿಕೊಟ್ಟಿದ್ದಾರೆ. ಆಚರಣೆಯ ಭಾಗವಾಗಿ ಹೇಳಲ್ಪಟ್ಟ ಈ ಹಾಡುಗಳಲ್ಲಿ ದೇವರನ್ನು ಹಾಡಿ ಹೊಗಳಲ್ಪಟ್ಟವೇ ಹೆಚ್ಚು. ದೊಂಬರು ನಿರ್ದಿಷ್ಟ ಹಾಡುಗಳಿಗೆ ಕಟ್ಟುಬಿದ್ದವರಲ್ಲ. ಅವರ ಹಾಡುಗಳಲ್ಲಿ ಭೂತ, ಚೌಡಿ, ಕುಮಾರರಾಮ, ಬೀರದೇವರು, ಸಿದ್ದರು–ಹೀಗೆ ನಾನಾ ರೀತಿಯವುಗಳು ವಸ್ತುಗಳಾಗಿರುತ್ತವೆ. ಆದರೆ ಎಲ್ಲ ರೀತಿಯ ದೈವಗಳಿಗೂ ದೊಂಬರು ಒಂದೇ ಸ್ಥಾನವನ್ನು ಕೊಟ್ಟಿರುವುದುಂಟು. ಇಲ್ಲಿಯ ಹಾಡುಗಳಿಗೂ ಈ ಮಾತು ಅನ್ವಯಿಸುತ್ತದೆ. ಸಂಪಾದಕರು ಇಲ್ಲಿಯ ಹಾಡುಗಳನ್ನು ಕುಮಾರ ರಾಮನ ಪದಗಳು, ದೇವರ ಪದಗಳು, ಶೃಂಗಾರ ಪದಗಳು, ವೀರಗೀತೆಗಳು–ಎಂದು ನಾಲ್ಕುಭಾಗವಾಗಿ ವಿಂಗಡಿಸಿದ್ದಾರೆ. ಈ ವಿಭಾಗೀಕರಣ ಸೂಕ್ತವೂ ಆಗಿದೆ.

ಈ ಒಂದೊಂದು ಭಾಗದಲ್ಲಿ ಅಡಕವಾಗುವ ಹಾಡುಗಳನ್ನು ಅಧ್ಯಯನ ಮಾಡಿರುವ ರೀತಿಯೂ ಸಮಂಜಸವಾಗಿದೆ, ಇದು ವರೆಗೆ ಸಂಗ್ರಹವಾಗಿರುವ ಜನಪದ ಹಾಡುಗಳಲ್ಲಿ ಕುಮಾರರಾಮ ಜೀವಂತವಾಗಿದ್ದಾನೆ. ಇಂಥ ಚಾರಿತ್ರಿಕ ವ್ಯಕ್ತಿಯನ್ನು ಕುರಿತ ಹಾಡುಗಳನ್ನು ಸಂಗ್ರಹಿಸುವಾಗ ಸ್ಥಳೀಯ ಐತಿಹ್ಯಗಳ ಹಿನ್ನೆಲೆಯಲ್ಲಿ ಅವುಗಳ ಗುಣಮಟ್ಟವನ್ನು, ಸಾಂಸ್ಕೃತಿಕ ಸ್ತರಗಳನ್ನು ಅಳೆಯುವುದರ ಜೊತೆಗೇನೆ ಆ ಹಾಡುಗಳು ಹೇಗೆ ಐತಿಹಾಸಿಕ ಮೂಲಸಾಮಗ್ರಿಯಾಗಿ ತಮ್ಮ ಶುದ್ಧತೆಯನ್ನು ಕಾಪಾಡಿಕೊಂಡಿವೆ, ಅಂದಿನ ಬದುಕನ್ನು ಚಾರಿತ್ರಿಕ ಪರಿಧಿಯೊಳಗೆ ಹೇಗೆ ಕನ್ನಡಿ ಹಿಡಿಯುತ್ತವೆ–ಎಂಬುದರ ಕಡೆಗೂ ಸಂಪಾದಕರು ಗಮನ ಹರಿಸಿದ್ದರೆ ಹಾಡುಗಳ ಅಧ್ಯಯನದಲ್ಲಿ ಸಮರ್ಪಕತೆ ಕಾಣುತ್ತಿತ್ತು.

ಇಲ್ಲಿಯ ಬಹುಪಾಲು ಹಾಡುಗಳಲ್ಲಿ ಕ್ರಮಬದ್ಧತೆ ಇಲ್ಲವಾದರೂ ಪ್ರಾದೇಶಿಕ

ವಿವರಗಳನ್ನು, ಡೊಂಬರ ಸಂಸ್ಕೃತಿಯನ್ನು ಸಾರುವಂಥ ವಿಷಯಗಳಿವೆ. ಜನ ಬಳಕೆಯಲ್ಲಿರುವ ಪದಗಳು, ಗೇಯತೆ, ವಿಡಂಬನೆ, ಹಾಸ್ಯ—ಇವೆಲ್ಲವುಗಳು ಹಾಡುಗಳಲ್ಲಿದ್ದು ನಮ್ಮ ಗಮನ ಸೆಳೆಯುತ್ತವೆ. ಆದರೆ ಇಲ್ಲಿಯ ಹಾಡುಗಳನ್ನು ಹೇಳಿದ ನಿರೂಪಕರ ಪರಿಚಯವನ್ನು ಸಂಪಾದಕರು ಮಾಡಿಕೊಡಬೇಕಿತ್ತು. ಅವರ ಪರಿಚಯದ ಹಿನ್ನೆಲೆಯಲ್ಲಿ ಹಾಡುಗಳನ್ನು ಅಧ್ಯಯನ ಮಾಡುವ ಸಾಧ್ಯತೆ ಇತ್ತು.

ಜಿ. ಆರ್. ತಿಪ್ಪೇಸ್ವಾಮಿ

ಆಲ್ಮನೆ ರಘುಪತಿ

ಪ್ರತಿಮೆ

ಕಸದಲ್ಲಿಯೂ ರಸ ಕಾಣುವವರಿಗೆ
ಮಾರಾಟಕ್ಕಾಗಿ ಪೇರಿಸಿಟ್ಟ ಏಡಿಗಳು
ಮೀನು ಬುಟ್ಟಿ ಪಕ್ಕದ ತರಕಾರಿಅಂಗಡಿ ಬಿಗಿಡಿದ
ಉಸಿರಿನೊಂದಿಗೆ ಬದುಕುವ ಜೀವಿಗಳ
ಶೂ ಒಳಗಿನ ಬಿಳಿಬೆರಳು
ಎಲ್ಲ ಪ್ರತಿಮೆಗಳು.

ಭವ್ಯ ಪ್ರತಿಮೆ ಬೇಕಾದವರು
ಶ್ರವಣ ಬೆಳಗೊಳದ ಕಲ್ಲುಬಂಡೆ
ಸುಲಿದು ಕುಸುರು ಕೆಲಸಕ್ಕಾಗಿ
ರೂವಾರಿಯಾಗಬೇಕೇ! ಮತ್ತದರ
ಬೆತ್ತಲೆ ರಹಸ್ಯಕ್ಕೆ ಲತೆ ಬಿಡಿಸಿ
ಮಸ್ತಿಷ್ಕ ಮೇಘದಲ್ಲಿಡಬೇಕೇ!

ಕಾಳುತಿಂದ ಕಣಾದ ದಾರ್ಶನಿಕನಾದ,
ರೂವೊಳಗೆ ನುಗ್ಗಿದ ತೆಳುಕಿರಣ
ಬಟಾಬ್ಬಾನ ಬಯಲಲ್ಲಿ ಹರಡಿದ ಸುಡುಬಿಸಿಲು
ಕತ್ತಲೆಯು ತಿಂದರೂ ಜೀವ ಹೀರಿದರೂ
ಮೂಲ ಒಂದೇ, ಆದರೂ
ಕಾಳುತಿಂದ ಜೊಂಡು ಗಡ್ಡದ ಮುನಿವಿಶ್ವದ ನಾಡಿ ಹಿಡಿದ.

ಬರಗೂರು ರಾಮಚಂದ್ರಪ್ಪ

ನಾಲ್ಕು ಕವನಗಳು†

೧. ಒಂಟಿ ದನಿ

ಗಾಯಗೊಂಡ ಗೋಡೆಗಳೇ ಕಾಳುಬೀಳು ಗೂಡೆಗಳೇ
ಒಡೆದ ಮಡಕೆ ಹರಿದ ತಡಿಕೆ ತುಂಬಿನಿಂತ ನಾಡುಗಳೇ
ನಮ್ಮೊಳಗಿನ ಕರುಳ ಮಾತು ಮುಟ್ಟದಿಲ್ಲಿ ಮಂದಿಗೆ
ಬಾಯಾರಿಕೆ ನೋವಿಸುರಿ ತಟ್ಟದಿಲ್ಲಿ ನೀರಿಗೆ

ತಿನ್ನುವನ್ನ ನಂಬುತಿಲ್ಲ ಅಪನಂಬಿಕೆ ಅಗುಳು
ತಟ್ಟೆಗಂತು ಹೊಟ್ಟೆತುಂಬ ಅವಮಾನದ ಸಿಡಿಲು
ಬಾಯಲಿಟ್ಟ ತುತ್ತೆಮಗೆ ಕುತ್ತಾಯಿತು ನೋಡಿ
ಮಾತಾಡಿರಿ ಇನ್ನಾದರು ಕಟ್ಟು ಕಳಚಿ ನಿಲ್ಲಿರಿ

ನಮ್ಮ ಮೂಳೆ ಪುಡಿಯು ಕಾಂತಿ ಹೊತ್ತು ಹೊಳೆವ ಮುಖಗಳು
ಬೇಡವಾದ ಗಳಿಗೆಯಲ್ಲಿ ಕೆಂಗಣ್ಣಿನ ನಖಗಳು
ನಮ್ಮ ನಗುವ ಮುಖದ ಮರೆಗೆ ಮುಚ್ಚಿ ನೇಟಿನೊಳಗುದಿ
ಹೆಜ್ಜೆಯಿಟ್ಟ ಸೆಜ್ಜೆಮನೆಯು ಹೂವು ಉರಿದು ಬೂದಿ

ಮಾತು ಮನಸು ಒಂದಾಗದ ಸಂಬಂಧದ ಸರಕು
ಇದ್ದಂತೆಯೆ ಇದ್ದು ನೀವು ಎದೆಯನೇಕೆ ಒದೆವಿರಿ
ಸರಕುಸ್ಥಾನ ಸಿಕ್ಕ ಮನವು, ತಿಳಿಯದೇನು ನೋವು
ಕುದಿಯುತಿರುವ ಎಣ್ಣೆಯಲ್ಲಿ ಬೆಂದ ಬವಣೆ ನಾವು

ಮೌನದಲ್ಲಿ ಕೊಲ್ಲಬೇಡಿ ಕರುಣೆ ನಮಗೆ ಬೇಡ
ಲೆಕ್ಕಬುಕ್ಕು ಬೆಳ್ಳಿಕೋಳ ಅಂಕಗಣಿತ ಬೇಡ
ಜೇಡಜಾಲ ಕೊಡವಿ ನಿಲ್ಲಿ ಹೊಸತು ಮಾತು ಮಸೆಯಿರಿ
ಜೀವಗಾಳಿ ಗೆಳೆಯರಾಗಿ ಮೆದುಳು ಮನಸು ಬೆಸೆಯಿರಿ.

† ನೆತ್ತರಲ್ಲಿ ನೆಂದ ಹೂವು (೧೯೮೩) ಸಂಕಲನದಿಂದ.

೨. ಇತಿಹಾಸ

ಇಲ್ಲಿ ಹರಿಯೋ ನೀರು
ನೀರಲ್ಲ ಸ್ವಾಮಿ, ತೀರ್ಥವೆನ್ನುವರು
ಇಲ್ಲಿ ನೆಟ್ಟ ಕಲ್ಲು
ಕಲ್ಲಲ್ಲ ಸ್ವಾಮಿ, ದೇವರೆನ್ನುವರು
ಇಲ್ಲಿ ಬಡಿಯೋ ಸಾವು
ಸಾವಲ್ಲ ಸ್ವಾಮಿ, ಮೋಕ್ಷವೆನ್ನುವರು.

ಇಲ್ಲಿರುವ ಬಡತನಕೆ
ಇಲ್ಲಿ ಕಾರಣವಿಲ್ಲ
ಕಳೆದ ಜನ್ಮದ ಪಾಪವಂತೆ
ಸೊಕ್ಕಿ ಏರುವ ಸಿರಿಗೆ
ಇಲ್ಲಿ ಕಾರಣವಿಲ್ಲ
ಕಳೆದ ಜನ್ಮದ ಪುಣ್ಯವಂತೆ.

ಇಲ್ಲಿ ಬೆಳೆಯುವ ಮರಗಳಲ್ಲಿ
ಕೊಂಬೆ ಕೊಂದಿವೆ ಎಲೆಗಳ,
ಇಲ್ಲಿ ಮೂಡುವ ಗಿಡಗಳಲ್ಲಿ
ಎಲೆಯೆ ನುಂಗಿದೆ ಹೂಗಳ.
ಇಲ್ಲಿ ಬೀಸೊ ಗಾಳಿಯಲ್ಲಿ
ಸಂಪ್ರದಾಯದ ಲಯವಿದೆ
ಗಟ್ಟಿ ಬೆಟ್ಟವು ಗಾಳಿಗೂಳಿಗೆ
ಗಾಯಗೊಳ್ಳುವ ಭಯವಿದೆ
ವರ್ತಮಾನಕೆ ಭೂತ ಹಿಡಿದು
ಕುರುಡು ಕವಚವ ತೊಟ್ಟಿದೆ.
ಶತಶತಮಾನದ ಚರಿತ್ರೆಯಲ್ಲಿ
ಕವಚಕೆ ಖಡ್ಗದ ಸೆಣಸು ಇದೆ.

ಇತಿಹಾಸದ ಸೃಷ್ಟಿಗೆ ಕಾಲವಿದೇ
ಬಂಡಾಯದ ಬೆಳಕಿಗೆ ಭೂಮಿಯಿದೇ.

ಪ್ರಾ. ನರಹರ ಕುರುಂದಕರ

ಮನುಸ್ಮೃತಿ : ಕೆಲವು ವಿಚಾರಗಳು

ಕನ್ನಡಕ್ಕೆ : ಡಾ। ದತ್ತಾತ್ರೇಯ ಪೂಜಾರಿ ಮತ್ತು ಡಾ। ಗೀತಾ ಪೂಜಾರಿ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಹಾಗೆ ನೋಡಿದರೆ, ಸ್ಮೃತಿ ಶಬ್ದವು ಬಹಳ ಹಳೆಯದು. ತೈತ್ತೇರೀಯ ಆರಣ್ಯಕ ದಿಂದ ಹಿಡಿದು ಪಾರಿಭಾಷಿಕ ಅರ್ಥದಲ್ಲಿ ಶಬ್ದವೆಂದರೆ ಶಾಸ್ತ್ರ ಮತ್ತು ಧರ್ಮಶಾಸ್ತ್ರ ಎಂಬುದಾಗಿದೆ. ಮನುಸ್ಮೃತಿಯಲ್ಲಿ ಈ ತರದ ಉಲ್ಲೇಖವೇ ಕಂಡುಬರುತ್ತದೆ. ಮನುಸ್ಮೃತಿಕಾರರ ಅಭಿಪ್ರಾಯದಲ್ಲಿ ಈ ಗ್ರಂಥವೆಂದರೆ ಧರ್ಮಶಾಸ್ತ್ರವಾಗಿದೆ (ಮನು. ೧/೫೮,೧,೫೯,೧/೧೦೩,೨/೧೧೮, ಮತ್ತು ಯಾವುದೇ ಅಧ್ಯಾಯದ ಕೊನೆಯನ್ನು ನೋಡಿ). ಯಾಜ್ಞವಲ್ಕ್ಯ ಸ್ಮೃತಿಯೂ ಸಹ ತನ್ನನ್ನು ಶಾಸ್ತ್ರವೆಂದು ಉಲ್ಲೇಖಿಸುತ್ತದೆ. ಸ್ವತ : ಧರ್ಮಶಾಸ್ತ್ರವೆಂದು ಹೇಳಿಕೊಳ್ಳುವ ಈ ಗ್ರಂಥಗಳು ಇಂದು ಸ್ಮೃತಿಗಳೆಂದು ಗುರುತಿಸಲ್ಪಡುತ್ತವೆ. ಈ ಗ್ರಂಥಗಳಿಗೆ ಸ್ಮೃತಿಗಳೆಂದು ಎಂದಿನಿಂದ ಗುರುತಿಸಲಾಯಿತು ಎಂದು ಹೇಳುವದು ಕಠಿಣ; ಆದರೆ ಸ್ಥೂಲ ಮಾನದಿಂದ ಈ ಗ್ರಂಥಗಳು ಇ.ಸ. ೫ನೇ ಶತಮಾನದಿಂದ ಸ್ಮೃತಿಗಳೆಂದು ಗುರುತಿಸಲ್ಪಡ ತೊಡಗಿದವೆಂದು ಹೇಳಬಹುದು.

ಪರಂಪರಾಗತ ತಿಳುವಳಿಕೆಯಂತೆ ಸ್ಮೃತಿ ಗ್ರಂಥಗಳು ಸೂತ್ರ ಗ್ರಂಥಗಳ ಮೇಲೆ ಆಧಾರಿತವಾಗಿವೆ. ಒಂದು ವೇಳೆ ಈ ತಿಳುವಳಿಕೆಯನ್ನು ನಿಜವೆಂದು ಒಪ್ಪುವದಾದರೆ ಮನುಸ್ಮೃತಿ ಗ್ರಂಥವು ಮಾನವ ಧರ್ಮಸೂತ್ರವೆಂಬ ಗ್ರಂಥದ ಮೇಲೆ ಆಧಾರಿತ ವಾಗಿದೆ ಎಂದು ಹೇಳಬೇಕಾಗುತ್ತದೆ. ಅನೇಕ ಸಂಶೋಧಕರ ಅಭಿಪ್ರಾಯವು ಹೀಗೆಯೇ ಇದೆ. ಇಂದು ಉಪಲಬ್ಧವಿರದ ಮಾನವಧರ್ಮಸೂತ್ರದ ವಿಸ್ತಾರವೆಂದರೆ ಮನುಸ್ಮೃತಿಯೇ ಎಂದು ಅಭ್ಯಾಸಕರು ಹೇಳುತ್ತಾರೆ. ಕೃಷ್ಣ ಯಜುರ್ವೇದದ

ನಾಲ್ಕು ಶಾಖೆಗಳಿವೆ. ತೈತ್ತೀರೀಯ, ಮೈತ್ರಾಯಣಿ,ಕಾಠಕ ಮತ್ತು ಕಪಿಷ್ಠಲ ಇವೇ ಆ ನಾಲ್ಕು ಶಾಖೆಗಳು. ಮೈತ್ರಾಯಣಿ ಶಾಖೆಯ ಕಲ್ಪದ ಮೂರು ಭಾಗಗಳು ಇದ್ದಿರಬೇಕು. ಇದರೊಳಗಿನ ಗೃಹ್ಯಸೂತ್ರವು ಮಾನವ ಗೃಹಸೂತ್ರವೆಂದು ಪ್ರಸಿದ್ಧವಾಗಿದೆ. ಶ್ರೌತ ಸೂತ್ರವು ಮಾನವ ಶ್ರೌತಸೂತ್ರವೆಂದೇ ಪ್ರಸಿದ್ಧವಿದೆ. ಈ ಶಾಖೆಯ ಧರ್ಮಸೂತ್ರವು ಉಪಲಬ್ಧವಿಲ್ಲ. ಒಂದು ವೇಳೆ ಪ್ರಾಚೀನ ಕಾಲದಲ್ಲಿ ಧರ್ಮಸೂತ್ರ ಉಪಲಬ್ಧವಿದ್ದಿದ್ದರೆ ಅದರ ಹೆಸರು ಮಾನವ ಧರ್ಮಸೂತ್ರವೇ ಇದ್ದಿರಬಹುದೆನ್ನುವದು ಸ್ಪಷ್ಟ. ಈ ಅನುಪಲಬ್ಧ ಮಾನವ ಧರ್ಮಸೂತ್ರವು ಮನುಸ್ಮೃತಿಯ ಆಧಾರವಾಗಿದೆ ಎಂಬ ಅಂಶವು ಅನೇಕ ಅಭ್ಯಾಸಿಗಳ ಮನಸ್ಸಿನಲ್ಲಿ ಇಣುಕುತ್ತಿರುತ್ತದೆ. ಕೈ. ಚಿಂ. ವಿ. ವೈದ್ಯರ ನಿಲುವು ಇದೇ ಆಗಿತ್ತು.

ಮೈತ್ರಾಯಣ ಶಾಖೆಯ ಧರ್ಮಸೂತ್ರವೆಂದರೆ ಮಾನವ ಧರ್ಮಸೂತ್ರ, ಮತ್ತು ಅದೇ ಮನುಸ್ಮೃತಿಯ ಆಧಾರವೆಂಬ ಭೂಮಿಕೆಯನ್ನು ನಾವು ಗೃಹೀತವಾಗಿಟ್ಟುಕೊಂಡರೆ ಅದರಿಂದ ಅನೇಕ ಪ್ರಶ್ನೆಗಳು ನಿರ್ಮಾಣವಾಗುತ್ತವೆ. ಭಾರತೀಯ ಪರಂಪರೆಯಲ್ಲಿ ಯಜುರ್ವೇದಕ್ಕೆ ಬಹಳ ಮಾನ್ಯತೆ ಇದೆ. ಇದು ಯಜ್ಞಗಳ ವೇದವೆಂದು ಪರಿಗಣಿಸಲ್ಪಡುತ್ತದೆ. ಉತ್ತರ ಭಾರತದಲ್ಲಿ ಯಜುರ್ವೇದ ಬ್ರಾಹ್ಮಣರಿಗೆ ಪಂಡಿತ ವರ್ಗದಲ್ಲಿ ಬಹಳ ದೊಡ್ಡ ಪ್ರತಿಷ್ಠೆ ಇದೆ. ಯಜುರ್ವೇದದ ಪ್ರತಿಷ್ಠೆಯನ್ನು ಹೇಳುವಾಗ ಶುಕ್ಲ ಯಜುರ್ವೇದವೇ ಅದಕ್ಕೆ ಅಭಿಪ್ರೇತವಾಗಿರುತ್ತದೆ. ಋಗ್ವೇದಿ ಮತ್ತು ಶುಕ್ಲ ಯಜುರ್ವೇದಿಗಳ ಮಾನದಿಂದ ಕೃಷ್ಣ ಯಜುರ್ವೇದಿಗಳ ಸಂಖ್ಯೆ ಮತ್ತು ಪ್ರತಿಷ್ಠೆಯು ಅಲ್ಪವಾಗಿದೆ. ಕೃಷ್ಣ ಯಜುರ್ವೇದದಲ್ಲಿ ಕೂಡ ತೈತ್ತೀರೀಯ ಶಾಖೆಗೆ ಹೆಚ್ಚಿನ ಮಹತ್ವವಿದೆ. ಮೈತ್ರಾಯಣಿ ಸಂಹಿತೆಯು ಮೊದಲೇ ಅಲ್ಪ ಸಂಖ್ಯರಾಗಿರುವ ಕೃಷ್ಣ ಯಜುರ್ವೇದೀಯರಲ್ಲಿ ಪುನ: ಒಂದು ಸಣ್ಣ ಪಂಗಡದ ಸಂಹಿತೆಯಾಗಿದೆ. ಮೈತ್ರಾಯಣಿ ಶಾಖೆಯಂತಹ ಅತ್ಯಲ್ಪ ಬೆಂಬಲ ಮತ್ತು ಪ್ರತಿಷ್ಠೆ ಇರುವ ಶಾಖೆಯ ಧರ್ಮಸೂತ್ರವು ಸಂಪೂರ್ಣ ಭಾರತದಲ್ಲಿ ಸಾರ್ವತ್ರಿಕ ಮಾನ್ಯತೆ ಇರುವ ಮನುಸ್ಮೃತಿಗೆ ಹೇಗೆ ಆಧಾರಭೂತವಾಯಿತೆನ್ನುವ ಪ್ರಶ್ನೆಗೆ ಯಾವ ಸಮಾಧಾನಕಾರಕ ಉತ್ತರವೂ ನಮ್ಮೆದುರು ಇಲ್ಲ. ಒಂದು ಕಾಲದಲ್ಲಿ ಮಾನವ ಧರ್ಮಸೂತ್ರ ಮತ್ತು ಮನುಸ್ಮೃತಿಗಳು ಬಹಳಷ್ಟು ಸರ್ವಮಾನ್ಯವಿರಲಿಲ್ಲ, ಆದರೆ ಕಾಲಕ್ರಮದಲ್ಲಿ ಮನುಸ್ಮೃತಿಯ ಮಾನ್ಯತೆಯು ಬೆಳೆಯುತ್ತ ಹೋಯಿತೆಂದು ನಾವು ಹೇಳಬಹುದೇ ? ಎಲ್ಲ ಪುರಾವೆಗಳು ಇದಕ್ಕೆ ವಿರುದ್ಧವಾಗಿವೆ. ಧರ್ಮಶಾಸ್ತ್ರಕಾರರಲ್ಲಿ ಮನುವು ಯಾವಾಗಲೂ ಸರ್ವಶ್ರೇಷ್ಠ ಮಾನ್ಯತೆ ಹೊಂದಿರುವ ಧರ್ಮನೇತ್ರನೆಂದು ಪರಿಗಣಿಸಲ್ಪಟ್ಟಿದ್ದಾನೆ. ಹಾಗಾದರೆ ಮೈತ್ರಾಯಣಿ ಶಾಖೆಯ ಧರ್ಮಸೂತ್ರಕ್ಕೆ ಈ ಪ್ರತಿಷ್ಠೆಯು ಎಲ್ಲಿಂದ ಬಂದಿತು ?

ಸ್ಮೃತಿ ಗ್ರಂಥಗಳು ಧರ್ಮಸೂತ್ರಗಳ ಮೇಲೆ ಆಧಾರಿತವಾಗಿವೆ ಎಂಬ

ಕಲ್ಪನೆಯೆಂದರೆ ಪುರಾವೆ ಇರದ ಒಂದು ಸಂಕೇತವೆಂದೆ ತಿಳಿಯಬೇಕು. ಕೆಲವು ಧರ್ಮಸೂತ್ರಗಳು ಮತ್ತು ಅವುಗಳ ಮೇಲೆ ಆಧಾರಿತವಾಗಿರುವ ಸ್ಮೃತಿಗಳು ಹೀಗೆ ಎರಡೂ ಗ್ರಂಥಗಳು ದೊರೆಯುತ್ತವೆ. ಆಪಸ್ತಂಬ ಧರ್ಮಸೂತ್ರವೂ ಉಪಲಬ್ಧವಿದೆ. ಆಪಸ್ತಂಬ ಸ್ಮೃತಿಯೂ ಉಪಲಬ್ಧವಿದೆ. ಈ ಧರ್ಮಸೂತ್ರವು ಅತಿ ಪ್ರಾಚೀನ ಸೂತ್ರಗಳ ಪೈಕಿ ಒಂದು, ಅಂದರೆ ಇ. ಸ. ಪೂ. ೪೦೦ರ ಪೂರ್ವದ್ದಾಗಿದೆ. ಆದರೆ ಆಪಸ್ತಂಬ ಸ್ಮೃತಿ ಮಾತ್ರ ಇತರ ಮಾನ್ಯವರ ಸ್ಮೃತಿಗಳ ಮಾನದಿಂದ ಬಹಳಷ್ಟು ಅರ್ವಾಚೀನವಾಗಿದೆ. ಮನು, ಯಾಜ್ಞವಲ್ಕ್ಯ, ನಾರದ, ಬೃಹಸ್ಪತಿ ಈ ಸ್ಮೃತಿಗಳು ಹೇಗೆ ಮಹತ್ವಪೂರ್ಣವೆಂದು ತಿಳಿಯಲ್ಪಡುತ್ತವೆಯೋ ಮತ್ತು ಕಾನೂನಿನಲ್ಲಿ ಅಲ್ಲಲ್ಲಿ ಅವುಗಳ ಆಧಾರವನ್ನು ತೆಗೆದುಕೊಳ್ಳಲಾಗುತ್ತದೆಯೋ, ಹಾಗೆ ಆಪಸ್ತಂಬ ಸ್ಮೃತಿಗೆ ಮಾನ್ಯತೆ ಇಲ್ಲ, ಮಾನ್ಯತೆ ಪಡೆದ ಯಾವ ಧರ್ಮಸೂತ್ರಗಳ ಉಲ್ಲೇಖವನ್ನು ಯಾವಾಗಲೂ ಮಾಡಲಾಗುತ್ತದೆಯೋ, ಅವುಗಳ ಮೇಲೆ ಆಧಾರಿತವಾದ ಸಂಬಂಧಿತ ಸೂತ್ರಗಳೊಂದಿಗೆ ಸಂಲಗ್ನವಾಗಿರುವ ಸ್ಮೃತಿ ಗ್ರಂಥಗಳು ಮುಂದೆ ಕಂಡುಬರುವದಿಲ್ಲ. ಮನು, ಯಾಜ್ಞವಲ್ಕ್ಯ, ನಾರದರಂತಹ ಸರ್ವಮಾನ್ಯ ಸ್ಮೃತಿ ಗ್ರಂಥಗಳು ತಾವು ಸೂತ್ರಗ್ರಂಥಗಳ ಮೇಲೆ ಆಧಾರಿತವೆಂದು ಹೇಳುವದಿಲ್ಲ. ಹಾಗೆ ಗೃಹೀತವನ್ನೂ ಹಿಡಿದುಕೊಳ್ಳುವದಿಲ್ಲ. ಬದಲಾಗಿ ತಾವೇ ಎಲ್ಲಕ್ಕಿಂತ ಪ್ರಾಚೀನ ಧರ್ಮಶಾಸ್ತ್ರಗಳಾಗಿದ್ದೇವೆಂದು ಈ ಸ್ಮೃತಿಕಾರರು ತಿಳಿಯುತ್ತಾರೆ. ಈ ವಿಶ್ವದ ಅತಿ ಪ್ರಾರಂಭ ಕಾಲದಲ್ಲಿ ಬ್ರಹ್ಮದೇವನು ಸಕಲ ಮಾನವ ಜಾತಿಗಾಗಿ ವಿಧಿಸಿದ ಆಚಾರ-ನಿಯಮಗಳೆಂದರೆ ತಾವೇ ಎಂಬುದು ಸ್ಮೃತಿಕಾರರ ನಿಲುವಾಗಿತ್ತು. ಸ್ಮೃತಿಕಾರರ ಈ ಪದ್ಧತಿಯು ಸೂತ್ರಗಳ ಮೇಲೆ ಸ್ಮೃತಿಗಳು ಆಧಾರಿತವಾಗಿವೆ ಎಂಬ ಪ್ರತಿಪಾದನೆಗೆ ವಿರೋಧಿಯಾಗಿದೆ. ಮಾನವ ಧರ್ಮಸೂತ್ರವು ಉಪಲಬ್ಧವಾಗಬೇಕು. ಆ ಸೂತ್ರ ಗ್ರಂಥವು ಅತಿ ಪ್ರಾಚೀನ ಸೂತ್ರವೆಂದು ಸಿದ್ಧವಾಗಬೇಕು ಮತ್ತು ಮನುಸ್ಮೃತಿಯು ಆ ಸೂತ್ರಕ್ಕೆ ಸಂಲಗ್ನವಾಗಿದೆ ಎನ್ನುವದನ್ನು ತೋರಿಸುವಂತಾಗಬೇಕು. ಅನಂತರವೇ 'ಮಾನವ ಧರ್ಮಸೂತ್ರವು ಮನುಸ್ಮೃತಿಯ ಆಧಾರ, ಎಂಬ ತತ್ವಕ್ಕೆ ಸ್ವೀಕಾರಾರ್ಹತೆಯು ದೊರಕೀತು. ಮಾನವ ಧರ್ಮಸೂತ್ರವು ಇಂದು ಉಪಲಬ್ಧವಿಲ್ಲ. ಆದರೆ ಯಾವ ಸೂತ್ರ ಮತ್ತು ಸ್ಮೃತಿಗಳು ಉಪಲಬ್ಧವಿವೆಯೋ ಅವುಗಳ ಪರಸ್ಪರ ಸಂಬಂಧವನ್ನು ನೋಡಿದರೆ, ಸ್ಮೃತಿಗಳು ಸೂತ್ರಗಳ ಮೇಲೆ ಆಧಾರವಾಗಿದೆ ಎಂಬುದು ಕೇವಲ ಸಂಕೇತವಾಗಿದೆ ಎಂದು ಹೇಳಲೇಬೇಕಾದೀತು.

'ಮನುಸ್ಮೃತಿ' ಎಂದು ಇಂದು ನಮಗೆ ಉಪಲಬ್ಧವಿರುವ ಗ್ರಂಥದಲ್ಲಿ ೧೨ ಅಧ್ಯಾಯಗಳಿವೆ. ಮತ್ತು ಶ್ಲೋಕಗಳ ಸಂಖ್ಯೆ ೨೬೮೪ ಇದೆ. ಕೆಲವು ಆವೃತ್ತಿಗಳಲ್ಲಿ ಅಧ್ಯಾಯಗಳು ೧೨ ಇದ್ದರೂ ಕೂಡ ಶ್ಲೋಕಗಳ ಸಂಖ್ಯೆ ೨೬೯೪ ಅಥವಾ

೨೬೯೫ ಇರುತ್ತದೆ. ನಾನು ಮನುಸ್ಮೃತಿಯ ಅನೇಕ ಆವೃತ್ತಿಗಳನ್ನು ಗಮನಿಸಿದೆ. ಜನಾರ್ಧನ ಗಂರ್ಜರ ಅವರ ಇ. ಸ. ೧೮೭೭ರಲ್ಲಿಯ ಪ್ರತಿ, ಬಾಪಟ ಶಾಸ್ತ್ರಿಗಳ ಇ. ಸ. ೧೯೨೭ರ ಪ್ರತಿ, ನಿರ್ಣಯ ಸಾಗರದ ಕುಲಕ ಭಟ್ಟರ ಟೀಕಾಸಹಿತವಾದ ಪ್ರತಿ, ಹೀಗೆ ಯಾವುದೇ ಪ್ರತಿಗಳಲ್ಲಿ ಶ್ಲೋಕಗಳ ಸಂಖ್ಯೆಯು ಸರ್ವತ್ರ ೨೬೮೪ ಎಂದೇ ಕಂಡು ಬಂದಿತು. ಆದರೆ ೨೬೯೫ ಶ್ಲೋಕಗಳಿರುವ ಪ್ರತಿಯನ್ನು ತೆಗೆದು ಕೊಂಡರೂ ಕೂಡ ಒಟ್ಟಾರೆ ಅಂತರವು ೧೧ ಶ್ಲೋಕಗಳದ್ದೇ ಆಗಿದೆ. ಈ ೧೦-೧೧ ಶ್ಲೋಕಗಳನ್ನು ಮನುಸ್ಮೃತಿಯ ಭಾಗವೆಂದು ತಿಳಿದರೂ ಅಥವಾ ತಿಳಿಯದಿದ್ದರೂ ಅದರಿಂದ ವಿಷಯ ಮತ್ತು ಆಶಯಂಗಳಲ್ಲಿ ಯಾವ ಅಂತರವೂ ಆಗುವದಿಲ್ಲ. ಒಂದೇ ಅಂಶವನ್ನು ಹೇಳುವ ಶ್ಲೋಕ ಒಂದು ಕಡೆ ಎರಡಿದ್ದರೆ, ಇನ್ನೊಂದೆಡೆ ಅದೇ ಅಂಶವು ಒಂದೇ ಶ್ಲೋಕವಲ್ಲಿರುತ್ತದೆ. ಇರುವ ಅಂತರವಿಷ್ಟೇ. ಅಂಶ ಅದೇ ವಿಷಯ ಕ್ರಮವೂ ಅದೇ, ಅಧ್ಯಾಯವೂ ಅದೇ. ಆದರಿಂದಾಗಿ ಶ್ಲೋಕ ಸಂಖ್ಯೆಯಲ್ಲಿನ ಅಂತರವು ಯಾವ ದೃಷ್ಟಿಯಿಂದಲೂ ಮಹತ್ವದ ವಿಷಯವೆನಿಸುವದಿಲ್ಲ. ಮನುಸ್ಮೃತಿಯಂತಹ ಗ್ರಂಥವು ಸರ್ವಮಾನ್ಯ ಶಾಸ್ತ್ರಗ್ರಂಥವಾಗಿತ್ತು, ಅದು ಪಂಡಿತರ ಕೈಯಲ್ಲಿತ್ತು, ಅವರ ಮೇಲೆ ಸತತವಾಗಿ ಭಾಷ್ಯಗಳಾಗುತ್ತಿದ್ದವು. ಅವುಗಳ ಆಧಾರವನ್ನು ತೆಗೆದುಕೊಳ್ಳಲಾಗುತ್ತಿತ್ತು. ಆದ್ದರಿಂದ ಈ ಗ್ರಂಥಗಳನ್ನು ಪುರಾಣಗಳಿಗಿಂತ ಬೇರೆಯವೆಂದು ತಿಳಿಯಬೇಕು. ಮನುಸ್ಮೃತಿಯಂತಹ ಗ್ರಂಥದಲ್ಲಿ ಪ್ರಕ್ಷೇಪವಾಗುವ ಶಕ್ಯತೆ ತುಂಬ ಕಡಿಮೆ ಎಂದು ಬಾಪಟ ಶಾಸ್ತ್ರಿಗಳು ಹೇಳಿದ್ದಾರೆ. ಇದು ಪೂರ್ಣತಃ ಪರಂಪರಾವಾದಿ ವ್ಯಕ್ತಿಯ ಅಭಿಪ್ರಾಯವಾಗಿದೆ. ಮಹಾ ಮಹೋಪಾಧ್ಯಾಯ ಕಾಣೆಯವರೂ ಸಹ ಎಲ್ಲ ಪುರಾವೆಗಳ ಸೂಕ್ಷ್ಮ ವಿಚಾರ ಮಾಡಿ ಇದೇ ನಿರ್ಣಯಕ್ಕೆ ತಲುಪಿದ್ದಾರೆ. ಅದೆಂದರೆ ಇಂದು ನಮ್ಮೆದುರು 'ಮನುಸ್ಮೃತಿ' ಎಂದು ಇರುವ ಗ್ರಂಥದ ಸಂಹಿತೆಯು ಇ. ಸ. ಎರಡನೇ ಮೂರನೇ ಶತಮಾನದಿಂದ ಹೆಚ್ಚೂ-ಕಡಿಮೆ ಇದ್ದಕ್ಕಿದ್ದ ಹಾಗೆಯೇ ಇದೆ. ಅಂದರೆ ಕಳೆದ ಸುಮಾರು ೧೬೦೦ ವರ್ಷಗಳಿಂದ ಮನುಸ್ಮೃತಿಯು ಇಂದು ನಮ್ಮೆದುರು ಇದ್ದ ಹಾಗೆಯೇ ಇದೆ. ನನಗೂ ಈ ಅಭಿಪ್ರಾಯವು ಯೋಗ್ಯವೆನಿಸುತ್ತದೆ. ಇಂದು ನಮ್ಮೆದುರು ಇರುವ ಮನುಸ್ಮೃತಿಯು ಪೂರ್ವದ ಮನುಸ್ಮೃತಿಯ ಮಾನದಿಂದ ಚಿಕ್ಕದಾಗಿದೆ ಎಂದು ಪ್ರತಿಪಾದಿಸುವವರ ಒಂದು ಗುಂಪು ಅಭ್ಯಾಸಕರಲ್ಲಿದೆ. ಈ ಮಾತು ನನಗೆ ಸ್ವೀಕಾರ ಯೋಗ್ಯವೆನಿಸುವದಿಲ್ಲ. ಕಳೆದ ೧೬೦೦ ವರ್ಷಗಳಿಂದ ಮನುಸ್ಮೃತಿಯು ೧೨ ಅಧ್ಯಾಯ ಮತ್ತು ೨೬೮೪ ಶ್ಲೋಕಗಳದ್ದಾಗಿದೆ ಎಂದು ನಾನು ತಿಳಿಯುತ್ತೇನೆ.

ಮನುಸ್ಮೃತಿ ಗ್ರಂಥದ ಈ ಅವಿಕೃತ ಅವಸ್ಥೆ ಎಂದರೇನು ಎಂಬುದನ್ನು ಸ್ವಲ್ಪ ವಿಶದ ಪಡಿಸಬೇಕು. ಇ. ಸ. ಮೂರನೇ ಶತಕದಲ್ಲಿ ಅಸ್ತಿತ್ವದಲ್ಲಿದ್ದ ಮನುಸ್ಮೃತಿಯ ಸಂಹಿ

ತೆಯೇ ಇಂದು ನಮಗೆ ಉಪಲಬ್ಧವಿದೆ ಎಂದಿಷ್ಟೇ ಇದರ ಅರ್ಥ, ಇ. ಸ. ಮೂರನೇ ಶತಕದಪೂರ್ವದಲ್ಲಿ ಮನುಸ್ಮೃತಿಯ ಸಂಹಿತೆಯಲ್ಲಿ ಬಹಳಷ್ಟು ಹೆಚ್ಚು-ಕಡಿಮೆ ಆಗಿದೆ. ಈ ಅದಲು-ಬದಲಿನ ಕೆಲವು ಪುರಾವೆಗಳು ಸ್ಮೃತಿಯ ಭಾಷ್ಯಗಳಲ್ಲಿ ಮತ್ತು ಸ್ಮೃತಿ ಯಲ್ಲಿಯೂ ಹರಡಿ ಬಿದ್ದಿವೆ. ಆದರೆ ಆ ಪುರಾವೆಯ ಚರ್ಚೆಯೆಂದರೆ ಮೂರನೇ ಶತಕದ ಪೂರ್ವದಲ್ಲಿ ಏನು ಪರಿವರ್ತನೆಯಾಯಿತು ಎನ್ನುವದರ ಚರ್ಚೆಯಾದೀತು. ಮೂರನೇ ಶತಕದ ಪೂರ್ವದಲ್ಲಿ ಆದ ಬದಲಾವಣೆಯನ್ನು ಒಪ್ಪಿಕೊಂಡ ನಂತರವೇ ಈ ಸಂಹಿತೆಯನ್ನು ಅವಿಕೃತವೆಂದು ಹೇಳಬೇಕಾಗುತ್ತದೆ. ಮನುಸ್ಮೃತಿಯ ಕೊನೆಯಲ್ಲಿ ಈ ಗ್ರಂಥದ ವಿಷಯ ಯಾವುದು ಮತ್ತು ಯಾವ ಅನುಕ್ರಮದಲ್ಲಿ ಹೇಳಲಾಗಿದೆ ಎಂಬುದರ ಸಂಕ್ಷಿಪ್ತ ಉಲ್ಲೇಖವಿದೆ. ನಮ್ಮ ಪರಂಪರೆಯಲ್ಲಿ ಇಂತಹ ನೋಂದಣಿಗೆ ವಿಷಯ ಸಂಗ್ರಹವೆನ್ನುತ್ತಾರೆ. ವಿಷಯ ಸಂಗ್ರಹಾನುಸಾರ ಸ್ಮೃತಿಯ ಸಂಹಿತೆಯಿದೆ.

ಮೊದಲನೆಯ ಅಧ್ಯಾಯದಲ್ಲಿ ಗ್ರಂಥಾರಂಭ, ಸೃಷ್ಟಿಯ ನಿರ್ಮಿತಿ, ಮನು ಮತ್ತು ಮನ್ವಂತರಗಳು, ನಾಲ್ಕು ಯುಗಗಳು, ಅವುಗಳ ಕಾಲ, ನಾಲ್ಕು ವರ್ಣಗಳು, ಅವುಗಳ ಕೆಲಸ ಮತ್ತು ಬ್ರಾಹ್ಮಣನ ಹಿರಿಮೆ ಈ ವಿಷಯಗಳು ಬಂದಿವೆ. ಎರಡನೆ ಅಧ್ಯಾಯದಲ್ಲಿ ಬ್ರಹ್ಮಚರ್ಯ, ಗುರುಸೇವೆ ಮತ್ತು ವಿವಿಧ ಸಂಸ್ಕಾರಗಳ ಮಾಹಿತಿ ಬಂದಿದೆ, ಮೂರ ನೆಯ ಅಧ್ಯಾಯದಲ್ಲಿ ವಿವಾಹ ಪ್ರಕಾರಗಳು, ವಿವಾಹ ವಿಧಿ ಮತ್ತು ಶ್ರಾದ್ಧಗಳ ಮಾಹಿತಿ ಇದೆ. ನಾಲ್ಕನೆಯ ಅಧ್ಯಾಯದಲ್ಲಿ ಗೃಹಸ್ಥ ಧರ್ಮ, ಭಕ್ಷಾಭಕ್ಷ, ವರ್ಜ್ಯಾ ವರ್ಜ್ಯ ಮತ್ತು ಇಪ್ಪತ್ತೊಂದು ಪ್ರಕಾರದ ನರಕಗಳ ಮಾಹಿತಿ ಇದೆ. ಐದನೆಯ ಅಧ್ಯಾಯದಲ್ಲಿ ಪುನಃ ಶುದ್ಧಾಶುದ್ಧ, ಸ್ತ್ರೀ ಧರ್ಮ ಮತ್ತು ಭಕ್ಷಾಭಕ್ಷಗಳ ಮಾಹಿತಿ ಇದೆ. ಆರನೆಯ ಅಧ್ಯಾಯದಲ್ಲಿ ವಾನಪ್ರಸ್ಥ ಮತ್ತು ಸನ್ಯಾಸದ ಮಾಹಿತಿ ಇದೆ. ಈ ಮೊದಲಿನ ಆರು ಅಧ್ಯಾಯಗಳ ಕೇಂದ್ರಬಿಂದು ಬ್ರಾಹ್ಮಣನಾಗಿದ್ದು, ಇತರ ಮಾಹಿ ತಿಯು ಆನುಷಂಗಿಕವಾಗಿ ಅವರಲ್ಲಿ ಬಂದಿದೆ. ಈ ಆರು ಅಧ್ಯಾಯಗಳು ಬ್ರಾಹ್ಮಣ ರಿಗಾಗಿಯೇ ಇವೆ. ಏಳನೆಯ ಅಧ್ಯಾಯದ ವಿಷಯ ರಾಜಧರ್ಮವಾಗಿದೆ. ಅದಕ್ಕೆ ಅನುಸರಿಸಿ ಎಲ್ಲ ಕ್ಷತ್ರಿಯರ ಧರ್ಮವನ್ನು ಹೇಳಲಾಗಿದೆ. ಸ್ವಾಭಾವಿಕವಾಗಿಯೇ ರಾಜನ ಮೇಲೆ ಬ್ರಾಹ್ಮಣ-ಪಾಲನೆಯ ದೊಡ್ಡ ಹೊಣೆ ಇರುವದರಿಂದಲೇ ಆ ವಿಷ ಯವೂ ಬಂದಿದೆ. ಎಂಟನೆಯ ಅಧ್ಯಾಯವು ಮನುಸ್ಮೃತಿಯಲ್ಲಿನ ಎಲ್ಲಕ್ಕಿಂತ ದೊಡ್ಡ ಅಧ್ಯಾಯವಾಗಿದೆ. ವ್ಯವಹಾರ, ಸಾಕ್ಷಿ, ಖಟ್ಲೆ, ಅಪರಾಧ, ದಂಡ ಇವುಗಳ ವಿಚಾರ ಇಲ್ಲಿ ಬಂದಿದೆ. ಒಂಬತ್ತನೆಯ ಅಧ್ಯಾಯದಲ್ಲಿ ಸ್ತ್ರೀ ಮತ್ತು ಪುತ್ರರ ವಾರಸಾ ಹಕ್ಕಿನ ವಿಷಯವಿದೆ. ಹತ್ತನೆಯ ಅಧ್ಯಾಯ ವರ್ಣ ಸಂಕರದ ಮಾಹಿತಿ ನೀಡುತ್ತದೆ.

ಹನ್ನೊಂದನೆಯ ಅಧ್ಯಾಯದಲ್ಲಿ ಪಾಪ ಮತ್ತು ಪ್ರಾಯಶ್ಚಿತ್ತ ಈ ವಿಷಯವಿದೆ. ಅಪರಾಧ ಮತ್ತು ದಂಡ ಈ ವಿಷಯವು ಬೇರೆ; ಅದು ರಾಜನಿಗೆ ಮತ್ತು ನ್ಯಾಯಾಲ ಯಕ್ಕೆ ಸಂಬಂಧಿಸಿದ ಪಾಪ ಮತ್ತು ಪ್ರಾಯಶ್ಚಿತ್ತ ಈ ವಿಷಯವು ಬೇರೆ. ಪ್ರಾಯ

ಶ್ಚಿತ್ತದಿಂದ ಪಾಪಕ್ಷಾಲನೆಯಾಗದಿದ್ದರೆ ಮರಣಾನಂತರ ದಂಡವು ಸಿಗುತ್ತದೆ, ಹಾಗು ಅದು ದೈವೀ ಸ್ವರೂಪದ್ದಾಗಿರುತ್ತದೆ. ಹನ್ನೆರಡನೆಯ ಅಧ್ಯಾಯದಲ್ಲಿ ಮೂರು ಗುಣಗಳ ವೇದ ಪ್ರಶಂಸೆ, ಬೇರೆ-ಬೇರೆ ಪಾಪಯೋನಿಗಳಲ್ಲಿ ಜನ್ಮ ಮತ್ತು ವಿಷಯ ಸಂಗ್ರಹವಿದೆ. ಸಂಕ್ಷೇಪದಲ್ಲಿ ಇದೇ ಮನುಸ್ಮೃತಿಯ ರೂಪರೇಖೆಯಾಗಿದೆ.

ಲೋಕಮಾನ್ಯ, ರಾಜಮಾನ್ಯ ಮತ್ತು ಸರ್ವಪರಿಚಿತವಾಗಿರುವ ಮನುಸ್ಮೃತಿ ಸಂಹಿತೆಯು ಕುಲಕಭಟ್ಟನ ಭಾಷ್ಯೆಯೊಂದಿಗೆ ಸಂಲಗ್ನವಾಗಿಯೇ ಇರುತ್ತದೆ. ಎಲ್ಲ ಸ್ಮೃತಿ ಗ್ರಂಥಗಳಲ್ಲಿ ಮನುಸ್ಮೃತಿಯು ಸಂಹಿತೆ ಎಂಬ ಅರ್ಥದಲ್ಲಿ ಅತಿದೊಡ್ಡ ಸ್ಮೃತಿಯಾಗಿದೆ ಇಂದು ಉಪಲಬ್ಧವಿರುವ ಸ್ಮೃತಿಗ್ರಂಥಗಳಲ್ಲಿ ಎಲ್ಲಕ್ಕಿಂತ ಪ್ರಾಚೀನ ಸ್ಮೃತಿ ಗ್ರಂಥವೂ ಕೂಡ ಮನುವಿನದೇ ಆಗಿದೆ. ಆದರೆ ಇಂದು ನಮ್ಮೆದುರು ಇರುವ ಮನುಸ್ಮೃತಿ ಗ್ರಂಥಕ್ಕಿಂತ ಮೊದಲು ಧರ್ಮಶಾಸ್ತ್ರ ಗ್ರಂಥವೇ ಇರಲಿಲ್ಲ ಎಂದು ಅರ್ಥ ಮಾಡಬೇಕಾಗಿಲ್ಲ. ಕಲ್ಪದ ಭಾಗವಿರುವ ವಿವಿಧ ಧರ್ಮಸೂತ್ರಗಳಂತೂ ಆ ಪ್ರಾಚೀನ ಕಾಲವಲ್ಲಿ ಅಸ್ತಿತ್ವದಲ್ಲಿ ಇದ್ದೇ ಇದ್ದವು, ಇಂದಿನ ಸ್ಮೃತಿಗೆ ಸಮಾನತೆ ಇರುವ ಧರ್ಮಶಾಸ್ತ್ರ ಗ್ರಂಥಗಳೂ ಸಹ ಪತಂಜಲಿ ಪೂರ್ವದಲ್ಲಿ ಇದ್ದವು. ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಪೂರ್ವವೂ ಹೀಗೆ ಗ್ರಂಥಗಳಿರುವ ಸಂಭವವಿದೆ. ಇ.ಸ.ಪೂ. ನಾಲ್ಕನೆಯ ಶತಕಕ್ಕೆ ಪೂರ್ವದ ಅನೇಕ ಧರ್ಮಸೂತ್ರಗಳ ಪೈಕಿ ಕೆಲವು ಇಂದು ನಮಗೆ ಉಪಲಬ್ಧವಿವೆ. ಆದರೆ ಈ ಕಾಲಖಂಡದಲ್ಲಿನ ಸ್ಮೃತಿಸದೃಶ ಧರ್ಮಗ್ರಂಥಗಳು ನಮಗೆ ಉಪಲಬ್ಧವಿಲ್ಲ. ಉಪಲಬ್ಧವಿರುವ ಸ್ಮೃತಿ ವಾಙ್ಮಯದಲ್ಲಿ ಮನುಸ್ಮೃತಿಯು ಅತಿ ಪ್ರಾಚೀನವಾಗಿದೆ. ಹಿಂದೂ ಪರಂಪರೆಯಲ್ಲಿ ಮನುಸ್ಮೃತಿಯು ಪ್ರತಿಷ್ಠೆ, ಪೂಜ್ಯತೆ, ಮಾನ್ಯತೆ ಬಹಳ ದೊಡ್ಡದು. ಆದರೆ ಮನುಸ್ಮೃತಿ ಗ್ರಂಥವು ಯಾಜ್ಞವಲ್ಕ್ಯ ಸ್ಮೃತಿಯಂತೆ ಓರಣವಾಗಿಲ್ಲ. ಕೆಲವು ಅಧ್ಯಾಯಗಳು ಬಹಳ ಚಿಕ್ಕವು. ಉದಾಹರಣೆಗೆ ಮನುಸ್ಮೃತಿಯ ಆರನೆಯ ಅಧ್ಯಾಯವು ಎಲ್ಲಕ್ಕಿಂತ ಚಿಕ್ಕದು ಎಂದರೆ ಕೇವಲ ೯೭ ಶ್ಲೋಕಗಳದ್ದಾಗಿದೆ. ಕೆಲವು ಅಧ್ಯಾಯಗಳು ತುಂಬ ದೊಡ್ಡವು. ಉದಾಹರಣೆಗೆ ಎಂಟನೆಯ ಅಧ್ಯಾಯವು ೪೨೦ ಶ್ಲೋಕಗಳದ್ದಾಗಿದೆ. ಒಂದೇ ವಿಷಯವು ಮನುಸ್ಮೃತಿಯಲ್ಲಿ ಅನೇಕ ಸಲ ಪುನರುಕ್ತವಾಗುತ್ತದೆ ಕೆಲವು ಪ್ರಮಾಣದಲ್ಲಿ ಪುನರುಕ್ತಿಯೂ ಇದೆ (ಉದಾ : ೫/೧೬೪-೧೬೫ ಮತ್ತು ೯/೨೯-೩೦ ನೋಡಿ). ಅನೇಕ ವಿಷಯಗಳಲ್ಲಿ ಸಂದಿಗ್ಧತೆ ಇದೆ. ಕೆಲವು ಪ್ರಮಾಣದಲ್ಲಿ ವಿಸಂವಾದವೂ ಇದೆ. ಮನುಸ್ಮೃತಿಯು ಎಲ್ಲಕ್ಕಿಂತ ಪ್ರಾಚೀನ ಸ್ಮೃತಿಯಾಗಿರುವುದರಿಂದ ಅದರ ರಚನೆಯು ಹೀಗೆ ಶಿಥಿಲವಾಗಿದೆ ಎಂಬ ಅಂಶವು ಒಪ್ಪಿಗೆಯೂಗಲಿಕ್ಕಿಲ್ಲ. ಯಾಕೆಂದರೆ ಕೌಟಿಲೀಯ ಅರ್ಥಶಾಸ್ತ್ರವು ಮನುಶಾಸ್ತ್ರಕ್ಕಿಂತ ಹಳೆಯದಾಗಿವೆ, ಅಲ್ಲದೆ ಓರಣವೂ ಆಗಿದೆ; ಮತ್ತು ಧರ್ಮಸೂತ್ರಗಳೂ ಕೂಡ ಓರಣದಲ್ಲಿ ಕಡಿಮೆಯೇನಿಲ್ಲ. ಮನುಸ್ಮೃತಿಯಲ್ಲಿ ಕಂಡು

ಬರುವ ಶಿಥಿಲತೆಗೆ ಕಾರಣಗಳಿವೆ. ಆದರೆ ಪ್ರಾಚೀನತ್ವವು ಮಾತ್ರ ಆ ಕಾರಣವಲ್ಲ.

ಇಂದು ನಮ್ಮೆದುರು ಇರುವ ಮನುಸ್ಮೃತಿ ಗ್ರಂಥದ ಕಾಲ ಯಾವುದು ? ಇ. ಸ. ಎರಡು ನೂರರ ನಂತರದ ಹಿಂದೂ ಧರ್ಮಶಾಸ್ತ್ರಗಳ ಲೇಖಕರು ಮನುವಿಗೆ ಸರ್ವೋಚ್ಚ ಸ್ಥಾನ ನೀಡುತ್ತಾರೆಂದು ಕಾಣೆಯುವರು ತೋರಿಸಿಕೊಟ್ಟಿದ್ದಾರೆ. ಹಿಗಾಗಿ ಇಂದು ನಮ್ಮೆದುರು ಇರುವ ಗ್ರಂಥವು ಇ. ಸ. ಎರಡು ನೂರರ ಸುಮಾರಿನದು ಎಂದು ಹೇಳಲು ಅಡ್ಡಿಯಿಲ್ಲ. ಹೆಚ್ಚಿನ ಸಂಶೋಧಕರು ಇ. ಸ. ಪೂ. ೨೦೦ರಿಂದ ಇ.ಸ. ೨೦೦ ಈ ನಾಲ್ಕು ನೂರು ವರ್ಷಗಳ ಕಾಲವನ್ನು ಮನುಸ್ಮೃತಿಯ ಸಂಭಾವ್ಯ ಕಾಲವೆಂದು ಹೇಳುತ್ತಾರೆ. ಕೌಟಿಲ್ಯನ ಎದುರು ಮನುವಿನದೆಂದು ಇರುವ ಅಭಿಪ್ರಾಯಗಳು ಇಂದಿನ ಮನುಸ್ಮೃತಿಯಲ್ಲಿ ಕಂಡುಬರುವದಿಲ್ಲ. ಹಾಗಾಗಿ ಇಂದು ನಮ್ಮೆದುರು ಇರುವ ಗ್ರಂಥವು ಕೌಟಿಲ್ಯನೆದುರು ಇರಲಿಲ್ಲವೆನ್ನುವದು ಸ್ಪಷ್ಟ. ಶುಂಗ ಮನೆತನದ ಆಡಳಿತ ಕಾಲದಲ್ಲಿ ಪುನಃ ಮತ್ತೊಮ್ಮೆ ವೈದಿಕಧರ್ಮದ ಮಹತ್ವ ಬೆಳೆಯಿತು. ಇವರ ಮೇಲಿಂದ ಮನುಸ್ಮೃತಿಯನ್ನು ಇ. ಸ. ಪೂ. ೨೦೦ರ ನಂತರದ್ದೆಂದು ತಿಳಿಯಬೇಕಾಗುತ್ತದೆ. ಉಳಿದ ಸ್ಮೃತಿ ಗ್ರಂಥಗಳೊಂದಿಗೆ ತುಲನೆ ಮಾಡಿ ಮನುಸ್ಮೃತಿಯನ್ನು ಆ ಪೂರ್ವದ್ದು ಅಂದರೆ ಇ. ಸ. ೨೦೦ ರ ಮೊದಲಿನದೆಂದು ತೀರ್ಮಾನಿಸಬೇಕಾಗುತ್ತದೆ. ಈ ಪ್ರಕಾರ ಇ. ಸ. ಪೂ. ೨೦೦ ರಿಂದ ಇ. ಸ. ೨೦೦ರನ್ನು ಆ ಕಾಲವೆಂದು ನಿಶ್ಚಯಿಸುವ ಪದ್ಧತಿಯನ್ನು ಅನೇಕ ಅಭ್ಯಾಸಕರು ಅವಲಂಬಿಸಿದ್ದರೂ ನನಗೆ ಇದು ಅಷ್ಟೊಂದು ಯೋಗ್ಯವೆಂದು ಅನಿಸುವದಿಲ್ಲ. ಡಾ ಕೇತಕರರು ಇದಕ್ಕಿಂತ ಬೇರೆ ಪದ್ಧತಿಯಿಂದ ವಿಚಾರ ಮಾಡುತ್ತಾರೆ ಮತ್ತು ಕಾಲದ ಸಂಬಂಧದಲ್ಲಿ ಇದೇ ನಿರ್ಣಯಕ್ಕೆ ಬರುತ್ತಾರೆ. ಮನುಸ್ಮೃತಿಯಲ್ಲಿ ಇರುವ ಬೇರೆ–ಬೇರೆ ಸಾಮಾಜಿಕ ಉಲ್ಲೇಖಗಳ ತಪಾಸಣೆ ಮಾಡುತ್ತ ಡಾ. ಕೇತಕರರು ಇ. ಸ. ಮೂರನೆಯ ಶತಕದ ವರೆಗೆ ಬಂದಿದ್ದಾರೆ. ಸ್ಥೂಲಮಾನದಿಂದ ಈ ಗ್ರಂಥವು ಇ. ಸ. ೨೦೦ ಮತ್ತು ಇ. ಸ. ೩೦೦ ಈ ಕಾಲ ಖಂಡದ್ದೆಂದು ನನಗನ್ನಿಸುತ್ತದೆ. ಇ. ಸ. ೩೦೦ ರ ನಂತರ ಈ ಗ್ರಂಥದಲ್ಲಿ ಪ್ರಾಯಃ ಪ್ರಕ್ಷೇಪಗಳು ಆಗಿಲ್ಲ ಆದರೆ ಈ ಗ್ರಂಥವು ಇ. ಸ. ೨೦೦ರ ಮೊದಲಿನದೆಂದು ನನಗನಿಸುವದಿಲ್ಲ. ವ್ಯರ್ಥವಾಗಿ ಯಾವುದೊಂದು ಗ್ರಂಥವನ್ನು ಅಧಿಕ ಪ್ರಾಚೀನವೆಂದು ನಿರ್ಧರಿಸುವ ಪ್ರಯತ್ನವು ನಿರುಪಯೋಗಿಯಾಗಿರುತ್ತದೆ. ಶುಂಗ ಕಾಲದಲ್ಲಿ ವೈದಿಕ ಧರ್ಮದ ಮಹತ್ವವು ಪುನಃ ಒಮ್ಮೆ ಬೆಳೆಯಿತೆಂಬ ಪ್ರತಿಪಾದನೆಯಲ್ಲಿ ಅನೇಕ ಗೊಂದಲಗಳಿವೆ. ಒಂದರ ಮೇಲೆ ಇನ್ನೊಂದು ಅನುಮಾನ ಪಡುತ್ತ ಎಲ್ಲ ಅಂದಾಜು ಪುರಾವೆಗಳನ್ನು ಬಹಳ ಕಡಿಮೆ ಆಧಾರದ ಮೇಲೆ ರಚಿಸಿ ಶುಂಗ ಕಾಲದ ಮಹತ್ವವನ್ನು ಹೇಳುವದೆಲ್ಲ ನನಗೆ ವಿವಾದ್ಯವೆನಿಸುತ್ತದೆ.

ಬ್ರಿಟಿಶ್ ಆಡಳಿತದ ಅತಿ ಆರಂಭ ಕಾಲದಲ್ಲಿ ರಾಜ್ಯಕರ್ತರ ಲಕ್ಷ್ಯವು ಮನುಸ್ಮೃತಿಯತ್ತ ಹರಿದದ್ದು ಸ್ವಾಭಾವಿಕವೇ. ಹೊಸ ರಾಜ್ಯಕರ್ತರಿಗೆ ಭಾರತವನ್ನು ಆಳಬೇಕಾಗಿತ್ತು.

ಯಾರ ಮೇಲೆ ರಾಜ್ಯ ಮಾಡಬೇಕಾಗಿದೆಯೋ. ಅವರ ಪರಂಪರಾಗತ ಧರ್ಮದಲ್ಲಿ ಶಕ್ಯವಿದ್ದಷ್ಟು ಹಸ್ತಕ್ಷೇಪ ಆಗಬಾರದು ಮತ್ತು ಈ ಕಾರಣದಿಂದ ಅಪ್ರೀತಿ ಇರಬಾರದು ಎಂಬುದು ರಾಜ್ಯಸತ್ತೆಯು ಧರ್ಮದಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ಹೊಸ ವಿಚಾರಧಾರೆಯು ಇಂಗ್ಲಂಡಿನಲ್ಲಿ ಬಲವತ್ತರವಾದ ಕಾಲವಾಗಿತ್ತು. ಅಮೇರಿಕೆಯಲ್ಲಿನ ವಸಾಹತಿಗಳು ಧರ್ಮ ಸ್ವಾತಂತ್ರ್ಯದ ವಿಚಾರವನ್ನು ಜೋರು–ಜೋರಾಗಿ ಪ್ರತಿಪಾದಿಸಲು ಪ್ರಾರಂಭಿಸಿದಾಗ ಭಾರತದ ಒಂದು ಭಾಗವು ಈಸ್ಟ ಇಂಡಿಯಾ ಕಂಪನಿಯ ಆಧಿಪತ್ಯಕ್ಕೆ ಒಳಪಡತೊಡಗಿತ್ತು. ಇಂತಹ ಕಾಲದಲ್ಲಿ ತಾತ್ವಿಕ ನಿಲುವು ಮತ್ತು ವ್ಯಾವಹಾರಿಕ ಜಾಣತನವೆಂದು ಬ್ರಿಟಿಶ್ ರಾಜ್ಯಕರ್ತರು ಧರ್ಮದಲ್ಲಿ ಹಸ್ತಕ್ಷೇಪ ಮಾಡದಿರುವ ಧೋರಣೆಯನ್ನು ಸ್ವೀಕರಿಸಿದರೆ, ಅದನ್ನು ಸ್ವಾಭಾವಿಕವೆಂದೇ ತಿಳಿಯಬೇಕು. ಭಾರತೀಯ ಸಮಾಜಕ್ಕೆ ಭಾರತೀಯ ಪರಂಪರೆಯ ಕಾಯ್ದೆಯನ್ನೇ ಶಕ್ಯವಿದ್ದಷ್ಟು ಮಟ್ಟಿಗೆ ಜಾರಿಯಲ್ಲಿ ಇಡಬೇಕೆಂದಾದ ಮೇಲೆ ಹಿಂದುಗಳ ಕಾಯ್ದೆಯ ವಿಚಾರ ಮಾಡುವಾಗ ಮನುವಿನ ಉಲ್ಲೇಖ ಮೇಲಿಂದ ಮೇಲೆ ಆಗುವದು ಅಪರಿಹಾರ್ಯ. ಹೀಗಾಗಿ ಬಹಳ ಮೊದಲಿನಿಂದಲೇ ರಾಜ್ಯಕರ್ತರ ಲಕ್ಷ್ಯವು ಮನುಸ್ಮೃತಿಯ ಕಡೆ ಇತ್ತು. ಸರ್ ವಿಲಿಯಮ್ ಜೋನ್ಸನು ಇ.ಸ. ೧೭೯೪ ರಲ್ಲಿ ಮನುಸ್ಮೃತಿಯ ಇಂಗ್ಲಿಷ್ ಭಾಷಾಂತರವನ್ನು ಕಲಕತ್ತೆಯಿಂದ ಪ್ರಕಾಶಿತಗೊಳಿಸಿದಾಗ ಪುಣೆಯಲ್ಲಿ ಇನ್ನೂ ಪೇಶ್ವಾಯಿ ನಡೆದಿತ್ತು. ಸವಾಯಿ ಮಾಧವರಾವ ಪೇಶ್ವೆಯವರ ಮಗ್ಗುಲಲ್ಲಿ ಕುಳಿತು ನಾನಾ ಫಡಣವೀಸರು ರಾಜ್ಯ ಕಾರಭಾರವನ್ನು ನಡೆಸುತ್ತಿದ್ದರು. ಖರ್ಡಾ ಯುದ್ಧವು ಇನ್ನೂ ನಡೆದಿದ್ದಿಲ್ಲ. ಬ್ರಿಟಿಶರು ಮಾತ್ರ ಹೊಸದಾಗಿ ವಶಪಡಿಸಿಕೊಂಡ ಭಾರತೀಯ ಪ್ರದೇಶದಲ್ಲಿನ ನಾಗರಿ ಕಾಯ್ದೆಯ ಗಂಭೀರ ಚಿಂತನೆ ನಡೆಸಿದ್ದರು. ಬ್ರಿಟಿಶರು ಈ ಭಾಷಾಂತರದ ಪೂರ್ವದಲ್ಲಿಯೇ ಭಾರತೀಯರ ಪರಂಪರಾಗತ ಕಾಯ್ದೆಯ ಗಂಭೀರ ವಿಚಾರ ಮಾಡುವ ಹೊಣೆಯನ್ನು ಹೊತ್ತುಕೊಂಡಿದ್ದರು. ಮಹಾತ್ಮಾ ಜ್ಯೋತಿಬಾ ಫುಲೆಯವರು ಮನುಸ್ಮೃತಿಯ ಬಗ್ಗೆ ಮಾತನಾಡುವಾಗಲೆಲ್ಲ ಅವರ ದೃಷ್ಟಿಯಲ್ಲಿ ಇರುತ್ತಿದ್ದುದು ಈ ಜೋನ್ಸನ ಭಾಷಾಂತರವೇ. ಮಹಾತ್ಮಾ ಫುಲೆಯವರ ಕೆಲವು ಕಲ್ಪನೆಗಳ ಉದಯವು ಈ ಭಾಷಾಂತರದಲ್ಲಿ ನಮಗೆ ಕಾಣಸಿಗುತ್ತದೆ. ಅನಂತರ ಸುಮಾರು ಇಪ್ಪತ್ತು ವರ್ಷಗಳ ಮೇಲೆ ಅಂದರೆ ಇ.ಸ. ೧೮೧೩ ರಲ್ಲಿ ಕಲಕತ್ತೆಯಿಂದ ಮನುಸ್ಮೃತಿಯ ಮೂಲ ಸಂಹಿತೆಯು ಪ್ರಥಮತ: ಪ್ರಕಾಶಿತವಾಯಿತು. ಅನಂತರ ಮನುಸ್ಮೃತಿ ಅನೇಕ ಸಲ ಪ್ರಕಾಶಿತವಾಗಿದೆ. ಅದರ ಭಾಷಾಂತರವೂ ಅನೇಕ ಸಲ ಆಯಿತು. ನನಗೆ ತಿಳಿದಿರುವಂತೆ ಮನುಸ್ಮೃತಿಯ ಮೊದಲ ಮರಾಠಿ ಭಾಷಾಂತರವನ್ನು ಜನವರಿ ೧೮೭೭ ರಲ್ಲಿ ನಿರ್ಣಯ ಸಾಗರ ಪ್ರೆಸ್ಸು ಪ್ರಕಾಶಿತಗೊಳಿಸಿತು. ಈ ಭಾಷಾಂತರವು ಜನಾರ್ದನ ಮಹಾದೇವ ಗುರ್ಜರರು ಮಾಡಿದ್ದಾಗಿದೆ. ದಾತೆಯವರ ಗ್ರಂಥ

ಸೂಚಿಯಲ್ಲಿ ಈ ಗ್ರಂಥದ ಉಲ್ಲೇಖವು ಸದೋಷಪೂರ್ಣವಾಗಿದೆ. (ಈ ಭಾಷಾಂತರದ ಪ್ರತಿಯು ನಾಂದೇಡದಲ್ಲಿ ಉಪಲಬ್ಧವಿದೆ). ಕೇವಲ ಮರಾಠಿಯ ಮಟ್ಟಿಗೆ ವಿಚಾರಿಸುವದಾದರೆ ಆಚಾರ್ಯ ವಿ. ವಾ. ಬಾಪಟ ಶಾಸ್ತ್ರಿಯವರ ಇ. ಸ. ೧೯೦೭ ರಲ್ಲಿಯ ಮತ್ತು ಮಿರಜಕರ ಶಾಸ್ತ್ರಿಗಳ ಇ. ಸ. ೧೯೨೭ ರಲ್ಲಿಯ ಭಾಷಾಂತರಗಳನ್ನು ಮನುಸ್ಮೃತಿಯ ಪ್ರಮುಖ ಮರಾಠಿ ಭಾಷಾಂತರಗಳೆಂದು ತಿಳಿಯಬೇಕಾದೀತು. ಇತರ ಭಾಷಾಂತರಗಳು ಇವೆಯಾದರೂ ಅವು ಬಹಳ ಮಹತ್ವದ್ದಾಗಿಲ್ಲ.

ಇಂದು ನಮ್ಮೆದುರು ಇರುವ ಮನುಸ್ಮೃತಿ ಗ್ರಂಥವು 'ಮಾನವಧರ್ಮ ಶಾಸ್ತ್ರದ ಭೃಗುಪ್ರೋಕ್ತ ಸಂಹಿತೆ' ಎಂಬ ಸ್ವರೂಪದ್ದಾಗಿದೆ. ಇದರಲ್ಲಿಯ ಪ್ರತಿಯೊಂದು ಶಬ್ದವು ಮಹತ್ವದ್ದಾಗಿದೆ. ಮನುಸ್ಮೃತಿಯಲ್ಲಿ ಧರ್ಮಶಾಸ್ತ್ರಕಾರನೆಂದು ಯಾವ ಮನುವಿನ ಉಲ್ಲೇಖವಾಗಿದೆಯೋ ಅವನು ಮೊದಲನೆಯ ಮನು ಅಂದರೆ ಸ್ವಾಯಂಭುವ ಮನು; ಈ ಮನುವು ಕೃತ ಯುಗದ ಆರಂಭದ ಮನುವೆಂದು ತಿಳಿಯಲ್ಪಡುತ್ತಾನೆ. ಬ್ರಹ್ಮದೇವನು ವಿಶ್ವ-ನಿರ್ಮಾಣ ಮಾಡಿದ ನಂತರ ಈ ಮನುವನ್ನು ನಿರ್ಮಿಸಿದನು. ಉಳಿದ ಪ್ರಜೆ, ಅಂದರೆ ಪಶುಪಕ್ಷಿ ಮತ್ತು ಮಾನವ ಜಾತಿ ಇವು ಮನುವಿನ ನಂತರದವು. ಮನುಸ್ಮೃತಿಯಲ್ಲಿನ ಮನುವೆಂದರೆ ಸಾಕ್ಷಾತ್ ಬ್ರಹ್ಮದೇವನ ಪುತ್ರ, ಸರ್ ವಿಲಿಯಮ್ ಜೋನ್ಸನು ತನ್ನ ಭಾಷಾಂತರ ದಲ್ಲಿ 'ಮನು ದ ಸನ್ ಆಫ್ ಬ್ರಹ್ಮಾ' ಎಂದು ಮುದ್ದಾಮಾಗಿ ಉಲ್ಲೇಖಿಸಿದ್ದಾನೆ. ಈ ಸ್ವಾಯಂಭುವ ಮನುವಿಗೆ ಅವನ ತಂದೆಯಾದ ಬ್ರಹ್ಮದೇವನು ಧರ್ಮಶಾಸ್ತ್ರವನ್ನು ದಯಪಾಲಿಸಿದನು. ಮನು ಈ ಧರ್ಮಶಾಸ್ತ್ರವನ್ನು ಭೃಗುವಿಗೆ ಕಲಿಸಿದನು. ಮನುವಿನ ಆಜ್ಞೆಯ ಮೇರೆಗೆ ಭೃಗು ಈ ಧರ್ಮಶಾಸ್ತ್ರವನ್ನು ಋಷಿಗಳಿಗೆ ತಿಳಿಸಿಕೊಟ್ಟನು. ಭೃಗುಋಷಿಯು ಪ್ರತಿಪಾದಿಸಿದ ಈ ಸಂಹಿತೆ ಎಂದರೆ ನಮ್ಮೆದುರು ಮನುಸ್ಮೃತಿ; ಅಂತೆಯೇ ಮನುಸ್ಮೃತಿಗೆ ಭೃಗುಪ್ರೋಕ್ತ ಸಂಹಿತೆ ಎನ್ನುವದು. ಗ್ರಂಥದಲ್ಲಿ ಈ ಪದ್ಧತಿಯಿಂದಲೇ ಉಲ್ಲೇಖವು ಬಂದಿದೆ. ಬ್ರಹ್ಮದೇವನಿಂದ ಮನುವಿಗೆ, ಮನುವಿನಿಂದ ಭೃಗುವಿಗೆ, ಮತ್ತು ಭೃಗುವಿನಿಂದ ಋಷಿಗಳಿಗೆ ಈ ಧರ್ಮಶಾಸ್ತ್ರವು ಕೊಡಲ್ಪಟ್ಟಿದೆ. ಹೀಗಾಗಿ ಮಾನವ ಧರ್ಮಸೂತ್ರವೆಂಬ ಘಟ್ಟವೇ ಈ ಕ್ರಮದಲ್ಲಿ ಬರುವದಿಲ್ಲ. ಒಂದು ಮಾನವ ಧರ್ಮಸೂತ್ರವಿತ್ತು, ಅದರ ಮೇಲೆಯೇ ಆಧಾರಿತವಾದ ಮನುಸ್ಮೃತಿ ಇದು ಎಂಬ ಕಲ್ಪನೆಯ ತಿಳುವಳಿಕೆಯೇ ಮನುಸ್ಮೃತಿಯಲ್ಲಿ ಎಲ್ಲಿಯೂ ಕಂಡುಬರುವದಿಲ್ಲ. ಒಂದು ವೇಳೆ ಮನುಸ್ಮೃತಿಯನ್ನು ಪ್ರಮಾಣವೆಂದು ತಿಳಿಯುವದಾದರೆ ಈ ಗ್ರಂಥವು ಸತ್ಯಯುಗದ ಆರಂಭದ್ದೆಂದು ಸಿದ್ಧವಾಗಿದೆ ಮತ್ತು ಅದು ಆ ಕಾಲದಿಂದ ಕ್ರಮವಾಗಿ ತ್ರೇತಾ ದ್ವಾಪರ ಮತ್ತು ಕಲಿಯುಗಗಳಲ್ಲಿ ನಡೆದು ಬಂದಿದೆ ಎಂದು ಒಪ್ಪಬೇಕಾಗುತ್ತದೆ. ಮನುಸ್ಮೃತಿಯ ಈ ಹೇಳಿಕೆಯನ್ನು ಇಂದಿನ ಯಾವ ಅಭ್ಯಾಸಕನೂ ಒಪ್ಪಲಾರ. ಪರೀಕ್ಷಿತನು

ಸಿಂಹಾಸನವನ್ನೇರಿದಾಗ ಕಲಿಯುಗ ಪ್ರಾರಂಭವಾಯಿತು. ಅದಾದ ಅನೇಕ ಶತಕಗಳ ನಂತರ ಕಲಿಯುಗದಲ್ಲಿ ಚಾಣಕ್ಯ ಉರ್ಫ್ ಕೌಟಿಲ್ಯನು ಆಗಿ ಹೋದ; ಕೌಟಿಲ್ಯನ ನಂತರದ ಕಾಲದಲ್ಲಿ ಮನುಸ್ಮೃತಿ ಎಂಬ ಈ ಗ್ರಂಥವು ರಚಿಸಲ್ಪಟ್ಟಿದೆ. ಹಾಗಿರುವಾಗ ಇಂದು ನಮ್ಮೆದುರು ಇರುವ ಮನುಸ್ಮೃತಿ ಗ್ರಂಥವು ಭೃಗು ವಂಶೀಯ ಬ್ರಾಹ್ಮಣರಿಂದ ಸಂಕಲಿತ–ಸಂಗ್ರಹಿತವಾಗಿದೆ ಮತ್ತು ಈ ಕಾರ್ಯವು ಇ.ಸ.ದ. ಆರಂಭದ ನಂತರವೇ ಆಗಿದೆ. ಕೈ. ಸುಖಟಣಕರರ ಅಭಿಪ್ರಾಯವೂ ಕೂಡ ಇದೇ ಆಗಿದೆ.

ಸ್ಮೃತಿಯ ಭಾಷ್ಯಕಾರರು ಇಂದು ಮನುಸ್ಮೃತಿಯಲ್ಲಿ ಕಾಣಸಿಗದ ಅನೇಕಶ್ಲೋಕಗಳನ್ನು ಮನುವಿನ ಅಭಿಪ್ರಾಯಗಳೆಂದು ಉದ್ಧರಿಸಿರುವದು ಕಂಡು ಬರುತ್ತದೆ. ಪ್ರಾಚೀನರ ಮುಂದೆ ಇದ್ದ. ಮನುವಿನದೆಂದು ತಿಳಿಯಲ್ಪಟ್ಟ, ಅನೇಕ ಅಭಿಪ್ರಾಯಗಳು ಇಂದು ಮನುಸ್ಮೃತಿಯಲ್ಲಿ ಕಾಣುವದಿಲ್ಲ. ಈ ಸಮಸ್ಯೆಯು ಕೇವಲ ಕೌಟಿಲೀಯ ಅರ್ಥಶಾಸ್ತ್ರದ ಮಟ್ಟಿಗೆ ಮಾತ್ರ ಸೀಮಿತವಾಗಿಲ್ಲ. ಇ. ಸ. ಹತ್ತು–ಹನ್ನೊಂದನೆಯ ಶತಕದ ನಂತರದ ಭಾಷ್ಯಕಾರರೂ ಕೂಡ ಮನುವಿನ ಅಭಿಪ್ರಾಯಗಳೆಂದು ಉಲ್ಲೇಖಿಸುವ ಶ್ಲೋಕಗಳು ಇಂದು ಒಮ್ಮೊಮ್ಮೆ ಮನುಸ್ಮೃತಿಯಲ್ಲಿ ಕಾಣುವದಿಲ್ಲ. ಇದರ ಮೇಲಿಂದ ಎರಡು ಅನುಮಾನಗಳು ಉಂಟಾಗುತ್ತವೆ. ಮೊದಲನೆಯ ಅನುಮಾನವೆಂದರೆ, ಇಂದು ನಮ್ಮೆದುರು ಇರುವ ಮನುಸ್ಮೃತಿಯು ಹಳೆಯ ಮನುಸ್ಮೃತಿಗಿಂತ ಚಿಕ್ಕದು. ಇದನ್ನೊಂದು ವಿಲಕ್ಷಣ ಘಟನೆಯೆಂದು ತಿಳಿಯಬೇಕು. ಉತ್ತರಕಾಲೀನ ಪ್ರಕ್ಷೇಪಗಳಿಂದ ಗ್ರಂಥವು ಉಬ್ಬುತ್ತ, ದೊಡ್ಡದಾಗುತ್ತ ಹೋಗುತ್ತದೆ. ಆದರೆ ಕ್ರಮವಾಗಿ ಮೂಲದಲ್ಲಿಯ ಶ್ಲೋಕಗಳು ಸೋರಿ ಹೋಗುವದು ಭಾರತೀಯ ವಾಙ್ಮಯದಲ್ಲಿ ಪ್ರಾಯಃ ಆಗುವದಿಲ್ಲ. ಕೆಲವು ಅಭ್ಯಾಸಕರು ಮನುಸ್ಮೃತಿಯ ವಿಷಯದಲ್ಲಿ ಹೀಗೆಯೇ ಆಗಿದೆ ಎಂದು ತಿಳಿಯುತ್ತಾರೆ. ಧರ್ಮಕೋಶದ ಸಂಪಾದಕರು ಇದೇ ನಿಲುವನ್ನು ಹೊಂದಿದ್ದಾರೆ. ಬೇರೆ–ಬೇರೆ ಭಾಷ್ಯ ನಿಬಂಧಗಳಲ್ಲಿ ಮನುವಿನ ಅಭಿಪ್ರಾಯಗಳೆಂದು ಬಂದ ಮತ್ತು ಇಂದಿನ .ಮನುಸ್ಮೃತಿಯಲ್ಲಿ ಸಿಗದ ಶ್ಲೋಕಗಳ ಯಾದಿಯನ್ನೇ ಈ ಕೋಶ ಮಂಡಳ ನೀಡಿದೆ. ಈ ನಿಲುವನ್ನು ಸ್ವೀಕರಿಸುವದರಲ್ಲಿ ಕೆಲವು ಅಡಚಣೆಗಳಿವೆ. ಇಂದು ನಮ್ಮೆದುರು ಇರುವ ಮನು–ಸ್ಮೃತಿಯ ಸಂಹಿತೆಯು ಇ. ಸ. ೨೦೦ ರ ನಂತರ ಇದ್ದ ಹಾಗೆಯೇ ಇದೆ. ಅದರಲ್ಲಿ ಹೊಸದೇನೂ ಸೇರಿಲ್ಲ ಮತ್ತು ಏನೂ ಸೋರಿ ಹೋಗಿಲ್ಲ ಎಂಬ ವಿಚಾರವನ್ನು ಮಂಡಿಸಿದ ನಂತರ (ಇದು ಕಾಣೆಯವರ ಅಭಿಪ್ರಾಯ), ಹಳೆಯ ಮನುಸ್ಮೃತಿಯು ಇಂದಿನ ಮನುಸ್ಮೃತಿಗಿಂತ ದೊಡ್ಡದಿತ್ತು (ಇದು ಧರ್ಮಕೋಶಕಾರರ ಅಭಿಪ್ರಾಯ) ಎಂಬ ನಿಲುವಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವದು ಹೇಗೆ? ಇ. ಸ. ಹತ್ತನೆ

ಯ ಶತಮಾನದ ಭಾಷ್ಯಕಾರನು ಒಂದು ಶ್ಲೋಕವನ್ನು ಮನುವಿನ ಅಭಿಪ್ರಾಯ ವೆಂದು ಹೇಳುತ್ತಾನೆ. ಈ ಶ್ಲೋಕವು ಪತ್ತನೆಯ ಶತಮಾನದಲ್ಲಿ ಮನುಸ್ಮೃತಿಯಲ್ಲಿ ಇತ್ತು ಮತ್ತು ಹದಿನೆಂಟನೆಯ ಶತಮಾನದಲ್ಲಿ ಮನುಸ್ಮೃತಿಯಲ್ಲಿ ಇರಲಿಲ್ಲ ಎಂದು ನಾವು ಹೇಳುವವರಿದ್ದೇವೆಯೇ ? ಮನುಸ್ಮೃತಿಯ ಭಾಷ್ಯಕಾರರು ನೋಂದಣಿ ಮಾಡದ ಶ್ಲೋಕಗಳನ್ನು ಒಂದು ವೇಳೆ ಮನುಸ್ಮೃತಿಯ ಭಾಷ್ಯಕಾರರಲ್ಲದವರು ಮನುವಿನ ಅಭಿಪ್ರಾಯವೆಂದು ನೋಂದಾಯಿಸಿದರೆ, ಈ ಶ್ಲೋಕಗಳು ಮೂಲದಲ್ಲಿ ಇದ್ದವು. ಮತ್ತು ಅನಂತರ ಸೋರಿ ಹೋದವೆಂಬ ಧೋರಣೆಯನ್ನು ತಾಳುವದು ಬಹಳ ಅಪಾಯಕಾರಿಯಾಗಿದೆ. ಆದ್ದರಿಂದ ಹಳೆಯ ಮನುಸ್ಮೃತಿಯು ದೊಡ್ಡ ದಿತ್ತು ಎಂಬ ಅಭಿಪ್ರಾಯವನ್ನು ಮಾನ್ಯ ಮಾಡುವದು ಸಾಧ್ಯವಿಲ್ಲ.

ಓಗಾಗಿ ಎರಡನೆಯ ಅನುಮಾನದ ಕಡೆ ಗಮನ ಹರಿಸಬೇಕಾಗುತ್ತದೆ. ಎರಡನೆಯ ಅನುಮಾನವೆಂದರೆ ಶತಕಾನುಶತಕಗಳಿಂದ ಪರಂಪರೆಯಲ್ಲಿ ಮನುವಿನದೆಂದು ನಡೆದು ಬಂದ ಕೆಲವು ಶ್ಲೋಕಗಳು ಲೋಕ-ಪ್ರವಾಹದಲ್ಲಿ ಮೌಖಿಕ ಪರಂಪರೆಯಿಂದ ನಡೆದು ಬಂದವುಗಳಾಗಿವೆ. ಈ ಶ್ಲೋಕಗಳು ಒಂದೇ ವ್ಯಕ್ತಿಯವಾಗಿಲ್ಲ. ಒಂದೇ ಕಾಲಖಂಡದವಾಗಿಲ್ಲ. ಅಷ್ಟೇ ಅಲ್ಲ, ಒಂದೇ ಪ್ರಶ್ನೆಯ ಮೇಲೆ ಒಂದೇ ಒಂದು ರೀತಿಯ ನಿಲುವನ್ನು ತಾಳುವಂತಹವೂ ಆಗಿಲ್ಲ. ಒಂದೇ ವಿಚಾರದ ಮೇಲೆ ಭಿನ್ನ-ಭಿನ್ನ ನಿಲುವನ್ನು ಹೊಂದಿರುವ ಅನೇಕ ಶ್ಲೋಕಗಳು ಮನುವಿನ ಅಭಿಪ್ರಾಯ ಗಳೆಂದು ಪರಂಪರೆಯಲ್ಲಿ ಪ್ರವಾಹಿತವಾಗಿದ್ದವು. ಇವುಗಳಲ್ಲಿಯ ಕೆಲವು ಶ್ಲೋಕ ಗಳನ್ನು ಭೃಗುವಂಶೀಯರು ಏಕತ್ರಿತಗೊಳಿಸಿದರು, ಕ್ರಮಗೊಳಿಸಿದರು, ಅಲ್ಪ-ಸ್ವಲ್ಪ ತಮ್ಮದನ್ನೂ ಸೇರಿಸಿದರು. ಮತ್ತು ಇಂದಿನ ಮನುಸ್ಮೃತಿಯ ಸಂಹಿತೆಯು ಸಿದ್ಧವಾಯಿತು. ಈ ಸಂಗ್ರಹದ ಸಂಹಿತೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯು ಇ. ಸ. ೨೦೦ರ ಸುಮಾರಿಗೆ ಘಟಿಸಿದಂತೆ ಕಾಣುತ್ತದೆ.

ನಮ್ಮೆದುರು ಇರುವ ಮಹಾಭಾರತದ ಸಂಸ್ಕರಣವೂ ಸಹ ಭೃಗು ಪರಂಪರೆಯದೇ ಆಗಿದೆ. ಹಾಗಾಗಿ ಶಾಂತಿ ಮತ್ತು ಅನುಶಾಸನ ಪರ್ವದಲ್ಲಿ ಮನುಸ್ಮೃತಿಯಿಂದ ಬಹಳಷ್ಟನ್ನು ಎತ್ತಿಕೊಂಡದ್ದು ಕಂಡು ಬಂದರೆ ಅದನ್ನು ಸ್ವಾಭಾವಿಕ ಘಟನೆಯೆಂದೇ ತಿಳಿಯಬೇಕು. ಇದರಲ್ಲಿ ಆಶ್ಚರ್ಯವೆನಿಸುವ ಕಾರಣವಿಲ್ಲ ಈ ಭೃಗು-ಸಂಸ್ಕರಣದ ಅನೇಕ ವಿಧ ಪರಿಣಾಮಗಳನ್ನು ನಾವು ತಿಳಿದುಕೊಳ್ಳಬೇಕು. ಪ್ರಥಮವೆಂದರೆ, ಕೌಟಿಲ್ಯನೆದುರು ಇರುವ ಮಾನವೀಯ ಅಭಿಪ್ರಾಯಗಳು ಇಂದಿನ ಮನುಸ್ಮೃತಿ ಯಲ್ಲಿ ಕಂಡುಬರುವದಿಲ್ಲ. ಮನುವಿನ ಅನುಯಾಯಿಗಳ ಅಭಿಪ್ರಾಯದಲ್ಲಿ ಮೂರು ವಿದ್ಯೆಗಳಿವೆ. ಮಾನವೀಯ ಪರಂಪರೆಯ ಜನರು ಅನ್ವಿಕ್ಷಿಕಿ ವಿದ್ಯೆಯನ್ನು ತ್ರಯಿ ವಿದ್ಯೆಯ ಭಾಗವೆಂದು ತಿಳಿಯುತ್ತಾರೆ ಎಂದು ಕೌಟಿಲ್ಯನು ಹೇಳುತ್ತಾನೆ. ಕೌಟಿಲ್ಯನ

ಈ ಹೇಳಿಕೆಯನ್ನು ನಾವು ತಿಳಿದುಕೊಳ್ಳಬೇಕು. ಅನ್ವೀಕ್ಷಿಕಿ ಅರ್ಥಾತ್ ತರ್ಕಶಾಸ್ತ್ರವು ತ್ರಯಿ ವಿದ್ಯೆ ಅಂದರೆ ವೇದ ವಿದ್ಯೆಯ ಭಾಗವಾಗಿದೆ. ಅದು ಸ್ವತಂತ್ರ ವಿದ್ಯೆಯಾಗಿಲ್ಲ ಎನ್ನುವದು ಆ ಧೋರಣೆಯಾಗಿಲ್ಲ. ಧೋರಣೆಯಲ್ಲಿ ನಿಜವಾದ ಅರ್ಥವೇನೆಂದರೆ ಷಟ್ ದರ್ಶನಗಳಲ್ಲಿ ಗೌತಮನ ನ್ಯಾಯದರ್ಶನವಿದೆ. ಈ ದರ್ಶನವು ವೇದಪ್ರಾಮಾಣ್ಯವನ್ನು ಒಪ್ಪುತ್ತದೆ. ಮತ್ತು ಈಶ್ವರನೂ ಪ್ರಮಾಣವೆಂದು ತಿಳಿಯುತ್ತದೆ. ಈ ವೈದಿಕ ತರ್ಕಶಾಸ್ತ್ರವೆಂದರೆ ನಿಜವಾದ ತರ್ಕಶಾಸ್ತ್ರ ಮತ್ತು ನಿಜವಾದ ವಿದ್ಯೆಯಾಗಿದೆ. ಉಳಿದ ಅವೈದಿಕರ ತರ್ಕಶಾಸ್ತ್ರವು ವಿದ್ಯೆಯಲ್ಲ. ಯಾಕೆಂದರೆ ಅವೈದಿಕ ತರ್ಕಶಾಸ್ತ್ರವು ವೈದಿಕ ಅಭ್ಯಾಸದ ಭಾಗವಲ್ಲ. ಕೌಟಿಲ್ಯನು ಉಲ್ಲೇಖಿಸಿದ ಮನುವಿನ ಈ ಅಭಿಪ್ರಾಯವು ಇಂದು ಮನುಸ್ಮೃತಿಯಲ್ಲಿ ಕಾಣುವದಿಲ್ಲ. ಇಂದಿನ ಸಂಹಿತೆಯು ವಿದ್ಯೆಗಳು ನಾಲ್ಕು ಎಂದು ಹೇಳುತ್ತದೆ, ಮನುವಿನ ಅಭಿಪ್ರಾಯದಲ್ಲಿ ರಾಜನ ಪ್ರಧಾನ ಮಂಡಳದಲ್ಲಿ ೧೨ ಇರಬೇಕು ಎಂದು ಕೌಟಿಲ್ಯನು ಹೇಳುತ್ತಾನೆ. ಇಂದಿನ ಮನುಸ್ಮೃತಿಯಲ್ಲಿ ಪ್ರಧಾನ ಮಂಡಳವು ಏಳು ಅಥವಾ ಎಂಟು ಮಂತ್ರಿಗಳನ್ನು ಹೊಂದಿರಬೇಕು ಎಂಬ ಉಲ್ಲೇಖವಿದೆ (ಮನು ೭/೫೪). ಶಿವಾಜಿ ಮಹಾರಾಜರ ಅಷ್ಟ ಪ್ರಧಾನ ಮಂಡಳದ ಕಲ್ಪನೆಯ ಈ ಆಧಾರವನ್ನು ಸಂಶೋಧಕರು ಏಕೆ ನೋಂದಾಯಿಸುವದಿಲ್ಲವೋ ಯಾರಿಗೆ ಗೊತ್ತು? ಇದರ ಮೇಲಿಂದ ಕಂಡು ಬರುವದೇನೆಂದರೆ ಇ. ಸ. ಪೂ. ೪೦೦ರ ಮೊದಲು ಮನುವಿನದೆಂದು ಹೇಳಲಾಗುತ್ತಿದ್ದ ಅನೇಕ ಅಭಿಪ್ರಾಯಗಳ ಪೈಕಿ ಕೆಲವು ಇಂದಿನ ಮನುಸ್ಮೃತಿಯಲ್ಲಿ ಸಂಗ್ರಹಿತವಾಗಿವೆ; ಉಳಿದವು ಹಾಗೆಯೇ ಮೌಖಿಕ ಪರಂಪರೆಯಿಂದ ಪ್ರವಾಹಿತವಾಗುತ್ತ ಉಳಿದವು, ಈ ಮೌಖಿಕ ಪರಂಪರೆಯಲ್ಲಿನ ಅಭಿಪ್ರಾಯಗಳಲ್ಲಿ ಕೆಲವು ಸ್ಮರಣೆಯಲ್ಲಿ ಉಳಿದವು, ಕೆಲವು ವಿಸ್ಮೃತವಾದವು. ಕೆಲವು ಅಭಿಪ್ರಾಯಗಳು ಹೊಸತಾಗಿಯೇ ಮನುವಿನ ಹೆಸರಿನಲ್ಲಿ ಹೇಳಲ್ಪಡತೊಡಗಿದವು. ಪ್ರತಿಸಲವೂ ಮನುವಿನ ಅಭಿಪ್ರಾಯಗಳೆಂದು ಕೆಲವು ಶ್ಲೋಕಗಳು ಹೇಳಲ್ಪಡುತ್ತಿದ್ದವು. ಮನುವಿನ ಹೆಸರಿಗೆ ಪೂಜ್ಯತೆ ಮತ್ತು ಪ್ರತಿಷ್ಠೆ ಇತ್ತು. ಇವುಗಳಲ್ಲಿನ ತಮಗೆ ಒಪ್ಪಿಗೆಯಾದ ಶ್ಲೋಕಗಳು ಮನುಸ್ಮೃತಿಯಲ್ಲಿ ಇದ್ದಿರಲಿ ಬಿಡಲಿ, ಭಾಷ್ಯಕಾರರು ಅವುಗಳನ್ನು ಸ್ವಸಮರ್ಥನೆಗಾಗಿ ಉದ್ಧರಿಸಿದರು. ನೂರಾರು ವರ್ಷಗಳಿಂದ ಮನು ಸಮಾಜದಲ್ಲಿ ಪೂಜ್ಯನಾಗಿದ್ದಾನೆ. ತಮಗೆ ಒಪ್ಪಿಗೆಯಾಗುವ, ಸೇರುವ ಮತ್ತು ಸಮಾಜದಲ್ಲಿ ರೂಢವಿರುವ ಅಭಿಪ್ರಾಯಗಳಂತೂ ಮನುವಿನ ಹೆಸರಿನಲ್ಲಿ ಹೇಳಲ್ಪಡುವವೇ. ಈ ಅಭಿಪ್ರಾಯಗಳು ಯಾವಾಗಲೂ ಮನುಸ್ಮೃತಿಯಲ್ಲಿ ಸಿಕ್ಕೇ ಬಿಡುವವೆಂದು ನಂಬುವ ಕಾರಣವಿಲ್ಲ.

(ಮುಂದುವರಿಯುವುದು)

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವ್ಯಾಪಕ ಕಾರ್ಯಕ್ರಮ

ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ, ಕೈಮಗ್ಗ ಮತ್ತು ಕರ ಕುಶಲ ಕೈಗಾರಿಕೋದ್ಯಮಗಳ ಅಭಿವೃದ್ಧಿಗಾಗಿ ಹೊಸ ಉತ್ತೇಜಕ ವಾತಾವರಣ ಕಲ್ಪಿತವಾಗಿದೆ.

೧೯೮೪-೮೫ನೇ ಸಾಲಿಗಾಗಿ ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಅನೇಕ ಆಶಾದಾಯಕವಾದ ಹೊಸ ಯೋಜನೆಗಳನ್ನು ರೂಪಿಸಲಾಗಿದೆ.

ಈ ಯೋಜನೆಗಳು, ಆಸಕ್ತ ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ಸಹಾಯ ಮತ್ತು ತಾಂತ್ರಿಕ ಜ್ಞಾನವನ್ನು ಸಹ ಒದಗಿಸುತ್ತವೆ.

ಈ ಯೋಜನೆಗಳು :—

೧. ೧೯೮೫ನೇ ಡಿಸೆಂಬರ ತಿಂಗಳ ವೇಳೆಗೆ ೩೭ ಕೋಟಿ ರೂ.ವೆಚ್ಚದಲ್ಲಿ ೧೫೧೦ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗವುದು. ಕಳೆದ ೨೦ ವರ್ಷಗಳಲ್ಲಿ ೧೨೦ ಕೋಟಿ ರೂ. ವೆಚ್ಚದಲ್ಲಿ ೨೦೦೦ ಕೈಗಾರಿಕಾ ಷೆಡ್ಡುಗಳನ್ನು ಮಾತ್ರ ನಿರ್ಮಿಸಲಾಗಿತ್ತು.

೨. ಔಷಧಿಗಳು, ಚರ್ಮ ಮತ್ತು ಕೈಗಾರಿಕಾ ಸಲಕರಣೆಗಳು ಮುಂತಾದವು ಗಳಿಗೆ ಸಕ್ರೀಯ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.

೩. ಸಣ್ಣ ಕೈಗಾರಿಕೆಗಳ ಮಾರಾಟ ನಿಗಮದ ನಿರ್ಮಾಣ.

೪. ಕೈಮಗ್ಗ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

೫. ರಾಜ್ಯದ ನಾರು ಅಭಿವೃದ್ಧಿ ಸ್ಥಾಪನೆ.

೬. ಚರ್ಮ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

೭. ಪ್ರಾಥಮಿಕ ಸಹಕಾರಿ ಕೈಮಗ್ಗ ಸಂಘಗಳ ಎಲ್ಲ ನೇಕಾರ ಸದಸ್ಯರು ಗಳಿಗೂ ಈಗ ಅನ್ವಯವಾಗುತ್ತಿರುವ ಉಳಿತಾಯ ಕಾಣಿಕೆ ನಿಧಿ ಯೋಜನೆಯನ್ನು (Contributory thrift fund scheme) ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸುವುದು.

೮. ವಿದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರಿಗಾಗಿಯೇ ಪ್ರತ್ಯೇಕ ಕೈಗಾರಿಕಾ ವಲಯಗಳ ಅಭಿವೃದ್ಧಿ.

ಕರ್ನಾಟಕ ವಾರ್ತೆ

ಅಕ್ಟೋಬರ ೧೯೮೪

DEVU PATTAR GUTTIPETH, SHAHAPUR-585223

ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರರಿಗೆ ಸಹಾಯ ಸೌಲಭ್ಯಗಳು

ನಮ್ಮ ನಾಡಿನ ಅರ್ಥವ್ಯವಸ್ಥೆಯಲ್ಲಿ ಕೃಷಿಯ ನಂತರ ನೇಕಾರಿಕೆಗೆ ವಿಶೇಷ ಸ್ಥಾನ. ನಿರುದ್ಯೋಗ ನಿವಾರಣೆಯಲ್ಲಿ ಅದರ ಪಾತ್ರ ಗಮನೀಯ. ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರರ ಸ್ಥಿತಿಗತಿಗಳನ್ನು ಅರಿತ ಸರಕಾರ ಅವರ ಏಳಿಗೆಗೆ ನೆರವಾಗಿದೆ.

ಕೈಮಗ್ಗ ನೇಕಾರ ಸಂಘಗಳಿಗೆ ಷೇರುಧನ ಹಾಗೂ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ೫,೦೦೦ ರೂ.ಗಳಿಂದ ೫೦,೦೦೦ ರೂ ವರೆಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ.

ನೇಯ್ಗೆ ಆಧುನೀಕರಣ ಯೋಜನೆಯನ್ವಯ ಸುಧಾರಿತ ಮಗ್ಗಗಳನ್ನು ಹಾಗೂ ಉಪಕರಣಗಳನ್ನು ಕೊಳ್ಳಲು ಶೇಕಡ ೭೫ ರಷ್ಟು ಆರ್ಥಿಕ ಸಹಾಯ ನೀಡಲಾಗುತ್ತಿದೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಅಪೆಕ್ಸ ಬ್ಯಾಂಕುಗಳ ಮೂಲಕ ರಿಯಾಯಿತಿ ಬಡ್ಡಿ ದರದಲ್ಲಿ ಸಹಾಯ ಧನ ನೀಡಲಾಗುತ್ತಿದೆ.

ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರ ಉದ್ಯಮಿಗಳಿಗೆ ನೇಕಾರ ಸಂಘಗಳಿದ್ದು ಅವು ನೇಯ್ಗೆ ವಸ್ತುಗಳ ಸಂಗ್ರಹಣೆ ಮತ್ತು ಮಾರಾಟ ವ್ಯವಸ್ಥೆ ಮಾಡುತ್ತಿವೆ.

ಪ್ರತಿ ಕೈಮಗ್ಗ ನೇಕಾರರ ಕ್ಷೇಮಕ್ಕಾಗಿ ಕೈಮಗ್ಗ ನಿಗಮವು ಹೆಚ್ಚಿನ ಅಭಿವೃದ್ಧಿ ಯೋಜನೆ ಕೈಗೊಂಡಿದೆ.

ಏಳನೇ ತರಗತಿವರೆಗೂ ಶಿಕ್ಷಣ ಪಡೆದಿರುವ ನೇಕಾರರಿಗೆ ನೇಯ್ಗೆ ಹಾಗೂ ವಿನ್ಯಾಸದಲ್ಲಿ ತರಬೇತಿ ನೀಡಲಾಗುವುದು. ತರಬೇತಿ ವೇಳೆಯಲ್ಲಿ ಪ್ರತಿ ತಿಂಗಳು ೨೦೦ ರೂ. ಶಿಷ್ಯವೇತನವನ್ನು ಕೊಡಲಾಗುತ್ತಿದೆ.

ಎಸ್. ಎಸ್. ಎಲ್. ಸಿ. ವರೆಗೆ ಅಭ್ಯಸಿಸಿರುವ ನೇಕಾರರಿಗೆ ವಿಶೇಷ ತಾಂತ್ರಿಕ ಜ್ಞಾನ ನೀಡಲು ಮೂರು ವರ್ಷಗಳ ತರಬೇತಿ ವ್ಯವಸ್ಥೆ ಮಾಡಲಾಗುತ್ತಿದೆ. ಈ ತರಬೇತಿ ಅವಧಿಯಲ್ಲಿ ಪ್ರಥಮ ವರ್ಷ ೧೫೦ ರೂ; ದ್ವಿತೀಯ ವರ್ಷ ೧೭೫ ರೂ. ಹಾಗೂ ತೃತೀಯ ವರ್ಷ ೨೦೦ ರೂ. ಮಾಸಿಕ ವೇತನ ನೀಡಲಾಗುತ್ತಿದೆ.

ಹರಿಜನ, ಗಿರಿಜನ ನೇಕಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಹತ್ತಿ ಕೈಮಗ್ಗ ಅಭಿವೃದ್ಧಿಗಾಗಿ ೬ ಕೋಟಿ ರೂ. ವೆಚ್ಚದ ಮೂರು ಹೊಸ ಯೋಜನೆಗಳನ್ನು, ಉಣ್ಣೆ ನೇಕಾರರ ಏಳಿಗೆಗಾಗಿ ೧.೫೦ ವೆಚ್ಚದ ತೀವ್ರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ, ತಾಲ್ಲೂಕು ಕೇಂದ್ರದಲ್ಲಿ ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬೇಕು.

ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಯಂತ್ರದಿಂದ ಬಟ್ಟೆಯನ್ನು ತಯಾರಿಸಿದ ನೇಕಾರರೇ ಸ್ವತಃ ಮಾರಾಟ ಮಾಡಬೇಕಾದಲ್ಲಿ, ಮೂಲತೆರಿಗೆ ಮತ್ತು ಸರ್‌ಚಾರ್ಜ ಗಳಿಂದ ಪೂರ್ಣ ವಿನಾಯಿತಿ ಇದೆ.

ಪ್ರಕಟಣೆ : – ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

ನವಂಬರ ೧೯೮೪

No. R. N. 29730/76 No. KRNG 97
Licenced to post without pre-payment
Licence No. WPP-31

ಡಿಸೆಂಬರ್ ೮೪-ಜನವರಿ ೮೫ ರ

ಸಂಕ್ರಮಣ : ೧೫೫-೧೫೬

- ‘ಭೂಮಿಗೀತ’ ದಲ್ಲಿ ಹಿಂಸೆ : ಡಾ। ಪೋಲಂಕಿ ರಾಮಮೂರ್ತಿ
- ಅಡಿಗರ ‘ಪ್ರಾರ್ಥನೆ’ ಕುರಿತು ಅನಿಸಿದ್ದು : ಕೆ. ಕೇಶವ ಶರ್ಮಾ
- ಜಾನಪದದ ತಡಕಾಟಕ್ಕೆ ಕೊನೆ ಇದೆಯೆ ?. ಡಾ.ಹಿ.ಶಿ.ರಾಮಚಂದ್ರೇಗೌಡ
- ಮಾಸ್ತಿ ಸಣ್ಣ ಕತೆಗಳ ಒಂದು ಅಧ್ಯಯನ : ರಾಜೇಂದ್ರ ಚೆನ್ನಿ
- ಕಾಲೇಜು ಕನ್ನಡ ಭಾಷಾಕ್ರಮ ಮತ್ತು ಪಠ್ಯಪುಸ್ತಕಗಳು : ಡಿ. ರಘುನಾಥರಾವ್
- ಮನುಸ್ಮೃತಿ–ಕೆಲ ವಿಚಾರಗಳು : ಪ್ರಾ. ನರಹರ ಕುರುಂದಕರ

ಅಲ್ಲದೆ

ರಾಜಶೇಖರ ನೀರಮಾನ್ವಿಯವರ ಸಣ್ಣಕತೆ, ಮನುಸ್ಮೃತಿ ಕುರಿತು ಶಂಬಾ ಪ್ರತಿಕ್ರಿಯೆ, ಚಂಪಾ ಸಂಪಾದಕೀಯಗಳು...

ಪ್ರಕಟವಾಗಲಿದೆ

ಅರವಿಂದ ಮಾಲಗತ್ತಿಯವರ ಎರಡನೇ ಸಂಕಲನ

ಕಪ್ಪು ಕಾವ್ಯ

ಪುಟ : ೫೫ ಬೆಲೆ : ೮ ರೂ

ಶೈಲ ಪ್ರಕಾಶನ, ಮುದ್ದೇಬಿಹಾಳ ೫೮೬೨೧೨

DEVU PATTAR
GUTTIPETH,
SHAHAPUR-585223

ಶುಭಾಶಯಗಳೊಂದಿಗೆ

ಬೆಲ್ಲದ ಆ್ಯಂಡ್ ಕಂಪನಿ

ಧಾರವಾಡ : ೫೮೦೦೦೧ ಹುಬ್ಬಳ್ಳಿ : ೫೮೦೦೨೧